ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 12 ಸಂಚಿಕೆ 45 ನವಂಬರ್ 11,1990 ರೂ.1.50

ದೆಹಲಿಯ ಬಾನಿನಲ್ಲಿ ರಣಹದ್ದುಗಳ ಮೇಳ

ದೇಶದ ರಾಜಧಾನಿ ದೆಹಲಿಯ ಮೇಲೆ ರಣಹದ್ದುಗಳು ಹಾರಾಡುತ್ತಿವೆ. ತೆರತೆರನ ರಣಹದ್ದುಗಳು ಅಲ್ಲಿ ಸಂತೆ ನೆರೆದಿವೆ. ಈ ಕೋಮುವಾದೀ ಗಿಡುಗಗಳ ಚೀರಾಟ ಜೊತೆಗೆ ಡೊಳ್ಳು ಹೊಟ್ಟೆಯವರ ಹಣದ ಥೈಲಿಗಳು ಝಣ ಝಣ ಸದ್ದು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಕೇಳುವಷ್ಟು ಗಟ್ಟಿಯಾಗಿದೆ. "ಕುರುಡು ಕಾಂಚಣ ಕುಣಿಯುತ್ತಲಿತ್ತೋ ಕಾಲಿಗೆ ಬಿದ್ದವರ ತುಳಿಯುತ್ತಲಿತ್ತೋ ಗುಡಿಯೊಳಗೆ ಗಣಣ ಮಹಡಿಯೊಳಗೆ ತನನ ನುಡಿಗೆಡುತ್ತಿತ್ತೋ" ಎನ್ನುವ ಕವಿವಾಣೀ ಭಾರತದ ಸಮಸ್ತ ಜನತೆಯ ವಾಣಿ ಮೊಳಗಬೇಕಾದ ಸಂಸದ್ ಭವನದಲ್ಲಿ ಜನತೆಯ ವಾಣಿಯನ್ನು ಮುಳುಗಿಸುವಂತೆ ಹದ್ದುಗಳ ಚೀತ್ಕಾರ ಹಣದ ಝಣತ್ಕಾರ ಮೊಳಗಿದೆ . ಲೋಕಸಭೆಯಲ್ಲಿಯೇ ವಿ.ಪಿ.ಸಿಂಗ್‌ರವರು ನೇರವಾಗಿ ಒಗೆದಂತೆ- ಕೋಮುವಾದಿಗಳ - -ಅಧಿಕಾರ ಹಿಡಿಯುವುದೊಂದೇ ಗುರಿಯಾಗಿರುವ ಹಿಂದೂ ಕೋಮುವಾದಿಗಳ ಅವರ ಪಕ್ಷದ ಆಟವಿದು. ಜೊತೆಗೆ ಕಲ್ಕತ್ತಾ-ಬಾಂಬೆ ಬಂಡವಾಳಶಾಹಿಗಳ ಆಟವಿದು. ಜನತಾದಳ(ಸಮಾಜವಾದಿ) ಎಂದು ಹೆಸರಾಂತಿರುವ ಮೇಳಕ್ಕೆ ಎಂ.ಪಿ.ಗಳನ್ನು ಕೊಳ್ಳಲು ಹಣದ ಹೊಳೆಯೇ ಹರಿದಿದೆ. ಇನ್ನು ಹರಿಯುತ್ತಲೇ ಇದೆ.

ರಾಷ್ಟ್ರೀಯ ರಂಗ ಸರ್ಕಾರ ಅಧಿಕಾರಕ್ಕೆ ಬರುವ ಮೊದಲೇ ವಿ.ಪಿ.ಸಿಂಗ್ ಪ್ರಧಾನಿಯಾಗಬಾರದೆಂದು ರಾಜೀವ್‌ಗಾಂಧಿಯವರ ಕಟ್ಟಾ ಬೆಂಬಲಿಗನೇ ಆಗಿ ಅವರಿಂದ ನೂರಾರು ಕೋಟಿರೂಗಳ ಸವಲತ್ತು ಪಡೆಯುತ್ತಿದ್ದ ಅಂಬಾನಿ ಬಳಗ ತನ್ನ ತೀವ್ರಪ್ರಯತ್ನ ಮಾಡಿತ್ತು ಮತ್ತು ದೇವಿಲಾಲ್‌ರವರಿಗೆ ಅಧಿಕಾರದ ಮತ್ತು ನೆತ್ತಿಗೇರುವಂತೆ ಮಾಡಲು ಚಂದ್ರಶೇಖರ್. ಚಂದ್ರಸ್ವಾಮಿ (ರಾಜಕೀಯದಲ್ಲಿಯೇ ದಿನನಿತ್ಯ ಮುಳುಗಿರುವ ಸ್ವಾಮಿ ಸೋಗಿನ ಸಾಮ್ರಾಜ್ಯಶಾಹಿಗಳ ಏಜೆಂಟ್) ಹಾಗೂ ಸುಬ್ರಮಣಿಯನ್ ಸ್ವಾಮಿಗಳ ಕುತಂತ್ರಸಾಗಿತ್ತು ಎಂಬುದೆಲ್ಲರಿಗೂ ಗೊತ್ತಿದ್ದ ಸಂಗತಿ. ಈಗಂತೂ ಈ ಗುಂಪಿನ ಆಟಕ್ಕೆ ಮತ್ತೆ ಯಾವ ಯಾವ ಬಂಡವಾಳದ ಬಲ ಸಿಕ್ಕಿದೆಯೋ? ಜನ ಆರಿಸಿದ್ದು ಕಾಂಗ್ರೆ ವಿರೋಧಿ ಸರ್ಕಾರವನ್ನು ಬಯಸಿದ್ದು ಪ್ರಧಾನಿಯಾಗಿ ವಿ.ಪಿ.ಸಿಂಗ್‌ರವರನ್ನು. ಅವರೊಂದಿಗೇ ಗುಂಜಾಡಿ ಸೀಟು ಪಡೆದ ಬಿಜೆಪಿ ಬೇಷರತ್ ಬೆಂಬಲ ನೀಡುವನೆಂದು 5 ವರ್ಷಗಳವರೆಗೆ ಸರ್ಕಾರ ಸ್ಥಿರವಾಗಿ ಉಳಿಯಲು ಸಹಾಯ ಮಾಡುವನೆಂದು ಜನತೆಯ ಮುಂದೆ ವಚನವಿತ್ತ ಬಿಜೆಪಿ ಸಂವಿಧಾನವನ್ನು ರಕ್ಷಿಸುವೆನೆಂದು ಪ್ರಮಾಣವಚನ ಸ್ವೀಕರಿಸಿದ ಬಿಜೆ.ಪಿ. ಈ ಜನತೆಯ ಈ ಮಹಾನ್ ಇಚ್ಛೆಗೆ ದ್ರೋಹ ಬಗೆಯಿತು. ಸತ್ಯವಾಕ್ಯಪರಿಪಾಲಕನೆಂದು ಅನುದಿನವೂ ರಾಮಭಜನೆ ಮಾಡುವರೆಲ್ಲಾ ಅವನ ಹೆಸರಿನವರೆಲ್ಲಾ ವಚನ ಭ್ರಷ್ಟರಾದರು.

ಜನತೆಯ ಈ ಮಹಾನ್ ಬಯಕೆಯನ್ನು ಹಣದ ಥೈಲಿಗಳು ಅದರ ವಿರುದ್ಧ ತಿರುಗಿಸಿದರು. ಕಾಂಗ್ರೆ ಬೇಡವೆಂದ ಜನಕ್ಕೆ ಕಾಂಗ್ರೆನ ಅಡಿಯಾಳಾದರೆ ಮಾತ್ರ ಬದುಕಬಹುದಾದ ಸರ್ಕಾರವನ್ನು ಸ್ಥಾಪಿಸುವ ಕೆಲಸ ನಡೆಸಿದರು. ವಿ.ಪಿ.ಸಿಂಗ್ ಪ್ರಧಾನಿಯಾಗಿರಬೇಕೆಂದ ಜನಕ್ಕೆ ಅವರನ್ನು ಬಿಟ್ಟು ಬೇರೆಲ್ಲರನ್ನೂ ಪ್ರಧಾನಿ ಮಾಡುವ ಯೋಜನೆಗಳನ್ನು ಹೂಡಿದರು.

ಸ್ವಾತಂತ್ರ್ಯ ಚಳುವಳಿಯ ಏಕೈಕ ವಾರಸುದಾರನೆಂದು ಬೀಗುವ ಕಾಂಗ್ರೆಸ್ ಕೇವಲ ಅಧಿಕಾರದಾಸೆಗಾಗಿ ಸ್ವಾತಂತ್ರ್ಯ ಚಳುವಳಿಯ ಜಾತ್ಯಾತೀತ ಸ್ವರೂಪಕ್ಕೆ ಕೈಕೊಡುವ ತಮ್ಮ ಪಕ್ಷವೇ ಬರೆದ ಸಂವಿಧಾನದ ಮುಖ್ಯ ಪ್ರಾಣವಾದ ಜಾತ್ಯಾತೀತತೆಯನ್ನೇ ಕೈಬಿಡುವ ಪ್ರಯತ್ನ ಮಾಡಿದರು. ಕೇವಲ ಅಧಿಕಾರಕ್ಕಾಗಿ ಬಡಿದಾಡುತ್ತಿರುವ ಅದಕ್ಕಾಗಿ ಎಲ್ಲ ತತ್ವಗಳ ಎಲ್ಲೆ ಮೀರಿರುವ ಚಂದ್ರಶೇಖರ್ ದೇವೀಲಾಲ್‌ಗಳ ಸಂದರ್ಭ ಸಾಧಕತನಕ್ಕೆ ತಮ್ಮ ಸಂದರ್ಭಸಾಧಕತನವನ್ನು ಒತ್ತಾಸೆಯಾಗಿ ಜೋಡಿಸಿದರು.ಒಂದೆಡೆ ಕೋಮುವಾದಿಗಳ ಕ್ರೂರದಾಹ ಮತ್ತೊಂದೆಡೆ ಸಂದರ್ಭಸಾಧಕರ ಲಜ್ಜೆಗೇಡಿತನ ಭಾರತದ ಪ್ರಜಾಪ್ರಭುತ್ವವನ್ನು ಅಪಹಾಸ್ಯಕ್ಕೆ ಗುರಿಮಾಡಿದೆ. ರಾಷ್ಟ್ರದ ಜೀವ ಜೀವಾಳದ ಐಕ್ಯತೆಗೆ ಕೊಡಲಿಪೆಟ್ಟು ಹಾಕಿದೆ.

ಭಾರತದ ಪ್ರಜಾಪ್ರಭುತ್ವದ ಅಪಹಾಸ್ಯವೆಂದರೆ ಭಾರತದ ಮತದಾರ ಜನರೆಲ್ಲರ ಅಪಹಾಸ್ಯ ಭಾರತ ಜನತೆಯ ಐಕ್ಯತೆಗೆ ಕೊಡಲಿಪೆಟ್ಟೆಂದರೆ ಜನತೆಯ ಬದುಕಿಗೇ ಆಪತ್ತು.

ಶತಶತಮಾನಗಳಿಂದ ಭಾರತದ ಜನತೆಯ ಮುಗ್ಧ ಭಕ್ತಿಯ ಮೇಲೆ ಸಿಗಿತಕ್ಕೆ ಸಿಕ್ಕ ದೇಹವಾಗಬಾರದು ನಮ್ಮ ದೇಶ ದುಡಿಯುವ ಜನರೆಲ್ಲರ ದುಡಿತದಿಂದ ಕೊಬ್ಬಿ ಬೆಳೆದಿರುವ ಬೊಜ್ಜು ಹೊಟ್ಟೆಗಳ ಆಟಕ್ಕೆ ದಾಳವಾಗಬಾರದು ನಮ್ಮ ಜೀವನ ಎಂಬುದರ ಬಗ್ಗೆ ಭಾರತದ ಜನತೆ ಎಚ್ಚರ ವಹಿಸಬೇಕು ಕಣ್ಣಿನ ಬೊಂಬೆಯಂತೆ ತಮ್ಮ ದೇಶದ ಐಕ್ಯತೆ ಜಾತ್ಯಾತೀತತೆಯನ್ನು ಕಾಪಾಡಬೇಕು.

ಕೋಮುವಾದಿ ಶಕ್ತಿಗಳ ಆಟಕ್ಕೆ ಮಣಿದ ಕಾಂಗ್ರೆ

ಕೇವಲ ಅಧಿಕಾರಕ್ಕಾಗಿ ಭಾರತವನ್ನು ಗಂಡಾಂತರಕ್ಕೊಯ್ದ ಬಿ.ಜೆ.ಪಿ. ರಥಯಾತ್ರೆ ಹಾಗೂ ಸಾವಿರಾರು ಜೀವಗಳನ್ನು ತಿಂದು ಮತ್ತಷ್ಟು ಧ್ವಂಸಕ್ಕೆ ಉದ್ಯುಕ್ತವಾದ ಕೋಮು ದಳ್ಳುರಿಯನ್ನು ದೇಶದೆಲ್ಲಾ ಜಾತ್ಯತೀತ ಶಕ್ತಿಗಳು ಒಂದಾಗಿ ಎದುರಿಸಬೇಕಾದ ಸಂದರ್ಭದಲ್ಲಿ, ದೇಶದ ಜಾತ್ಯತೀತ ಸ್ವರೂಪವನ್ನು ಐಕ್ಯತೆ ಸಮಗ್ರತೆಯನ್ನು ಕಾಯ್ದುಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ಬಿ.ಜೆ.ಪಿ. ವಿಶ್ವಹಿಂದು ಪರಿಷತ್ ಮೊದಲಾದ ಕೋಮುಶಕ್ತಿಗಳು ಎಸೆದ ಸವಾಲನ್ನು ಸ್ವೀಕರಿಸುವ ಬದಲಾಗಿ ಕಾಂಗ್ರೆ ಪಕ್ಷದ, ಜನತಾದಳದ ಒಂದು ವಿಭಾಗದ ಸಂದರ್ಭ ಸಾಧಕತನವನ್ನು ರಾಜ್ಯ ಕಾರ್ಯದರ್ಶಿ ಮಂಡಳಿ ಖಂಡಿಸಿದೆ. ರಾಷ್ಟ್ರೀಯ ರಂಗ ಸರ್ಕಾರದ ವಿರುದ್ಧ ಮತ ನೀಡುವ ಮೂಲಕ ರಾಷ್ಟ್ರದ ಹಿತದ ದೃಷ್ಟಿಯ ಬದಲಾಗಿ ತಮ್ಮ ಅಧಿಕಾರದಾಸೆಯ ಸ್ವಾರ್ಥವನ್ನು ಪ್ರದರ್ಶಿಸಿದುದರಿಂದ ಕೋಮುವಾದೀ ಶಕ್ತಿಗಳ ಆಟಕ್ಕೆ ಮಣಿದಂತಾಗಿದೆ ಎಂದು ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿಪ್ರಾಯ ಪಟ್ಟಿದೆ.

ಇದೇ ಶಕ್ತಿಗಳ ಪಿತೂರಿಯಿಂದ ಕರ್ನಾಟಕದಲ್ಲಿಯೂ ವ್ಯಾಪಕವಾಗಿ ಕೋಮು ಗಲಭೆ ಹಿಂಸಾಚಾರಗಳು ನಡೆದು ಇನ್ನೂ ಮುಂದುವರಿಯುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಶಾಂತಿಯನ್ನು ಕಾಪಾಡಲು ಎಡ ಹಾಗೂ ಜಾತ್ಯತೀತ ಶಕ್ತಿಗಳ ಒಕ್ಕೂಟ ಬೇಕೆಂದು ಹಾಗೂ ಕೋಮುವಾದಿ ಸಂದರ್ಭಸಾಧಕ ಶಕ್ತಿಗಳ ಸವಾಲನ್ನು ಎದುರಿಸುವ ಕ್ರಮಗಳನ್ನು ಕೈಗೊಳ್ಳಬೇಕೆಂದು ರಾಜ್ಯಕಾರ್ಯದರ್ಶಿಮಂಡಳಿ ಕರೆ ನೀಡಿದೆ.

ಸಮಾಜವಾದದ ಹಿರಿಮೆಯನ್ನು ಸ್ಥಾಪಿಸುವಲ್ಲಿ ಸೋವಿಯತ್ ಪ್ರಯತ್ನ ಯಶಸ್ವಿಯಾಗಲಿ

"ಭಾರತದ ಯೋಜನೆಗಳ ಪಿತ - ದಿವಂಗತ ಎಂ. ವಿಶ್ವೇಶ್ವರಯ್ಯನವರು - ಭಾರತದ ಯೋಜನೆಗಳ ಮೊದಲ ಉದ್ಗ್ರಂಥ ರಚಿಸಿದಾಗ ಅವರು ಯೋಜನೆಗಳನ್ನು ಕುರಿತಂತ ಸೋವಿಯತ್ ಅನುಭವಗಳನ್ನು ಬಹಳಷ್ಟು ಆಧರಿಸಿದ್ದರು ಎಂದು ಹೆಮ್ಮೆಯಿಂದ ನಾವೀಗ ನೆನೆಸಿಕೊಳ್ಳುತ್ತೇವೆ. ನಂತರ ಯೋಜನಾ ಪ್ರಕ್ರಿಯೆಯನ್ನು ಮುಂದಕ್ಕೆ ಬೆಳೆಸಿದ ಪ್ರಧಾನ ಮಂತ್ರಿ ನೆಹರೂ ಸೋವಿಯತ್ ತಜ್ಞರಿಂದ ನೆರವು ಪಡೆದರು. ಆದ್ದರಿಂದ ಭಾರತ ಮತ್ತು ತೃತೀಯ ಜಗತ್ತಿನ ಇತರ ದೇಶಗಳ ಜನರು ಸೋವಿಯತ್ ಒಕ್ಕೂಟಕ್ಕೆ ಬಹಳಷ್ಟು ಋಣಿಗಳಾಗಿದ್ದೇವೆ. ಏಕೆಂದರೆ ಒಂದು ಹಿಂದುಳಿದ ದೇಶ ಯೋಜನಾ ಪ್ರಕ್ರಿಯೆಯ ಮೂಲಕ ಹೀಗೆ ಒಂದು ಆಧುನಿಕ ಕೈಗಾರಿಕಾ ಆರ್ಥಿಕವನ್ನು ಬೆಳಸಬಹುದು ಎಂದು ತೋರಿಸಿಕೊಟ್ಟಿದೆ" ಎಂದು ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದರಿಪಾಡ್‌ರವರು ಹೇಳಿದ್ದಾರೆ.

> "ಕಳೆದ ಎರಡು ವರ್ಷಗಳಿಂದ ಸೋವಿಯತ್ ಸಮಾಜದಲ್ಲಿ ಬರುತ್ತಿರುವ ವಿಚಾರಗಳ ತಾಕಲಾಟ ಸೋವಿಯತ್ ಒಕ್ಕೂಟವನ್ನು ಮತ್ತಷ್ಟು ಬಲಗೊಳಿಸಿ ಸಮಾಜವಾದ ಮತ್ತು ಸಮಾಜವಾದದ ಪ್ರಗತಿಯಲ್ಲಿ ಅಡ್ಡ ಬರುವ ಆತಂಕಗಳನ್ನು ನಿವಾರಿಸಿಕೊಳ್ಳುವಲ್ಲಿ ನೆರವಾಗಲಿ" ಎಂದು ಇ.ಎಂ.ಎಸ್. ಸಿ.ಪಿ.ಐ. (ಎಂ) ನ ಶುಭ ಹಾರೈಕೆ ತಿಳಿಸಿದ್ದಾರೆ.

ನವಂಬರ್ 7 ರಂದು ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ73 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸೋವಿಯತ್ ಒಕ್ಕೂಟದ ಜನತೆಗೆ, ಮಹಾನ್ ಲೆನಿನ್ ವಾದೀ ಪಕ್ಷಕ್ಕೆ ಹಾರ್ದಿಕ ಶುಭಾಶಯ ಕೋರುತ್ತಾ ಪಕ್ಷದ ವಾರಪತ್ರಿಕೆ "ಪೀಪಲ್ಸ್ ಡೆಮಾಕ್ರಸಿ" ಬರೆದಿರುವ ಲೇಖನದಲ್ಲಿ ಹೀಗೆಂದಿದ್ದಾರೆ.

73 ವರ್ಷಗಳ ಹಿಂದೆ ಕಾರ್ಮಿಕ ವರ್ಗದ ಪ್ರಭುತ್ವ ಹೆಚ್ಚೆಚ್ಚು ಸ್ಥಳೀಯ ಹಾಗೂ ವಿಶ್ವಯುದ್ಧಗಳನ್ನು ಹುಟ್ಟಿಸಿ ವಿನಾಶ ಲೀಲೆ ನಡೆಸುತ್ತಿರುವ ಸಾಮ್ರಾಜ್ಯಶಾಹಿಗೆ ವಿರುದ್ಧವಾಗಿ ವಿಶ್ವಶಾಂತಿಯ ಪರಿಕಲ್ಪನೆಯನ್ನು ಮೊಟ್ಟಮೊದಲ ಬಾರಿಗೆ ಮುಂದಿಟ್ಟಿತು. ಈ ಮೂಲಕ ವಿಶ್ವ ಶಾಂತಿಯ ಪರಿಕಲ್ಪನೆಯನ್ನು ಮೊಟ್ಟ ಮೊದಲ ಬಾರಿಗೆ ಮುಂದಿಟ್ಟಿತು. ಈ ಮೂಲಕ ವಿಶ್ವಶಾಂತಿಯ ಹೊಸಯುಗವನ್ನೇ ಆರಂಭಿಸಿತು. ಇದನ್ನು ಸಹಿಸಲಾರದ ಅಂತರಾಷ್ಟ್ರೀಯ ಸಾಮ್ರಾಜ್ಯಶಾಹಿ ಆರಂಭದಲ್ಲೇ ಕಾರ್ಮಿಕರ ಪ್ರಭುತ್ವದ ಕತ್ತು ಹಿಸುಕಲು ತನ್ನ ಕೈಲಾದೆಲ್ಲಾ ಮಾಡಿತು. ಆಂತರಿಕ ಪ್ರತಿಗಾಮಿಗಳ ಮೂಲಕ ಅಂತಯುದ್ಧ ನಡೆಸಿತು. ಆದರೆ ಸಂಪೂರ್ಣ ವಿಫಲಗೊಂಡಿತು. ಈ ಹಿನ್ನೆಲೆಯಲ್ಲೇ ಶಾಂತಿಯುತ ಸಹ ಅಸ್ತಿತ್ವದ ಸಿದ್ಧಾಂತವನ್ನು ಲೆನಿನ್ ಪ್ರತಿಪಾದಿಸಿದರು. ಸಮಾಜವಾದಿಯಾಗಿ ಪರಿವರ್ತನೆಗೊಳ್ಳುವ ವಿಶ್ವದ ಒಂದು ಭಾಗದೊಂದಿಗೆ ವಿಶ್ವಬಂಡವಾಳಶಾಹಿ ಶಾಂತಿಯುತವಾಗಿ ಸಹ ಅಸ್ತಿತ್ವ ನಡೆಸ ಬೇಕಾದ, ಸ್ಪರ್ಧಿಸಬೇಕಾದ ಒಂದು ದೀರ್ಘ ಅವಧಿ ಆರಂಭವಾಗಲಿದೆ. ಆದ್ದರಿಂದ ವಿಶ್ವಸಮಾಜವಾದೀ ಕ್ರಾಂತಿಗೆ ತನ್ನ ಕೊಡುಗೆಯನ್ನು ನೀಡಲು ತಮ್ಮ ದೇಶದಲ್ಲಿ ಸಮಾಜವಾದವನ್ನು ಕಟ್ಟಿ ಸಮಾಜವಾದದ ಹಿರಿಮೆಯನ್ನು ಸೋವಿಯತ್ ಜನತೆ ಬಂಡವಾಳಶಾಹೀದೇಶಗಳ ಜನರಿಗೆ ತೋರಿಸಿಕೊಡಬೇಕು ಎಂದರು ಲೆನಿನ್.

ಆದರೆ ಈ ಶಾಂತಿಯುತ ಪ್ರಕ್ರಿಯೆಗೆ ಸಾಮ್ರಾಜ್ಯಶಾಹಿಗಳು ಅವಕಾಶ ಕೊಡಲಿಲ್ಲ ಎಂದು ತಮ್ಮ ಲೇಖನದಲ್ಲಿ ನೆನಪಿಸಿ ಕೊಡುತ್ತಾ ಕಾಂ. ಇ.ಎಂ.ಎಸ್. ಫ್ಯಾಸಿಸಂ - ವಿರೋಧಿ ಯುದ್ಧದಲ್ಲಿ ಸಮಾಜವಾದ ತನ್ನ ಶ್ರೇಷ್ಠತೆಯನ್ನು ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಮಿಲಿಟರಿ ದೃಷ್ಟಿ

ಪುಟ 8 ಕ್ಕೆ

ಲಾಭದಾಯಕ ಬೆಲೆ ಎಷ್ಟು? ಯಾರಿಗಾಗಿ?

1987ರಿಂದ ಆರಂಭವಾಗಿ ಕಳೆದ 3-4 ವರ್ಷಗಳಿಂದ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆಯ ಪ್ರಶ್ನೆ, ಇಡೀ ರೈತ ಸಮುದಾಯವನ್ನು ಒಗ್ಗೂಡಿಸುವ ಒಕ್ಕೊರಲಿನ ಬೇಡಿಕೆಯಾಗಿತ್ತು. ನಮ್ಮ ರಾಜ್ಯದಲ್ಲಿ ಮಲಪ್ರಭಾ ರೈತರ ಹೋರಾಟ ಮುಖ್ಯವಾಗಿ ಈ ಪ್ರಶ್ನೆಯ ಕುರಿತಾಗಿತ್ತು. ಆದ್ದರಿಂದ ಪ್ರಜಾಸತ್ತಾತ್ಮಕ ಹೋರಾಟಗಳ ಫಲವಾಗಿ ರಾಷ್ಟ್ರೀಯ ರಂಗ ಇದನ್ನು ಮುಖ್ಯ ವಿಷಯವಾಗಿ ಪರಿಗಣಿಸಿತು. ಅದರ ಚುನಾವಣಾ ಘೋಷಣೆಯಲ್ಲಿ "ಲಾಭದಾಯಕ ಬೆಲೆಗಳನ್ನು ರೈತರಿಗೆ ಕೊಡಿಸುವುದು, ಮತ್ತು ಕೃಷಿಗೆ ಬೇಕಾದ ಎಲ್ಲಾ ಸಾಮಗ್ರಿ ಸವಲತ್ತುಗಳನ್ನು ನ್ಯಾಯ ಬೆಲೆಯಲ್ಲಿ ಒದಗಿಸುವುದು, ಬೆಲೆಗಳನ್ನು ಕೃಷಿ ವೆಚ್ಚದ ಬಗ್ಗೆ ಕೃಷಿ ವೆಚ್ಚ ಮತ್ತು ಬೆಲೆಗಳ ಕಮಿಷನ್ ನಿರ್ಧರಿಸಿದ ಆಧಾರದ ಮೇಲೆ ನಿಗದಿಗೊಳಿಸುವುದು........" ರೈತರಿಗೆ ಭರವಸ ನೀಡಿತ್ತು.

ಈ ಚುನಾವಣಾ ಭರವಸೆಯ ಆಧಾರದ ಮೇಲೆ ಹೊಸ ಕೃಷಿ ನೀತಿಯನ್ನು ರಾಷ್ಟ್ರೀಯರಂಗ ಸರಕಾರ ವಿವಿಧ ವರ್ಗಗಳ ಜನತೆಯ ಜತೆ ಸಮಾಲೋಚಿಸಿ ತರುವುದು ಎಂಬ ನಿರೀಕ್ಷೆ-ಆಳುವ ವರ್ಗಗಳ ಒಳಗಿನ ಮತ್ತು ಲಾಭದಾಯಕ ಬೆಲೆ ಯಾರಿಗಾಗಿ ಎಂಬ ಬಗೆಗಿನ ತೀವ್ರ ಭಿನ್ನಾಭಿಪ್ರಾಯಗಳಿಂದಾಗಿ– ಹುಸಿಯಾಗಿದೆ. ಕೃಷಿ ನೀತಿಯನ್ನು ತಮ್ಮ ಹಿತಾಸಕ್ತಿಗಳಿಗೆ ಅನುಗುಣವಾಗಿ ರೂಪಿಸುವ ಭೂಮಾಲಿಕ ವರ್ಗಗಳ ಪ್ರಯತ್ನಕ್ಕೆ ಪ್ರತಿರೋಧ ಒಡ್ಡಲು ಈ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕ.

ಸರಕಾರ ಅಧಿಕಾರಕ್ಕೆ ಬಂದ ಹೊಸತರಲ್ಲೇ ಮೂರು ಉಚ್ಚ ಅಧಿಕಾರದ ಮೂರು ಸಮಿತಿಗಳನ್ನು ನೇಮಿಸಿತು. ಈ ಮೂರು ಸಮಿತಿಗಳೆಂದರೆ

1. ಹಿರಿಯ ಆರ್ಥಿಕ ತಜ್ಞ ಡಾ. ಸಿ.ಹೆಚ್. ಹನುಮಂತರಾವ್ ನಾಯಕತ್ವದಲ್ಲಿ ಕೃಷಿ ಉತ್ಪನ್ನಗಳ ಬೆಲೆ ನಿರ್ಧರಿಸುವ ವಿಧಾನ ಸಮೀಕ್ಷೆಗೆ ಪರಿಣಿತರ ಸಮಿತಿ.
2. ಮಹಾರಾಷ್ಟ್ರ ಶೇತ್ಕಾರಿ ಸಂಘಟನೆ ನಾಯಕ ಶರದ್ ಜೋಶಿಯವರ ನಾಯಕತ್ವದಲ್ಲಿ ಕೃಷಿ ಖಾತೆಗೆ ಸಲಹಾ ಸಮಿತಿ.
3. ಕರ್ನಾಟಕದ ಹಾಲಿ ರಾಜ್ಯಪಾಲ, 1977-79ರಲ್ಲಿ ಜನತಾ ಸರಕಾರದಲ್ಲಿ ಕೃಷಿ ಮಂತ್ರಿ ಶ್ರೀ ಭಾನುಪ್ರತಾಪ ಸಿಂಗ್‌ರ ನಾಯಕತ್ವದಲ್ಲಿ ಕೃಷಿ ನೀತಿ ಮತ್ತು ಕಾರ್ಯಕ್ರಮಗಳ ಬಗ್ಗೆ ಉಚ್ಚ ಅಧಿಕಾರದ ಸಮಿತಿ.

ಈ ಮೂರು ಸಮಿತಿಗಳು ಚುನಾವಣಾ ಭರವಸೆ, ಜನವರಿ 1ರ ಸರಕಾರದ ಹೇಳಿಕೆ, ರಾಷ್ಟ್ರಪತಿಯವರ ಭಾಷಣ,

> ಕರ್ನಾಟಕದ ಮೂಲೆಮೂಲೆಗಳಿಂದ ರೈತರ ಕಾಲ್ನಡಿಗೆ ಜಾಥಾ ಬೆಂಗಳೂರಿನತ್ತ ಸಾಗುವ ಮತ್ತು ಬೆಂಗಳೂರಿನಲ್ಲಿ ಬೃಹತ್ ಮೇಳವಾಗುವ ಹಿನ್ನೆಲೆಯಲ್ಲಿ ಕೃಷಿರಂಗದ ಜ್ವಲಂತ ಸಮಸ್ಯೆಗಳ ಬಗ್ಗೆ ವಿವಿಧ ಹೋರಾಟಗಳ ಬಗ್ಗೆ ಐಕ್ಯರಂಗ ಕೆಲವು ಲೇಖನ, ಹಾಡು ಮತ್ತಿತರ ಸಾಹಿತ್ಯವನ್ನು ಪ್ರಕಟಿಸಲಿದೆ. ಅದರಂಗವಾಗಿ ಲಾಭದಾಯಕ ಬೆಲೆ ಬಗ್ಗೆ ಒಂದು ಲೇಖನ.

ಎಂಟನೇ ಯೋಜನೆಯ ಕರಡು ನೀತಿ – ಮುಂತಾದವುಗಳಲ್ಲಿ ವಿವರಿಸಲಾದ ಕೃಷಿ ನೀತಿಗೆ ಜೀವ ತುಂಬುವುದೆಂದು ಆಶಿಸಲಾಗಿತ್ತು. ಆದರೆ ನಿಜವಾಗಿ ಆದದ್ದು ಬೇರೆ. ಡಾ.ಹನುಮಂತರಾವ್ ಸಮಿತಿ ಮಾತ್ರ ಈ ಕೃಷಿ ನೀತಿಯ ಆಧಾರದ ಮೇಲೇನೆ ತನ್ನ ಶಿಫಾರಸುಗಳನ್ನು ಮಂಡಿಸಿತು. ಆಗ ದೇವಿಲಾಲ್‌ರ ನಾಯಕತ್ವದಲ್ಲಿದ್ದ ಕೃಷಿ ಖಾತೆಗೆ ಇದು ಹಿಡಿಸಲಿಲ್ಲ. ಈ ಶಿಫಾರಸುಗಳನ್ನು, ಉಳಿದ ಎರಡು ಸಮಿತಿಗಳ ಶಿಫಾರಸುಗಳ ಆಧಾರದ ಮೇಲೆ ಪೂರ್ತಿಯಾಗಿ ಭೂಮಾಲಿಕ-ಪರ ನೀತಿಯಾಗಿ ಬದಲಾಯಿಸಲಾಯಿತು.

ಶರದ್ ಜೋಶಿ, ಮತ್ತು ಭಾನುಪ್ರತಾಪ್ ಸಿಂಗ್ ಸಮಿತಿಗಳು ಭೂಮಾಲಿಕ-ಪರ ವಕ್ತಾರರಾಗಿದ್ದು, ಈ ಮೇಲೆ ಹೇಳಿದ ನೀತಿಗಳಿಗೆ ವಿರುದ್ಧವಾಗಿ ಅವರ ನೀತಿಗಳು. ಬೆಲೆ ನಿರ್ಧಾರದ ನೀತಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಬಗೆಗಿನ ನೀತಿಯಲ್ಲಿ ಅವರ ನೀತಿಗಳು ರೈತರ ದೊಡ್ಡ ವಿಭಾಗಗಳ- ಸಣ್ಣ, ಬಡ ಮತ್ತು ಮಧ್ಯಮ ರೈತರ-ಹಿತಾಸಕ್ತಿಗಳಿಗೆ ವಿರುದ್ಧವಾದುದು.ಇದರ ಜೊತೆಗೆ ಭೂಮಾಲಿಕ ಲಾಬಿಯಿಂದ ಕೃಷಿಯನ್ನೂ ಕೈಗಾರಿಕೆಯಾಗಿ ಘೋಷಿಸಬೇಕೆಂಬ ಕೂಗು ಎದ್ದಿದೆ. ಇದು ನ್ಯಾಯವಾದುದೇ. ಆದರೆ ಈ ಲಾಬಿ ಪ್ರಕಾರ ಕೈಗಾರಿಕೆಗಳಿಗೆ ಲಾಗೂವಾಗುವ ಎಲ್ಲಾ ಕಾರ್ಮಿಕ ಕಾನೂನುಗಳು ಕನಿಷ್ಟ ಕೂಲಿ ಇತ್ಯಾದಿ ಆದಾಯ ತೆರಿಗೆ ಮುಂತಾದ ತೆರಿಗೆಗಳು ಕೃಷಿಗೆ ಲಾಗೂವಾಗಬಾರದಂತೆ.

ಕೃಷಿ ಬೆಲೆ ನಿರ್ಧರಿಸುವುದು ಹೇಗೆ?

ಕೃಷಿ ಬೆಲೆ ನಿರ್ಧರಿಸುವುದು ಕೃಷಿ ವೆಚ್ಚ ಮತ್ತು ಬೆಲೆಗಳ ಕಮಿಷನ್‌ನ ಜವಾಬ್ದಾರಿ. ಈ ಕಮಿಷನ್ ಪ್ರತಿಯೊಂದು ಕೃಷಿ ಉತ್ಪನ್ನ(ಬೆಳೆ)ದ ಸಮಗ್ರ ಆರ್ಥಿಕತೆಯನ್ನು ಗಮನಕ್ಕೆ ತೆಗೆದುಕೊಳ್ಳುವುದಲ್ಲದೆ, ಉಳಿದ ಹಲವು ವಿಷಯಗಳನ್ನು ಪರಿಶೀಲಿಸುತ್ತದೆ.

ಆದರೆ 70ರ ದಶಕದ ಹೊತ್ತಿಗೆ ಸರಕಾರಿ ಕೃಷಿ ಬೆಲೆ ನೀತಿ ರೈತರು ಕೈಗಾರಿಕೆಗೆ ಬೇಕಾದ ಬೆಳೆಯನ್ನು(ಹೆಚ್ಚಾಗಿ ಹತ್ತಿ ಮುಂತಾದ ಹಣದ ಬೆಳೆಗಳ ಸಂದರ್ಭದಲ್ಲಿ) ಬೆಳೆಯುವಂತೆ ಬಲವಂತ ಮಾಡುವ ಉಪಕರಣವಾಗಿಬಿಟ್ಟಿತು. ಪ್ರತಿ ವರ್ಷ ಏರಿಸುವ ಬೆಲೆಗೂ, ಕೃಷಿಗೆ ಬೇಕಾದ ಸಾಮಗ್ರಿಗಳ ಬೆಲೆಏರಿಕೆ, ಹೋಗಲಿ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಗೂ ಸಂಬಂಧವೇ ಇರಲಿಲ್ಲ. ಆರ್ಥಿಕತೆಯ ಬಿಕ್ಕಟ್ಟಿನ ಭಾರವನ್ನು ಕೃಷಿ ಬೆಲೆಗಳ ಮುಖಾಂತರ ರೈತರ ಹೆಗಲಿನ ಮೇಲೆ ಹೇರಲಾಗಿತ್ತು. ಇದರಿಂದಾಗಿ ರೈತ-ಚಳುವಳಿಯಲ್ಲಿ ಲಾಭದಾಯಕ ಬೆಲೆಗಳಿಗೆ ಬೇಡಿಕೆ ಮುಖ್ಯ ಬೇಡಿಕೆಯಾಯಿತು. ಕೃಷಿಗೆ ಬೇಕಾದ ಎಲ್ಲಾ ಸಾಮಗ್ರಿ, ಸವಲತ್ತುಗಳನ್ನು ನ್ಯಾಯ ಬೆಲೆಯಲ್ಲಿ ಒದಗಿಸುವುದು ಕಮಿಷನ್ ನಿರ್ಧರಿಸಿದ ವೆಚ್ಚದ ಆಧಾರದ ಮೇಲೆ ಲಾಭದಾಯಕ ಬೆಲೆ ನಿಗದಿ ಮಾಡುವುದು–ಈ ನೀತಿ ಒಕ್ಕೊರಲಿನ ಬೇಡಿಕೆಯಾಯಿತು.

ಆದರೆ ಭೂಮಾಲಿಕ ಲಾಬಿ ಈಗ ಇದಕ್ಕಿಂತ ಇನ್ನೂ ಮುಂದೆ ಹೋಗಿದೆ. ಅದರ ಪ್ರಕಾರ ಕೃಷಿ ಬೆಲೆ ಹೇಗಿರಬೇಕೆಂದರೆ ಕೃಷಿ ಕ್ಷೇತ್ರದಲ್ಲಿ ಹಣ ತೊಡಗಿಸಲು ಮತ್ತು ಲಾಭ ಗಳಿಸಲು ಪ್ರೋತ್ಸಾಹದಾಯಕವಾಗಿರಬೇಕು. ಶರದ್‌ಜೋಶಿ ಭಾನುಪ್ರತಾ-

ಪುಟ 8ಕ್ಕೆ

ಇತಿಹಾಸದ ಪುಟಗಳಿಂದ

"ಅರೇ ಇವನೇ, ಮತ್ತೂ ತಪ್ಪಿಸಿಕೊಂಡ್ರಲ್ಲಾ"

ಅರೇ ಇವನೇ, ಮತ್ತೂ ತಪ್ಪಿಸಿಕೊಂಡ್ರಲ್ಲಾ ಎಂಬ ಉದ್ಗಾರ ತೆಗೆದವರು ಸಬ್‌ಇನ್‌ಸ್ಪೆಕ್ಟರ್ ಸಬ್‌ರದ. ಪಕ್ಕಾ ಬಂದೋಬಸ್ತ್ ಇದ್ದರೂ ಕೂಡ ಮೂರನೇ ಸಲ ಪೋಲೀಸರಿಂದ ತಪ್ಪಿಸಿಕೊಂಡದ್ದಕ್ಕಾಗಿ ಪೋಲೀಸ್ ಅಧಿಕಾರಿಗಳ ಉದ್ಗಾರ.

1949ರಲ್ಲಿ, ದೇಶಾದ್ಯಂತ ಕಮ್ಯುನಿಸ್ಟರ ಬಂಧನ ಸತ್ರ ನಡೆದಾಗ ಬಿಜಾಪುರದಲ್ಲೂ ಎಂ.ಎಂ ಮಕಾನದಾರ, ಡಿ.ಎಂ.ಖಲಾಸಿ. ಹುಸೇನಬಾಶಾ, ಮಲ್ಲಪ್ಪ ಬೀಳಗಿ ಮೊದಲಾದವರನ್ನೂ ಬಂಧಿಸಿ, ಮಹಾರಾಷ್ಟ್ರದಲ್ಲಿಯ ಯರವಾಡ, ಬಿಜಾಪುರ ಜೈಲುಗಳಿಗೆ ಕಳುಹಿಸಲಾಯಿತು. ಎನ್.ಕೆ. ಉಪಾಧ್ಯಾಯ ಮತ್ತು ಬಾಲಸಿಂಗ್ ಮಾಸ್ತಾರ ಮತ್ತು ಅಲ್ಲಾವುದ್ದೀನ ಹಿಪ್ಪರಗಿ ಪೋಲೀಸರಿಂದ ತಲೆತಪ್ಪಿಸಿಕೊಂಡು ಭೂಗತರಾಗಿದ್ದರು. ಇವರನ್ನೆಲ್ಲ ಬಂಧಿಸಲು ಪೋಲೀಸರು ಶತಪ್ರಯತ್ನ ನಡೆಸಿದ್ದರು. ಬಾಲಸಿಂಗ್‌ಮಾಸ್ತರರನ್ನು ದೂರದಮೈಸೂರು ಜಿಲ್ಲೆಗೆ ಬೀಡಿ ಕೆಲಸಗಾರರ ಸಂಘಟನೆಗೆ ಕಳುಹಿಸಲಾಗಿತ್ತು.ಭೂಗತರಾಗಿಯೇ ಅವರು ಅಲ್ಲಿ ತಮ್ಮ ಕೆಲಸ ಮುಂದುವರಿಸಿದರು. ಎನ್.ಕೆ. ಉಪಾಧ್ಯಾಯ ಮತ್ತು ಅಲ್ಲಾವುದ್ದೀನ್ ಹಿಪ್ಪರಗಿಯವರು ಬಿಜಾಪುರದಲ್ಲೇ ಇದ್ದರು.

1947 ರಲ್ಲೇ ಬಿಜಾಪುರ ಜಿಲ್ಲೆಯಲ್ಲಿ ರೈತರ ಚಳುವಳಿ ಪ್ರಾರಂಭವಾಗಿತ್ತು. 32 ಹಳ್ಳಿಗಳ ಮಾಲಕರಾಗಿದ್ದ ಗಣಿ ದೇಸಾಯಿಯವರು ಗಣಿ ಮತ್ತು ತಮ್ಮ ಹಿಡಿತದಲ್ಲಿದ್ದ ಸುತ್ತ ಮುತ್ತಲ ಗ್ರಾಮಗಳಲ್ಲಿ ರೈತರ ಮೇಲೆ ದಬ್ಬಾಳಿಕೆ ನಡೆಸಿ ಅವರನ್ನು ಊರಿಂದ ಜಾಡಿಸಿದಾಗ ಕಮ್ಯೂನಿಸ್ಟ್ ಪಕ್ಷ ಮಧ್ಯ ಪ್ರವೇಶಿಸಿ, ರೈತರಿಗೆ ರಕ್ಷಣೆ ನೀಡಿ ಗೂಂಡಾಗಿರಿಯನ್ನೆದುರಿಸಲು ಮುಂದಾಗಿತ್ತು. ಬಾಗೇವಾಡಿ ತಾಲೂಕಿನ 32 ಹಳ್ಳಿಗಳ ಆ ಚಳುವಳಿ ಬಿಜಾಪುರ ತಾಲೂಕಿಗೂ ಹಬ್ಬಿ ತೊರ್ವಿ, ಅತಾಲಟ್ಟಿ, ಅಂಕಲಗಿ, ನಾಗರಾಣ ಮೊದಲಾದ ಗ್ರಾಮಗಳಲ್ಲಿಯೂ ಭೂಮಾಲಕರು, ಸಾವುಕಾರರು, ಗೌಡರ ವಿರುದ್ಧ ಚಳುವಳಿ ನಡೆದಿತ್ತು. ಬೀಡಿ ಕೆಲಸಗಾರರೂ, ವಿದ್ಯಾರ್ಥಿಗಳೂ, ನಗರಸಭೆ ಕೆಲಸಗಾರರೂ ಅಂಥ ಚಳುವಳಿಗಳಲ್ಲಿ ಭಾಗವಹಿಸುತ್ತಿದ್ದರು. ಹಳ್ಳಿಗಳಲ್ಲಿ ಸಂಚರಿಸುತ್ತಿದ್ದರು.

ಈ ಚಳುವಳಿಗೆ ಸ್ಫೂರ್ತಿ ನೀಡಿದ್ದು ತೆಲಂಗಾಣ ಚಳುವಳಿ. ರಜಾಕಾರರ ಭೂಮಾಲಕರ ದಬ್ಬಾಳಿಕೆಯ ವಿರುದ್ಧ ಶಸ್ತ್ರ ಹಿಡಿದು ಹೋರಾಡುತ್ತಿದ್ದ ವರಂಗಲ್ ನಲಗೊಂಡ ಕರೀಮ್ ನಗರ ಜಿಲ್ಲೆಗಳ ರೈತರು ಇಡೀ ಆಂಧ್ರಪ್ರದೇಶದಲ್ಲಿ ಅಷ್ಟೇ ಅಲ್ಲ ನೆರೆ ರಾಜ್ಯವಾದ ಕರ್ನಾಟಕ ಮಹಾರಾಷ್ಟ್ರಗಳಲ್ಲೂ ಹಾಗೆಯೇ ದೇಶದ ಇತರ ಪ್ರದೇಶಗಳಲ್ಲೂ ರೈತರ ಚಳುವಳಿಗೆ ಚಾಲನೆ, ಪ್ರೋತ್ಸಾಹ ನೀಡಿದವು. ಆ ಕಾಲದಲ್ಲಿಯೇ ಮಹಾರಾಷ್ಟ್ರದ ಠಾಣೆಜಿಲ್ಲೆಯಲ್ಲಿ ವಾರ್ಲಿ ಆದಿವಾಸಿಗಳ ಚಳುವಳಿ, ಕಾರವಾರ, ಮಂಗಳೂರು, ಕೋಲಾರ, ದಾರವಾಡ, ಬೆಳಗಾವಿ, ಬಿಜಾಪುರ ಜಿಲ್ಲೆಗಳಲ್ಲಿ ರೈತರ ಚಳುವಳಿ ಹೊಸ ಆಯಾಮ ಕಂಡುಕೊಂಡಿತು. "ದುಡಿಯುವ ರೈತನೇ ಭೂಮಿಯ ಒಡೆಯ" "ಮೂರು ಪಾಲು ಒಕ್ಕಲಿಗೆ ಒಂದುಪಾಲು ಭೂಮಾಲಕನಿಗೆ" "ಬೀಜಗೊಬ್ಬರ ಮಾಲಕನದ್ದು, ದುಡಿತ ನಮ್ಮದು" ಈ ಘೋಷಣೆಗಳು ರೈತ ಸಮುದಾಯದ ಮಧ್ಯೆ ಝೇಂಕರಿಸಿದವು. ಗ್ರಾಮಾಂತರ ಪ್ರದೇಶದಲ್ಲಿ ಹೊಸ ಸ್ಫೂರ್ತಿ ತುಂಬಿ ಬರುತ್ತಿತ್ತು.

ಗಣಿ ದೇಸಾಯಿಯವರ ಭೂಮಿಯನ್ನು ಹಿಂದಿನ ಕಾಲದಿಂದಲೂ ರೈತರೇ ಮಾಡುತ್ತಿದ್ದು ಹೊಲದಿಂದ ಅವರನ್ನು ಬಿಡಿಸಿ ತನ್ನ ವಶಪಡಿಸಿಕೊಳ್ಳಬೇಕೆಂಬ ಹೊಂಚಿನ ವಿರುದ್ಧ ನಮ್ಮ ಹೋರಾಟ ನೇರವಾಗಿಯೂ ಕೋರ್ಟುಕಚೇರಿಗಳಲ್ಲಿಯೂ ಆ ಹೋರಾಟ ನಡೆಯುತ್ತಲೇ ಇತ್ತು. ಅಲ್ಲಾವುದ್ದೀನ್ ಹಿಪ್ಪರಗಿಯವರು ಆ ಪ್ರದೇಶದಲ್ಲಿಯೇ ಭೂಗತರಾಗಿ ಕೆಲಸ ಮುಂದುವರಿಸಲು ವ್ಯವಸ್ಥೆ ಮಾಡಲಾಗಿತ್ತು. ಎನ್.ಕೆ. ಉಪಾಧ್ಯಾಯರು ಹೋಗಿ ಬರುವ ಕೆಲಸ ನಡೆಸಿದ್ದರು.

ಹಳ್ಳಿಗಳಲ್ಲಿ ಭೂಗತ ಕೆಲಸ ಮಾಡಬೇಕಾಗಿದ್ದುದರಿಂದ ಕುರಿಕಾಯುವವರ ಉಡುಪು ಅಂದರೆ ಹಳ್ಳಿಜನರ ಚಪ್ಪಲಿ (ಕ್ಯಾರು) ಒರಟು ಧೋತಿ, ಲಾಂಗಕ್ಲಾಥಿನ ಒರಟು ಬಟ್ಟೆಯ ಉದ್ದಕೈಯ, ಕಾಲರ್ ಇಲ್ಲದ ಅಂಗಿ, ತಲೆಗೆ ರುಮಾಲು, ಹೆಗಲ ಮೇಲೆ ಕಂಬ್ಳಿ,ಉದ್ದನ ಕೋರಮೀಸೆ-ಇದು ಉಪಾಧ್ಯಾಯರ ಅವತಾರ. ಹಳ್ಳಿಗಳಲ್ಲಿ ಈ ಡ್ರೆಸ್, ಪೇಟೆಯಲ್ಲಿ ಬದಲಾದ ಅರಿವೆ.

ಬಿಜಾಪುರದಲ್ಲಿ ಬೀಡಿ ಕೆಲಸಗಾರರು ಹೆಚ್ಚಿನ ವೇತನಕ್ಕಾಗಿ ಮುಷ್ಕರದ ಸಿದ್ಧತೆ ನಡೆಸಿದ್ದರು. 1936-37 ರಲ್ಲಿ ಒಂದು ಸಾವಿರ ಬೀಡಿ ಕಟ್ಟಿದರೆ ಎಂಟಾಣೆ ಮಜೂರಿ ಸಿಗುತ್ತಿತ್ತು. ಸಂಘಕಟ್ಟಿ ಹೋರಾಡಿದ ಫಲವಾಗಿ ನಾಲ್ಕಾಣೆ ಹೆಚ್ಚಾಗಿತ್ತು. ಆದರೆ ಕೆಲಸಗಾರರಿಂದ ಮಾಲಿಕರು ಬೀಡಿ ತೆಗೆದುಕೊಳ್ಳುವಾಗ ಬೀಡಿ ಸರಿಯಾಗಿ ಕಟ್ಟಿಲ್ಲೆಂಬ ನೆವಮುಂದೆ ತೆಗೆದುಕೊಳ್ಳುವಾಗ ಬೀಡಿಗಳನ್ನುಛಾಟ ಮಾಡುತ್ತಿದ್ದರು. ಅಂದರೆ ಮುರಿದು ಹಾಕುತ್ತಿದ್ದರು. ಈ ರೀತಿ ಬೀಡಿ ಕೆಡಿಸುವುದನ್ನು ತಡೆಯಲು ಮಜೂರಿ ಹೆಚ್ಚಿಸಬೇಕೆಂದು ಒತ್ತಾಯಿಸಲು ಮುಷ್ಕರ ಹೂಡಬೇಕೆಂಬ ನಿರ್ಧಾರ. ಅದರ ತಯಾರಿಗಾಗಿ ಶಹಾಪುರ ಅಗಸಿಯಲ್ಲಿ ಮೆಹಬೂಬ ಸಾಬನ ಮನೆಯಲ್ಲಿ, ಆಮನೆ ದೊಡ್ಡದಾಗಿತ್ತು-ಬೀಡಿ ಕೆಲಸಗಾರರ ಸಂಘದ ಕಮಿಟಿ ಸಭೆ ಕರೆಯಲಾಗಿತ್ತು-ಆ ರಾತ್ರಿ ಜೋರು ಮಳೆ. ಮಳೆಯಿಂದಾಗಿ ಸಭೆ ಮುಗಿಸಿ. ಎನ್.ಕೆ. ಯವರು ತಮ್ಮ ಡೆನ್ನಿಗೆ (ಭೂಗತರಾಗಿದ್ದ ಸ್ಥಳ) ಹೋಗಲು ಸಾಧ್ಯವಾಗಲಿಲ್ಲ. ಬೆಳಗಿನ ಜಾವ ಹೋಗುವ ನಿರ್ಧಾರವಾಯಿತು. ಊಟ ಮುಗಿಸಿ ಹಾಗೆಯೇ ಮಾತನಾಡುತ್ತಾ ಕೂತಿದ್ದರು. ಭರ್ಜರಿ ಮಳೆ. ಮಗ್ಗಲಿನ ಮನೆಯ ಖಾನ್‌ಸಾಬ ಅಪಾಯಕಾರಿ ಸುದ್ದಿ ತಂದರು. ಎರಡು ವ್ಯಾನ ತುಂಬ ಪೋಲೀಸರು. ಕೈಯಲ್ಲಿ ಬಂದೂಕು. ಸಬ್‌ಇನ್‌ಸ್ಪೆಕ್ಟರ ಕೈಯಲ್ಲಿ ಪಿಸ್ತೂಲ್, ಹಗ್ಗಗಳು, ಅರ್ಧಫರ್ಲಂಗ್ ದೂರ ಕಾಣಿಸುವ ಬ್ಯಾಟರಿಗಳು. ನಾಲ್ಕು ರಸ್ತೆಗಳೂಕಾಣಿಸುವ ರೀತಿಯಲ್ಲಿ ಸಿದ್ಧವಾಗಿ ನಿಂತಿದ್ದಾರೆ. ಎನ್.ಕೆ.ಇಂಥ ಮನೆಯಲ್ಲೇ ಇದ್ದೇನೆಂಬ ನಿಖ್ಖಿ ಸುದ್ದಿ ಅವರಿಗೆ ಸಿಕ್ಕಿದೆ. ರಾತ್ರಿ ಸಭೆ ಮುಗಿಸಿ ಹೋಗುವ ಮುಂಚೆಯೇ ಹಿಡಿಯುವ ಪ್ರಯತ್ನ.

ಮನೆಗಿರುವುದು ಒಂದೇ ಬಾಗಿಲು. ಸುದ್ದಿಕೇಳಿ ಎಲ್ಲರೂ ಚಿಂತೆಗೊಳಗಾದರು. ಎರಡು–ನಿಮಿಷದಲ್ಲಿ ನಿರ್ಣಯವಾಗಬೇಕು. ಕಾರ್ಮಿಕರ ಮೆದುಳು ಬಹು ಚುರುಕು. ಅಂದು ಅತೀ ಮಳೆಯಿಂದಾಗಿ ಎನ್.ಕೆ.ಯವರಿದ್ದ ಮಗ್ಗಲಿನ ಮನೆಯ ಗೋಡೆ ಬಿದ್ದಿತ್ತು. ಅಲ್ಲಿಂದಲೇ ಜಿಗಿದು ಮಳೆಯಲ್ಲಿಯೇ ತೋಯಿಸಿಕೊಂಡು ಓಡಿ ಹೋಗುವುದೊಂದೇ ಮಾರ್ಗ. ಅದೇ ನಿರ್ಧಾರಕ್ಕೆ ಬರಲಾಯಿತು. ದೊಭೋ ದೊಭೋ ಸುರಿಯುತ್ತಿದ್ದ ಮಳೆಯಲ್ಲಿಯೇ ಗೋಡೆ ಜಿಗಿದು ಹೊರಗೆ ಹೋದರು. ಸಜ್ಜಾಗಿನಿಂತ ಪೋಲೀಸರಿಂದ ತಪ್ಪಿಸಿಕೊಂಡು ಅಲ್ಲೆ ಹತ್ತಿರವಿದ್ದ ಸ್ಮಶಾನ ದಾಟಿ ಸೋಲಾಪುರ ರಸ್ತೆಯ ಬದಿಯಲ್ಲಿ ಬಾಡುತ್ತಹೋದರು. ಒಂದೂವರೆ ಫರ್ಲಂಗ್ ಹೋಗಿ ಕಂದಕ ದಾಟಿ ಸಿದ್ದೇಶ್ವರ ಬೋರ್ಡಿಂಗ್‌ಸೇರಬೇಕು. ನೆರೆನೀರಿಂದ ಕಂದಕ ತುಂಬಿ ಹರಿಯುತ್ತಿತ್ತು. ಕಣ್ಣಿನ ಕತ್ತಲೆ, ನೀರಿನ ಬೋರ್ಗರೆತ ಎದೆ ಜಲ್ಲೆಂದಿತು. ಹಾದುಹೋಗಲೇ ಬೇಕು. ಇಲ್ಲವಾದರೆ ಸಿಕ್ಕಿಬೀಳಬೇಕು. ಧೈರ್ಯದಿಂದ ಕಂದಕ ಹಾದು ಬೋರ್ಡಿಂಗ್ ಸೇರಿದರು. ವಿದ್ಯಾರ್ಥಿಗಳು ಎಲ್ಲ ವ್ಯವಸ್ಥೆ ಮಾಡಿದರು.

ಅಂದಿನ ದಿನಗಳಲ್ಲಿ ಎನ್.ಕೆ. ಹನಿಡ್ಯೂ (ಪಿಳಾಹತ್ತ) ಸೇದುತ್ತಿದ್ದರು. ಬೀಡಿ ಕೆಲಸಗಾರನ ಮಗಳು ಸಿಗರೇಟ ತರಲಿಕ್ಕೆ ಹೋಗಿದ್ದಳಂತೆ . ಅಂಗಡಿಯವ ಸಿಗರೇಟ ಯಾರಿಗೆಂದು ಕೇಳಿದಾಗ ಆ ಹುಡುಗಿ ಎನ್.ಕೆ. ಯವರ ಹೆಸರು ಹೇಳಿರಬೇಕು. ಒಂದೆರಡು ಬೀಡಿ ಅಂಗಡಿಗಳ ಮಾಲಕರು ನಮ್ಮ ವಿರುದ್ಧವಾಗಿದ್ದುದರಿಂದ ಬೀಡಿ ಅಂಗಡಿ ಮಾಲಕ ಪೋಲೀಸರಿಗೆ ತಿಳಿಸಿರಬೇಕು.

ಹಿಂದಿನ ಅನುಭವಗಳಿಂದ ಪೋಲೀಸರು ಸಜ್ಜಾಗಿಯೇ ಬಂದಿದ್ದರು. ಆದರೆ "ಅರೇ ಇವನೇ ಮತ್ತೆ ತಪ್ಪಿಸಿಕೊಂಡರಲ್ಲಾ" ಎಂಬ ಉದ್ಗಾರದೊಡನೆ ವಾಪಾಸು ಹೋಗಬೇಕಾಯಿತು.

ಇಂಡಿಯನ್ ಎಕ್ಸ್‌ಪ್ರೆಸ್‌ನಿಂದ ಅರುಣ್ ಶೌರಿ ವಜಾ

'ಖ್ಯಾತ' (?) ಪತ್ರಕರ್ತ ಅರುಣ್‌ಶೌರಿಯವರನ್ನು 'ಇಂಡಿಯನ್ ಎಕ್ಸ್‌ಪ್ರೆಸ್' ಸಂಪಾದಕತ್ವದಿಂದ ವಜಾ ಮಾಡಲಾಗಿದೆ. ರಾಮಜನ್ಮಭೂಮಿ - ಬಾಬ್ರಿಮಸೀದಿ ವಿವಾದಕ್ಕೆ ಸಂಬಂಧಿಸಿದಂತೆ ಅರುಣ್‌ಶೌರಿ ಬಿಜೆಪಿ-ಆರ್‌ಎಸ್‌ಎಸ್ ಪರವಾಗಿದ್ದು ಪ್ರಧಾನಿ ವಿ.ಪಿ.ಸಿಂಗ್‌ರವರ ವಿರುದ್ಧ ಸುಳ್ಳಿನ ಸರಮಾಲೆಯ ಲೇಖನ ಪ್ರಕಟಿಸಲು ಹೊರಟಾಗ ಪತ್ರಿಕೆಯ ಮಾಲೀಕ ಗೋಯಂಕಾ, ಶೌರಿಯವರನ್ನು ಕಿತ್ತು ಹಾಕುತ್ತಾರೆಂದು ಟೈಂಸ್‌ಆಫ್ ಇಂಡಿಯಾ ವರದಿ ಮಾಡಿದೆ

ಇದು "ಜಗತ್ತಿಗೇ ಗೊತ್ತಿದ್ದ ವಿಚಾರ ಈಗ ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಗೊತ್ತಾಯಿತು" ಎಂಬ ಹೊಸ ಗಾದೆಗೆ ಅವಕಾಶ ಮಾಡಿಕೊಡಬಹುದು. ಏಕೆಂದರೆ ಅರುಣ್ ಶೌರಿಯವರ 'ಸಕಲಕಲಾವಲ್ಲಭನ್' ವಿಚಾರಗಳು ಈ ಹಿಂದೆಯೇ ಹಲವು ಸಂದರ್ಭಗಳಲ್ಲಿ ಬಟಾ ಬಯಲಾಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಲವು ಸಂದರ್ಭದಲ್ಲಿ ಶೌರಿಯವರ ಕಟ್ಟಾ ಬಿಜೆಪಿ, ಆರ್.ಎಸ್.ಎಸ್ ನಿಲುವನ್ನು ಬಹಿರಂಗಗೊಳಿಸಿದೆ. ಅರುಣ್‌ಶೌರಿ ತನ್ನ ಬಿ.ಜೆ.ಪಿ ಭಕ್ತಿ ತೋರಲು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯನ್ನೇ ಅಸ್ತ್ರಮಾಡಿಕೊಂಡದ್ದು ಎಲ್ಲರಿಗೂ ಗೊತ್ತು.

ಈ ಬಿಜೆಪಿ ಭಕ್ತಿ ಬಿಜೆಪಿ ಇಡೀ ರಾಷ್ಟ್ರವನ್ನೇ ಅಲ್ಲೋಲ ಕಲ್ಲೋಲ ಗೊಳಿಸಿ ಕೋಮು ದಳ್ಳುರಿಯನ್ನು ಹತ್ತಿಸುವ ಈ ಸಮಯದಲ್ಲಿ ಗರಿಷ್ಠ ಮಟ್ಟಮುಟ್ಟಿತು ಎಂದು ಮಾತ್ರ ಅನ್ನಬಹುದು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಸದಾ ಕೆಂಡ ಕಾರುತ್ತಿದ್ದ ಅರುಣ್‌ಶೌರಿ ಸಿಪಿಐ (ಎಂ)ನ ಮಸಿ ಬಳಿಯಲು ನಿರ್ಧರಿಸಿ ಸಿಪಿಎಂ ಕಾಂಗ್ರೆಸೊಡನೆ ಸೇರಿ ಸರ್ಕಾರ ರಚಿಸಲು ಪುನ್ನಾರ ನಡೆಸಿದೆ. ಈ ಬಗ್ಗೆ ಸುರ್ಜಿತ್ ಚಂದ್ರಶೇಖರ್ ರಾಜೀವ್‌ಗಾಂಧಿ ಭೇಟಿಯಾಗಿ ಚರ್ಚೆ ನಡೆಸಿದ್ದಾರೆ ಎಂಬ ಸುಳ್ಳಿನ ಹಲವು ಲೇಖನವನ್ನು ಇದೇ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಬರೆದರು.

ಶೌರಿಯವರ ಕಾರ್ಮಿಕ ವಿರೋಧಿ ನೀತಿಯೂ ಅತ್ಯಂತ ಸ್ಪಷ್ಟ. ಇಂಡಿಯನ್ ಎಕ್ಸ್‌ಪ್ರೆಸ್ ಮುಖ್ಯ ಕಚೇರಿಯ ನೌಕರರು ಸಂಸ್ಥೆಯ ಕಾರ್ಮಿಕ ವಿರೋಧಿ ನೀತಿಗಳನ್ನು ವಿರೋಧಿಸಿ ಮುಖ್ಯ ಕಚೇರಿಯ ಮುಂದೆ ಧರಣಿ ನಡೆಸುತ್ತಿದ್ದಾಗ ಇದೇ ಅರುಣ್‌ಶೌರಿ. ಆರ್.ಎಸ್.ಎಸ್. ಕಾರ್ಯಕರ್ತರನ್ನು ಕರೆಸಿ ಕಾರ್ಮಿಕರ ಮೇಲೆ ದಾಳಿ ಮಾಡುವಂತೆ ಮಾಡಿ ಅವರನ್ನು ಛಿದ್ರವಾಗಿಸಿದರು. ಅಲ್ಲದೆ ಪತ್ರಕರ್ತರಿಗೆ ನಿಜವಾಗಿ ಬಚಾವತು ಶಿಫಾರಸ್ ಅನ್ವಯ ಸಿಗಬೇಕಾಗಿದ್ದ ಸಂಬಳಕ್ಕೆ ಮುಳು ಹಾದರು.

ಸಂಪಾದಕೀಯದಲ್ಲಿ ದಿನ ನಿತ್ಯ ಬಿಜೆಪಿಯ ತುತ್ತೂರಿ ಊದಿದರು. ಈಗ ಸರ್ಕಾರದ ವಿರುದ್ಧ ಸುಳ್ಳು ಬರೆದರು. ಆದರೆ ವಿಚಿತ್ರ, ಆದರೂ ನಿಜ ಎಂಬಂತೆ ಇದೇ ವಿ.ಪಿ. ಸಿಂಗ್ ಸರ್ಕಾರವೇ ಅವರಿಗೆ 'ಪದ್ಮಶ್ರೀ' ಬಿರುದು ನೀಡಿ ದೇಶದ ಅತ್ಯುತ್ತಮ ಸಂಪಾದಕರಲ್ಲೊಬ್ಬ ಎಂದು ಪ್ರಶಂಸಿಸಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಚುನಾಯಿತ ಪ್ರತಿನಿಧಿಗಳಿಗೆ ಕಾಂಗ್ರೆ ಸರಕಾರ ಮಾಡಿರುವ ಅವಮಾನ

ಅಗತ್ಯ ವಸ್ತುಗಳ ಹಂಚಿಕೆಯನ್ನು, ಕುಡಿಯುವ ನೀರಿನ ಕಾಮಗಾರಿಯ ಅನುಷ್ಠಾನದ ಮೇಲ್ವಿಚಾರಣೆಯನ್ನು ಇಷ್ಟು ದಿವಸ ಜಿಲ್ಲಾ ಪರಿಷತ್‌ಗಳಿಗೆ ವಹಿಸಲಾಗಿದ್ದು 3-11-90 ರಂದು ಸೇರಿದ ಮಂತ್ರಿ ಮಂಡಲದ ಸಭೆಯಲ್ಲಿ ಈ ಎರಡೂ ಜವಾಬ್ದಾರಿಗಳನ್ನು ಜಿಲ್ಲಾ ಪರಿಷತ್ತುಗಳಿಂದ ತಪ್ಪಿಸಿ, ಜಿಲ್ಲಾಧಿಕಾರಿಗಳಿಗೆ ಒಪ್ಪಿಸುವ ನಿರ್ಣಯ ಕೈಗೊಂಡಿರುವುದನ್ನು ಸಿ.ಪಿ.ಐ(ಎಂ) ರಾಜ್ಯ ಸೆಕ್ರೆಟಾರಿಯೆಟ್ ಬಲವಾಗಿ ಖಂಡಿಸಿದೆ. ನ್ಯಾಯ ಬೆಲೆ ಅಂಗಡಿಗಳನ್ನೂ ಜಿಲ್ಲಾಧಿಕಾರಿಗಳಿಗೆ ಒಪ್ಪಿಸಿರುವುದು ಸರಿಯಲ್ಲ. ಅಧಿಕಾರ ವಿಕೇಂದ್ರೀಕರಣ ಮಾಡಿ ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರ ಕೊಡ ಮಾಡಬೇಕೆಂದು ಜಿಲ್ಲಾ ಪರಿಷತ್, ಮಂಡಲ ಪಂಚಾಯತಿ ವ್ಯವಸ್ಥೆಯನ್ನು ಜಾರಿಯಲ್ಲಿ ತಂದಿರುವಾಗ, ಜಿಲ್ಲಾ ಪರಿಷತ್ತುಗಳಿಗೆ ಒಪ್ಪಿಸಿದ ಜವಾಬ್ದಾರಿಗಳನ್ನು ತಪ್ಪಿಸುವುದೆಂದರೆ. ಈ ಕ್ರಮ ಚುನಾಯಿತ ಪ್ರತಿನಿಧಿಗಳಿಗಾದ ಅವಮಾನವೆಂದು ಸಿ.ಪಿ.ಐ(ಎಂ) ಪರಿಗಣಿಸುತ್ತದೆ. ಪ್ರಜಾಪ್ರಭುತ್ವದ ಕೊಲೆ ಎಂದೇ ಬಣ್ಣಿಸಬೇಕಾಗುತ್ತದೆ. ರಾಜ್ಯದಲ್ಲಿ ತಲೆ ಎತ್ತುತ್ತಿರುವ ಮತೀಯ ಗಲಭೆಗಳನ್ನು ಹತ್ತಿಕ್ಕಲು ಪಂಜಾಬಿನಲ್ಲಿ ಜಾರಿಯಲ್ಲಿರುವ ಭಯೋತ್ಪಾದಕ ಮತ್ತು ವಿಧ್ವಂಸಕಾರಿ ಶಕ್ತಿಗಳ ವಿರೋಧ ಶಾಸನವನ್ನು ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿ ತರಬೇಕೆಂಬ ಬಂಗಾರಪ್ಪ ಮಂತ್ರಿ ಮಂಡಲದ ನಿರ್ಣಯವನ್ನು ಸಿ.ಪಿ.ಐ(ಎಂ) ಸೆಕ್ರೆಟಾರಿಯೇಟ್ ಖಂಡಿಸಿ, ಇದು ಅಪಾಯಕಾರಿ ಕ್ರಮವೆಂದೂ ಅದು ದುರುಪಯೋಗವಾಗುವ ಸಾಧ್ಯತೆ ಹೆಚ್ಚೆಂದೂ ಟೀಕಿಸಿದೆ.

ನೌಕರಿಯಲ್ಲಿ ಕನ್ನಡಿಗರಿಗೆ ಪ್ರಾಶಸ್ತ್ಯ ಸಿಗಬೇಕೆಂಬ ವಿಚಾರದಲ್ಲಿ ಎರಡು ಅಭಿಪ್ರಾಯವಿಲ್ಲ. ಆದರೆ ಮಣ್ಣಿನ ಮಕ್ಕಳಿಗೆ ಮಾತ್ರ ಆಯಾ ರಾಜ್ಯಗಳಲ್ಲಿ, ಹಾಗೆಯೇ ಕರ್ನಾಟಕದಲ್ಲಿ ನೌಕರಿ ಸಿಗಬೇಕೆಂಬವಾದವನ್ನು ಸಿ.ಪಿ.ಐ(ಎಂ) ಒಪ್ಪುವುದಿಲ್ಲ. ಆದ್ದರಿಂದ ಬಂಗಾರಪ್ಪ ಮಂತ್ರಿ ಮಂಡಲ ಸರೋಜಿನಿ ಮಹಿಷಿ ವರದಿಯನ್ನು ಅನುಷ್ಠಾನದಲ್ಲಿ ತರುವ ನಿರ್ಣಯ ಸರಿಯಲ್ಲ. ಆದ್ದರಿಂದ ಬೇರೆ ಬೇರೆ ರಾಜ್ಯಗಳಲ್ಲಿ ಕೆಲಸ ಮಾಡುತ್ತಿರುವ, ಹಾಗೆಯೇ ಇನ್ನು ಮುಂದೆ ಕೆಲಸ ಹುಡುಕುವ ಕನ್ನಡಿಗರಿಗೆ ಅನ್ಯಾಯವಾಗುವ ಸಂಭವವಿದೆ. ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಸರೋಜಿನಿ ಮಹಿಷಿಯ ವರದಿಯನ್ನು ·ಅಂತಹ ವರದಿಗಳನ್ನೇ ಪರಿಷ್ಕರಿಸಿದರೆ ದೇಶದ ಐಕ್ಯತೆ ಸಮಗ್ರತೆ ಉಳಿಯಲು ಸಾಧ್ಯವಿಲ್ಲೆಂದು ಸಿ.ಪಿ.ಐ(ಎಂ) ಅಭಿಪ್ರಾಯ ಪಡುತ್ತದೆ. ಕಾರಣ ಸರೋಜಿನಿ ಮಹಿಷಿ ವರದಿಯನ್ನು ಜಾರಿಯಲ್ಲಿ ತರುವುದನ್ನು ತಡೆಹಿಡಿಯಬೇಕೆಂದು ಸರಕಾರವನ್ನು ಒತ್ತಾಯಿಸುತ್ತದೆ ಎಂದು ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಎನ್.ಕೆ. ಉಪಾಧ್ಯಾಯ ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೋಮುವಾದ ವಿರೋಧಿ ಸಮಾವೇಶ

ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿ.ಐ.ಟಿ.ಯುಮತ್ತು ಎ.ಐ.ಟಿ.ಯು.ಸಿ.ಗಳ ನೇತೃತ್ವದಲ್ಲಿ ಅಕ್ಟೋಬರ್ 30 ರಂದು ಕೋಮುವಾದ ವಿರೋಧಿ ಸಮಾವೇಶ ಮೈಸೂರಿನ ಟೌನ್‌ಹಾಲ್ ಸಭಾಂಗಣದಲ್ಲಿ ನಡೆಯಿತು. ಸಮಾವೇಶದಲ್ಲಿ ನೂರಾರು ಕಾರ್ಮಿಕರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಭಾಷಣಕಾರರು ವಿ.ಹೆಚ್.ಪಿ., ಬಿ.ಜೆ.ಪಿ. ಹಾಗೂ ಆರ್.ಎಸ್.ಎಸ್. ಅಯೋಧ್ಯೆಯಲ್ಲಿರುವ ಬಾಬ್ರಿ ಮಸೀದಿಯನ್ನು ಕೆಡವಿ ಆ ಸ್ಥಳದಲ್ಲಿ ರಾಮ ಮಂದಿರವನ್ನು ಕಟ್ಟಲು ನಡೆಸುತ್ತಿರುವ ಯತ್ನವನ್ನು ತೀವ್ರವಾಗಿ ಖಂಡಿಸಿ, ಇದು ದೇಶದ ಜಾತ್ಯಾತೀತ ವ್ಯವಸ್ಥೆಯನ್ನು ನಾಶ ಮಾಡಲು, ಧರ್ಮದ ಹೆಸರಿನಲ್ಲಿ ಬಹು ಸಂಖ್ಯಾತ ಹಿಂದೂಗಳನ್ನು ಉದ್ರೇಕಗೊಳಿಸಿ ದೇಶದ ಅಧಿಕಾರವನ್ನು ಹಿಡಿಯಲು ಕೋಮುವಾದವನ್ನು ಹರಡುತ್ತಿದೆ ಎಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ ದೇಶದ ಸ್ವತಂತ್ರಕ್ಕಾಗಿ ಹೋರಾಟ ನಡೆಸಿದ ಪರಂಪರೆಯನ್ನುಳ್ಳ ಕಾರ್ಮಿಕ ವರ್ಗ ಮೂಕ ಪ್ರೇಕ್ಷಕನಾಗಿರದೆ ವಿಚಿದ್ರಕಾರಿಕೋಮುವಾದಿ ಶಕ್ತಿಗಳಾದ ಬಿ.ಜೆ.ಪಿ., ಆರ್.ಎಸ್.ಎಸ್. ಹಾಗೂ ವಿಶ್ವ ಹಿಂದೂ ಪರಿಷತ್‌ಗಳನ್ನು ಎದುರಿಸಿ ದೇಶದ ಐಕ್ಯತೆ, ಸಮಗ್ರತೆ ಮತ್ತು ಜಾತ್ಯತೀತತೆಯನ್ನು ಎತ್ತಿಹಿಡಿಯಬೇಕೆಂದು ಕರೆ ಇತ್ತರು.

ಸಭೆಯನ್ನುದ್ದೇಶಿಸಿ ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಜನತಾದಳದ ನಾಯಕರಾದ ಶ್ರೀ ಎ.ರಾಮಣ್ಣ, ಸಿ.ಪಿ.ಐ. ಪಕ್ಷದ ಮೈಸೂರು ಜಿಲ್ಲಾಮಂಡಳಿಯ ಕಾರ್ಯದರ್ಶಿ ಕೆ.ವೆಂಕಟರಾಮಯ್ಯ, ಸಿಐಟಿಯು ಕಾರ್ಯದರ್ಶಿ ಕಾ॥ ಮೋಹನ್‌ಕುಮಾರ್, ಎ.ಐ.ಟಿ.ಯು.ಸಿ. ಮೈಸೂರು ಜಿಲ್ಲಾ ಮಂಡಳಿ ಉಪಾಧ್ಯಕ್ಷ ಕಾ॥ ಹೆಚ್.ಆರ್ ಶೇಷಾದ್ರಿ, ಎಲ್.ಐ.ಸಿ. ನೌಕರರ ಸಂಘದ ನಾಯಕರಾದ ಕಾ॥ಪ್ರಭಾಕರ್ ಅವರುಗಳು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಿ.ಪಿ.ಐ(ಎಂ)ಪಕ್ಷದ ಮುಖಂಡರಾದ ಕಾ॥ ಉಗ್ರಪ್ಪನವರು ವಹಿಸಿದ್ದರು.

ಬೆಂಕಿಯಿಂದ ನೊಂದವರಿಗೆ ಪರಿಹಾರ

ಈ ವರ್ಷದ ಏಪ್ರಿಲ್ ತಿಂಗಳಲ್ಲಿ ಜಾಗೀರ ವೆಂಕಟಾಪುರ ಗ್ರಾಮದಲ್ಲಿ ಆಕಸ್ಮಿಕ ಬೆಂಕಿ ಹತ್ತಿ 142 ಬಣವೆಗಳು ಸುಟ್ಟುಹೋದವು. ಸುದ್ದಿ ತಿಳಿದ ತಕ್ಷಣ ಕ.ಪ್ರಾ. ರೈತ ಸಂಘದ ಕಾರ್ಯದರ್ಶಿ ಆರ್.ಬಸವರಾಜು ಸ್ಥಳಕ್ಕೆ ಭೇಟಿಯಿತ್ತರು. ಈ ಪ್ರಕರಣದಲ್ಲಿ ನೊಂದವರಿಗೆ ಪರಿಹಾರಧನ ಕೊಡದೆ ರೈತಕೂಲಿಗಾರರು ಆತಂಕದ ಸ್ಥಿತಿಯಲ್ಲಿದ್ದಾಗ ಸಂಘವು ರೈತಕೂಲಿಗಾರರನ್ನು ಸಭೆ ಸೇರಿಸಿ ಗ್ರಾಮದ ಮುಖಂಡರೊಂದಿಗೆ ತಹಸೀಲ್ದಾರರಿಂದ ಹಿಡಿದು ಜಿಲ್ಲಾಧಿಕಾರಿಗಳವರೆಗೆ ಎಲ್ಲರಿಗೂ ಮನವಿ ಪತ್ರ ಕೊಟ್ಟಾಗ ಒಂದು ತಿಂಗಳ ಅವಧಿ ಕೇಳಿದ್ದರು. ಅವಧಿಗೆ ತಕ್ಕಂತೆ ಒಂದು ತಿಂಗಳೊಳಗೆ ಪರಿಹಾರ ಧನ 60,000 ರೂ ಮಂಜೂರಾಯಿತು. ದಿನಾಂಕ 10-10-90ರಂದು ಸಂಜೆ ಸಮಾರಂಭವೊಂದನ್ನು ಏರ್ಪಡಿಸಿದ ಇಲಾಖೆಯು ಸಂಘದ ಮುಖಂಡರು ಸಹ ಸಭೆಗೆ ಬರಬೇಕೆಂದು ಕೇಳಿಕೊಂಡರು. ಸಂಘದ ಪರವಾಗಿ ಕಾಂ. ಮಲಯ್ಯ ಜಾಲಹಳ್ಳಿಯವರು ಸಭೆಯಲ್ಲಿ ಉಪಸ್ಥಿತರಿದ್ದರು. ಅವರು ಸಭೆಯಲ್ಲಿ ಮಾತನಾಡುತ್ತಾ ಗ್ರಾಮದ ಮುಖ್ಯ ಸಮಸ್ಯೆಗಳನ್ನು ವಿವರಿಸಿ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಆ ಬಗ್ಗೆಯೂ ಹೋರಾಟಕ್ಕೆ ಇಳಿಯಲೇಬೇಕಾಗುತ್ತದೆ ಎಂದು ವಿವರಿಸಿದರು. ಈ ಬೆಂಕಿ ಆಕಸ್ಮಿಕದ ಬಗ್ಗೆ ಸಂಘದ ಮನವಿಗೆ ಬೆಲೆ ಕೊಟ್ಟು ಪರಿಹಾರ ಒದಗಿಸಿದ ಜಿಲ್ಲಾಧಿಕಾರಿ ಹಾಗೂ ಅವರ ಸಿಬ್ಬಂದಿಗೆ ಸಂಘದ ಕೃತಜ್ಞತೆ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿ ಶ್ರೀಮತಿ ರತ್ನ ಪ್ರಭಾರವರು ಸಹಾಯಕ ಆಯುಕ್ತ ಶ್ರೀ ಮಹಾದೇವನ್‌ರವರು ಉಪಪ್ರಧಾನ ಶ್ರೀ ವಿರೂಪಾಕ್ಷಪ್ಪ(ಜನತಾ ದಳ) ರವರು ತಲಾ 500 ರೂಗಳ ಪರಿಹಾರ ಧನದ ಚೆಕ್ಕ್‌ಗಳನ್ನು ವಿತರಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಕಾಂ. ಶಾಂತಪ್ಪ ಮನವಿ ಪತ್ರವನ್ನು ಸಲ್ಲಿಸಿದರು. ಭಗತ್‌ಸಿಂಗ್ ಯುವಕ ತಂಡದ ಅಧ್ಯಕ್ಷ ಜ.ಮಲ್ಲಿಕಾರ್ಜುನ ವಂದನಾರ್ಪಣೆ ಮಾಡಿದರು.

ಮದ್ದುಗುಡ್ಡೆ ಗ್ರಾಮದ ಜನರಿಗೆ ಪುರಸಭೆಯಿಂದ ಮೋಸ

ಮೀನು ದೋಣಿ ನಿಲ್ಲಿಸಲು(ತಂಗಲು) 'ದಕ್ಕೆ' ನಿರ್ಮಾಣವಾಗಬೇಕೆನ್ನುವುದು ಕುಂದಾಪುರದ ಮದ್ದುಗುಡ್ಡೆಯ ಡಿವೈಎಫ್‌ಐನ ಬಹುದಿನದ ಬೇಡಿಕೆ. ಅದರಂತೆ ಹಲವಾರು ರೀತಿಯ ಹೋರಾಟಗಳ ಫಲವಾಗಿ 'ಧಕ್ಕೆ' ನಿರ್ಮಾಣಕ್ಕೆ ಅನುಮತಿಯೂ ದೊರೆಯಿತು. ಜೊತೆಗೆ 60 ಸಾವಿರ ರೂಪಾಯಿಗಳು ಬಿಡುಗಡೆಗೊಂಡು 1989-90ರ ಮಾರ್ಚ್ ತಿಂಗಳ ಒಳಗೆ ಧಕ್ಕೆ ನಿರ್ಮಾಣದ ಕಾರ್ಯ ಬಿಟ್ಟು ಕೊಡಬೇಕೆಂದು ಟೆಂಡರು ಕರೆಯಲಾಯಿತು. ಆಶ್ಚರ್ಯವೆಂದರೆ 1990-91ರ ಮಾರ್ಚ್ ತಿಂಗಳು ಬಂದರೂ ಧಕ್ಕೆ ನಿರ್ಮಾಣದ ಕಾರ್ಯ ಕೈಗೆತ್ತಿಕೊಳ್ಳದೆ ಇರುವುದು ಧಕ್ಕೆ ಕಾರ್ಯಕ್ಕೆ ಅನುಮತಿ ದೊರೆಯುವಾಗ ಪುರಸಭೆಯಲ್ಲಿ ಚುನಾಯಿತ ಪ್ರತಿನಿಧಿಗಳ ಆಡಳಿತ ಇರಲಿಲ್ಲ. ತಹಸೀಲ್ದಾರರ ಹಿಡಿತದಲ್ಲಿ ಪುರಸಭೆಯ ಆಡಳಿತ ಇತ್ತು. ಡಿವೈಎಫ್‌ಐ ಗ್ರಾಮದಲ್ಲಿ ದಿನದಿಂದ ದಿನಕ್ಕೆ ಬೆಳೆಯುತ್ತಿದೆ ಜೊತೆಗೆ ಜನರ ವಿಶ್ವಾಸವನ್ನು ಗಳಿಸುವುದರೊಂದಿಗೆ ಜನರ ಮಧ್ಯ ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ಇದನ್ನು ಗಮನಿಸಿದ ಪುರಸಭೆಯು ಧಕ್ಕೆ ನಿರ್ಮಾಣದ ಕೀರ್ತಿ ಡಿವೈಎಫ್‌ಐಗೆ ಸಂದಬಾರದೆಂದು ತನ್ನಿಂದಲೇ ಧಕ್ಕೆ ನಿರ್ಮಾಣಕ್ಕೆ ಅನುಮತಿ ಸಿಕ್ಕಿರುವುದು ಎನ್ನುವ ಸುಳ್ಳು ಪ್ರಚಾರದೊಂದಿಗೆ ತನ್ನ ಕೆಳ ಮಟ್ಟದ ರಾಜಕೀಯವನ್ನು ನಡೆಸಲು ಪ್ರಯತ್ನ ಪಡುತ್ತಿದೆ ಎಂದು ಘಟಕದ ಕಾರ್ಯದರ್ಶಿ ಕೃಷ್ಣ ಜಿ. ಮೆಂಡನ್ ತಿಳಿಸಿದ್ದಾರೆ.

ದಶಮಾನೋತ್ಸವ ಕಾರ್ಯಕ್ರಮ

ಡಿ.ವೈ. ಎಫ್.ಐ. ನ ಬೆಂಗಳೂರಿನ ನೀಲಗಿರಿ ಪಾಪಣ್ಣ ಬಡಾವಣೆ ಘಟಕ ನವಂಬರ್ 4 ರಂದು ದಶಮಾನೋತ್ಸವದ ಸವಿನೆನಪಿಗೆ ಸಸಿನೆಡುವ ಕಾರ್ಯಕ್ರಮ ನಡೆಸಿತು. ನಗರಸಭಾ ಸದಸ್ಯ ಶ್ರೀ ಎಲ್. ಗೋವಿಂದರಾಜುರವರು ಸಸಿನೆಟ್ಟು ಕಾರ್ಯಕ್ರಮ ಉದ್ಘಾಟಿಸಿದರು. ಡಿ.ವೈ. ಎಫ್.ಐ. ಕಾರ್ಯಕರ್ತರು ನಡೆಸುವ ರಾತ್ರಿ ಪಾಠ ಶಾಲೆಯ ವಿದ್ಯಾರ್ಥಿಗಳು ಆರಂಭದಲ್ಲಿ ಕ್ರಾಂತಿಗೀತೆ ಹಾಡಿದರು. ಡಿ.ವೈ.ಎಫ್‌ಐ ರಾಜ್ಯ ಕಾರ್ಯದರ್ಶಿ ಎಸ್. ಶಿವರಾಂ ಈ ಕಾರ್ಯದಲ್ಲಿ ಹಾಜರಿದ್ದು ಸಭಿಕರನ್ನುದ್ದೇಶಿಸಿ ಯುವ ಜನತೆಯ ಉದ್ಯೋಗಕ್ಕಾಗಿ ಸಂಘಟಿತ ಹೋರಾಟ ನಡೆಸಬೇಕು ಎಂದರು. ಜಿಲ್ಲಾ ಸಹ ಕಾರ್ಯದರ್ಶಿ ಗೋಪಾಲಕೃಷ್ಣ, ನೀಲಗಿರಿ ಪಾಪಣ್ಣ ಘಟಕದ ಸಂಚಾಲಕ ಮಾಯಣ್ಣನವರು, ಬಿ.ಎಸ್.ಗುರುಮೂರ್ತಿಯವರು, ಬಡಾವಣೆಯ ಹೆಚ್.ಜಿ. ಸಂಘದ ಅಧ್ಯಕ್ಷರೂ ಸಭಿಕರನ್ನುದ್ದೇಶಿಸಿ ಮಾತನಾಡಿದರು. ರಾಜೇಂದ್ರ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಇನ್ನೊಬ್ಬ ಡಿ.ವೈ.ಎಫ್‌ಐ ಮುಖಂಡ ಶ್ರೀನಿವಾಸ್‌ರವರು ಉಪಸ್ಥಿತರಿದ್ದರು.

ರೈತ ಕೂಲಿಗಾರರ ಸಮಾವೇಶ

ಹಾವೇರಿ ಹಾಗೂ ಬ್ಯಾಡಗಿ ತಾಲ್ಲೂಕುಗಳ ರೈತ ಕೂಲಿಗಾರರ ಸಮಾವೇಶ ಅಕ್ಟೋಬರ್ 28 ರಂದು ಹಾನಗಲ್ ತಾಲೂಕು ರೈತ ಸಂಘದ ಅಧ್ಯಕ್ಷರಾದ ಫಕ್ಕೀರಪ್ಪ ಹೊತ್ನಳಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಹಾವೇರಿ ಮತ್ತು ಬ್ಯಾಡಗಿ ತಾಲೂಕುಗಳಲ್ಲಿ ಮಳೆ ಬಾರದೆ ರೈತ ಕೂಲಿಗಾರರು ಊರು ಬಿಡುತ್ತಿರುವ ಸಂದರ್ಭದಲ್ಲಿ ಸರಕಾರವು ಈ ಕೂಡಲೇ ಬರಗಾಲ ಕಾಮಗಾರಿ ಕೈಗೊಳ್ಳುವುದಕ್ಕೆ ಒತ್ತಾಯಿಸಲಾಯಿತು. ಬೆಳೆಗಳು ನಾಶವಾಗಿರುವುದರಿಂದ ರೆವಿನ್ಯೂ ಅಧಿಕಾರಿಗಳು ಫಸಲಿನ ಆಣೆವಾರಿ ಪ್ರತಿ ಹಳ್ಳಿಗಳ ರೈತ ಪ್ರತಿನಿಧಿಗಳ ಸಮಕ್ಷಮದಲ್ಲಿ ಮಾಡಬೇಕೆಂದು ಹಾಗೂ ರಾಜ್ಯ ಸಮಿತಿ ಕರೆ ಮೇರೆಗೆ ರೈತ ಕೂಲಿಕಾರರ ಸಾಲಮನ್ನಾ, ಸಾಗುವಳಿ ಮಾಡುತ್ತಿರುವ ಸರಕಾರಿ ಜಮೀನು ಮತ್ತು ನಗರ ಪ್ರದೇಶದಲ್ಲಿ ಭೂಮಿ ಆಕ್ರಮಣ ಸಕ್ರಮ ಗೊಳಿಸುವುದು, ಬಡಜನರಿಗೆ ಹಸಿರು ಕಾರ್ಡು ಕೊಡುವ ಬಗ್ಗೆ ಸರಕಾರದ ಮೇಲೆ ಒತ್ತಾಯ ತರಲು ಜನವರಿ 2, 1991 ಕ್ಕೆ ಎರಡು ತಾಲೂಕುಗಳಿಂದ ಸುಮಾರು 2 ಸಾವಿರ ಜನರು ಬೆಂಗಳೂರಿಗೆ ತೆರಳಲು ನಿರ್ಧರಿಸಲಾಯಿತು.

ಟ್ರಾನ್ಸ್‌ಪೋರ್ಟ್ ಕಾರ್ಮಿಕರ ವೇತನ ಹೆಚ್ಚಳ ಒಪ್ಪಂದ

ಶಿವಮೊಗ್ಗ ಜಿಲ್ಲೆಯ ಸಾಗರದ ಗಜಾನನ ಮೋಟಾರ್ ಟ್ರಾನ್ಸ್‌ಪೋರ್ಟ್ ಕಂಪನಿ ಹಾಗೂ ಬಾಳೆಬರೆ - ಬೈಂದೂರು ಲೈನ್ ಕಂಬೈನ್ಸ್‌ನ ಕಾರ್ಮಿಕರಿಗೆ ತಾ॥ 1.4.90 ಪೂರ್ವಾನ್ವಯವಾಗುವಂತೆ ಒಪ್ಪಂದವೊಂದಕ್ಕೆ 29.10.90 ರಂದು ಸಹಿ ಹಾಕಲಾಯಿತು.

ಒಪ್ಪಂದದ ಪ್ರಕಾರ ಕಾರ್ಮಿಕರ ಮೂಲ ವೇತನದಲ್ಲಿ ಕನಿಷ್ಠ ರೂ. 97 ರಿಂದ ರೂ. 296 ಹೆಚ್ಚಳ, 1990-91 ನೇ ವರ್ಷಕ್ಕೆ ತುಟ್ಟಿ ಭತ್ಯೆಯಲ್ಲಿ ತಿಂಗಳಿಗೆ ರೂ. 54 ನಂತರ ಪ್ರತಿ ವರ್ಷವೂ ಬೆಲೆ ಸೂಚ್ಯಂಕಕ್ಕನುಗುಣವಾಗಿ ಪರಿಷ್ಕರಣವಾಗಲಿದೆ. ರನ್ನಿಂಗ್ ಸ್ಟಾಫ್‌ನವರಿಗೆ ದಿನ ಭತ್ಯೆಯಲ್ಲಿ ಶೇಕಡ 100 ಕ್ಕಿಂತಲೂ ಹೆಚ್ಚಳವಾಗಲಿದ್ದು, ವಾರ್ಷಿಕ ಇಂಕ್ರಿಮೆಂಟಿನಲ್ಲಿ ಶೇಕಡ 75 ರಷ್ಟು ಹೆಚ್ಚಳವಾಗಲಿದೆ. ವರ್ಷಕ್ಕೆ ರೂ 250ರಂತೆ ವೈದ್ಯಕೀಯ ಭತ್ಯೆ ಹಾಗೂ ಹಾಲ್ಟಿಂಗ್ ಭತ್ಯೆ, ಮೊದಲಾದವು ಈ ಒಪ್ಪಂದದಲ್ಲಿ ಸೇರಿವೆ. ಈ ಒಪ್ಪಂದವು 31.3.92ರವರೆಗೆ ಜಾರಿಯಲ್ಲಿರುತ್ತದೆ.

ಸಿಐಟಿಯು ನೇತೃತ್ವದಲ್ಲಿ, ಕಾರ್ಮಿಕರು ಬೇಡಿಕೆಗಳನ್ನು ಸಲ್ಲಿಸಿ ಸಾಗರ ಹಾಗೂ ಶಿವಮೊಗ್ಗದಲ್ಲಿ, ಧರಣಿ ಸತ್ಯಾಗ್ರಹ ಮೊದಲಾದ ಹೋರಾಟಗಳನ್ನು ನಡೆಸುತ್ತಿದ್ದರು. ಒಪ್ಪಂದಕ್ಕೆ ಆಡಳಿತ ವರ್ಗದ ಪರವಾಗಿ ಪಿ.ಆರ್. ನಾಯಕ್, ಸಿಐಟಿಯುವಿನ ಕಾರ್ಮಿಕರ ಸಂಘದ ಪರವಾಗಿ ಕೆ. ಮೂಸಬ್ಬ, ಪಿ. ಉಮೇಶ್ ಭಂಡಾರಿ ಎಸ್.ಎ. ಗಜೇಂದ್ರ, ಸಾಗರ ಪ್ರಾಂತ್ಯ ಮೋಟಾರ್ ಕೆಲಸಗಾರರ ಸಂಘದ ಪರವಾಗಿ ಬಿ.ಎಸ್. ಚಂದ್ರಶೇಖರ್, ಗಂಗಾಧರ್, ಎಸ್. ಸತ್ಯನಾರಾಯಣ, ಅನಂತ ಹಾಗೂ ಜಯಪ್ರಕಾಶ್ ನಾರಾಯಣ ಮೊದಲಾದವರು ಸಹಿ ಮಾಡಿದ್ದಾರೆ.

ನಿಮ್ಮ ಪ್ರಶ್ನೆ- ನಮ್ಮ ಉತ್ತರ

? ಜಾಗತಿಕ ಸಮಾಜವಾದಿ ಪದ್ಧತಿಯ ಉದಯದಿಂದಾಗಿ ಬಂಡವಾಳಶಾಹಿಯ ಕೆಲವು ಘನ ಉದ್ದಿಮೆಗಳ ಯೋಜನೆಗಳನ್ನು ನಿರ್ಮಿಸಲು ಸಮಾಜವಾದಿ ಸಹಾಯವನ್ನೇ ಉಪಯೋಗಿಸುತ್ತದೆ. ಆದರೆ ಅದೇ ವೇಳೆ ಈ ಸಹಾಯವನ್ನದು ನಿಜವಾಗಿ ಸಾಮ್ರಾಜ್ಯಶಾಹಿ ಏಕಸ್ವಾಮ್ಯದ ಜತೆ ಹೆಚ್ಚು ಲಾಭಕರವಾದ ಒಪ್ಪಂದಗಳನ್ನು ಮಾಡಿಕೊಳ್ಳುವ ಅತಿ ಉತ್ತಮ ಚೌಕಾಶಿಯ ಕಣವನ್ನಾಗಿ ಉಪಯೋಗಿಸುತ್ತದೆ. ವಿವರಿಸಿ.

(ಇದು ಸಿಪಿಐ(ಎಂ) ಕಾರ್ಯಕ್ರಮದಲ್ಲಿ ಪುಟ 7ರಲ್ಲಿ 14ನೇ ಪ್ಯಾರದಲ್ಲಿದೆ)

–ಬಿ.ಮೋನಪ್ಪ ಬೆಲ್ಲದ, ಬೆಂಗಳೂರು

ಇದು ಮುಖ್ಯವಾಗಿ ಭಾರತದ ಬೂರ್ಜ್ವಾ ವರ್ಗದ ಬಗ್ಗೆ ಹೇಳಿರುವ ಮಾತು. ಸ್ವತಂತ್ರವಾದಾಗ ಭಾರತದ ಬೂರ್ಜ್ವಾ ವರ್ಗ ಭಾರತದ ದೊಡ್ಡ ಪ್ರಮಾಣದ ಕೈಗಾರೀಕರಣ ಬಯಸಿತು. ಅದನ್ನು ಬಂಡವಾಳಶಾಹಿ ಮಾರ್ಗದಲ್ಲಿ ಮಾಡಬಯಸಿತು–ತನ್ನ ವರ್ಗ ಹಿತಾಸಕ್ತಿಯಿಂದ. ಆದರೆ ಅದಕ್ಕೆ ಬೇಕಾದಷ್ಟು ಬಂಡವಾಳವಾಗಲಿ, ತಂತ್ರಜ್ಞಾನವಾಗಲಿ ಅದರ ಬಳಿ ಇರಲಿಲ್ಲ. ಭಾರತದಂತಹ ಮಾಜಿ, ವಸಾಹತುವನ್ನು ಕೈಗಾರೀಕರಿಸುವಲ್ಲಿ ಸಾಮ್ರಾಜ್ಯಶಾಹಿ ದೇಶಗಳಿಗೆ ಆಸಕ್ತಿ ಇರಲಿಲ್ಲ. ಆದರೂ ಭಾರತದ ಬೂರ್ಜ್ವಾ ವರ್ಗ ಅಮೇರಿಕ, ಬ್ರಿಟನ್‌ನಂತಹ ಸಾಮ್ರಾಜ್ಯಶಾಹಿ ದೇಶಗಳ ಮೊರೆ ಹೋಯಿತು. ಭಾರತದಂತಹ ಕೃಷಿ ಪ್ರಧಾನ ದೇಶ ಕೃಷಿಗೆ, ಕೃಷಿ ಉತ್ಪನ್ನಗಳಿಗೆ ಹೆಚ್ಚಿಗೆ ಗಮನ ಕೊಡಬೇಕು. ಕೈಗಾರಿಕೆಯಲ್ಲಿ ಲಘು ಅದರಲ್ಲೂ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಆದ್ಯತೆ ಕೊಡಬೇಕು ಎಂಬ ಭೋದನೆ ಬಟ್ಟರೆ [illegible] ಭಾರಿ ವಿದ್ಯುತ್ [illegible] ಮುಂತಾದ ಭಾರಿ ಕೈಗಾರಿಕೆಗಳನ್ನು ಹಾಕಿ ಬೆಳಕಿನ ವಸ್ತುಗಳ ಕೈಗಾರಿಕೆಗೆ ಭದ್ರಬುನಾದಿ ಹಾಕಬೇಕೆಂಬ ಭಾರತೀಯ ಬೂರ್ಜ್ವಾಗಳ ಕನಸು ಫಲ ಕೊಡಲಿಲ್ಲ.

ಆಗ ಕೈಗಾರಿಕೆಯಲ್ಲಿ ಸಾಮ್ರಾಜ್ಯಶಾಹಿಗೆ ಸೆಡ್ಡು ಹೊಡೆದು ನಿಲ್ಲುವ ಶಕ್ತಿ ಹೊಂದಿದ್ದ ಸಮಾಜವಾದಿ ದೇಶಗಳ ಮೊರೆ ಹೋಯಿತು ನಮ್ಮ ಆಳುವ ಬೂರ್ಜ್ವಾ ವರ್ಗ. ಸಾಮ್ರಾಜ್ಯಶಾಹಿ ದೇಶಗಳ ಮೇಲಿನ ಮೂರನೆಯ ಜಗತ್ತಿನ ದೇಶಗಳ ಅವಲಂಬನೆ ತಪ್ಪಿಸುವ ಉದ್ದೇಶದಿಂದ ಸಮಾಜವಾದಿ ದೇಶಗಳು ಈ ಕೇಳಿಕೆಗೆ ಒಪ್ಪಿಕೊಂಡವು. ಸೋವಿಯತ್ ಒಕ್ಕೂಟ ಭಿಲೈನಲ್ಲಿ ಉಕ್ಕು ಕಾರ್ಖಾನೆ, ಬಿಎಚ್‌ಇಎಲ್‌ಗೆ ಭಾರಿ ವಿದ್ಯುತ್ ಜನಕಗಳ ಕಾರ್ಖಾನೆ ಮುಂತಾದುವುಗಳನ್ನು ಸ್ಥಾಪಿಸಲು ನೆರವು ನೀಡಿತು. ದೊಡ್ಡ ಪ್ರಮಾಣದಲ್ಲಿ ಆಧುನಿಕ ತಂತ್ರಜ್ಞಾನವನ್ನು ಕೊಟ್ಟಿದ್ದಲ್ಲದೆ, ನಮ್ಮ ಇಂಜನೀಯರುಗಳು, ವಿಜ್ಞಾನಿಗಳನ್ನು ತರಬೇತು ಮಾಡಿ ನಮ್ಮ ಈ ಕೈಗಾರಿಕೆಗಳು ತಮ್ಮ ಕಾಲ ಮೇಲೆ ನಿಲ್ಲುವಂತೆ ಮಾಡಿದವು.

ಈ ಬೆಳವಣಿಗೆ ಕಂಡ ಸಾಮ್ರಾಜ್ಯಶಾಹಿ ದೇಶಗಳು ಎಚ್ಚೆತ್ತವು. ಭಾರತದ ಕೈಗಾರೀಕರಣವಾಗುತ್ತದೆ, ತಮ್ಮ ಮಾರುಕಟ್ಟೆ ಹಾಳಾಗುತ್ತ, ಆರ್ಥಿಕತೆ ಮೇಲೆ ಹತೋಟಿ ತಪ್ಪುತ್ತದೆ [illegible] ಕೈಗಾರೀಕರಣಕ್ಕೆ ಸಹಾಯ ನೀಡಲು ಮುಂದಾದವು. ತಂತ್ರಜ್ಞಾನ ಕೊಡಲು ಮುಂದಾದವು. ಭಾರತದ ವಿಜ್ಞಾನ, ತಂತ್ರಜ್ಞಾನ ತರಬೇತಿ ಸಂಸ್ಥೆ(ಐಐಟಿ ಗಳಂತಹ)ಗಳನ್ನು ಸ್ಥಾಪಿಸಲು ಸಹಾಯ ಮಾಡಿದವು. ಈ ಸಹಾಯ ಸಮಾಜವಾದಿ ದೇಶಗಳಷ್ಟು ಉದಾರವಾಗಿ ಇರದಿದ್ದರೂ ಕೈಗಾರೀಕರಣಕ್ಕೆ ಇದರಿಂದ ಸಹಾಯವಾಯಿತು. ಸಮಾಜವಾದಿ ದೇಶಗಳು ತಂತ್ರಜ್ಞಾನ ವರ್ಗಾವಣೆಗೆ [illegible] ಹಾಕಿದ್ದವು [illegible] ಯದೆ ಆಧಾರದ ಮೇಲೆ [illegible] ಇದಕ್ಕೆ 'ರೂಪಾಯಿ ವ್ಯಾಪಾರ' [illegible]

ಸಮಾಜವಾದಿ ದೇಶಗಳ [illegible] ಒಪ್ಪಂದಗಳನ್ನು ಆಧಾರವಾಗಿಟ್ಟು ಭಾರತದ ಬೂರ್ಜ್ವಾ ವರ್ಗ, ಸಾಮ್ರಾಜ್ಯಶಾಹಿಗಳೊಡನೆ ಚೌಕಾಸಿ ನಡೆಸಿತು. ತಂತ್ರಜ್ಞಾನ ವರ್ಗಾವಣೆ [illegible]

ಈ [illegible] ಸಮಾಜವಾದಿ ವ್ಯವಸ್ಥೆಯ ಅಸ್ತಿತ್ವವೇ ಭಾರತದಂತಹ [illegible] ದೇಶಗಳ ಆರ್ಥಿಕ ಬೆಳವಣಿಗೆಗೆ, ಕೈಗಾರೀಕರಣಕ್ಕೆ [illegible] ಸಾಮ್ರಾಜ್ಯಶಾಹಿ [illegible] ನಮ್ಮ ಬೂರ್ಜ್ವಾ ವರ್ಗ [illegible] ದೇಶಗಳ ಬೂರ್ಜ್ವಾ [illegible]

ಎರಡು ಪ್ರಶ್ನೆಗಳು(?)

ಎಪ್ರಿಲ್ 1990 ರಲ್ಲಿ ನಡೆದ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ (ರಾಷ್ಟ್ರೀಯ ರಂಗ ಸರ್ಕಾರ ಬಂದ ಮೇಲೆ ಪುನರ‍್ರಚಿತವಾದ ಮಂಡಳಿಯ ಮೊದಲ ಸಭೆ) ಯಲ್ಲಿ ಬಿ.ಜೆ.ಪಿ. ಅಧ್ಯಕ್ಷ ಎಲ್.ಕೆ. ಅದ್ವಾನಿ "ಜಾತ್ಯತೀತತೆ ಎಂದರೇನು ಎಂಬ ಬಗ್ಗೆ ಒಂದು ರಾಷ್ಟ್ರೀಯ ಚರ್ಚೆ ನಡೆಯಬೇಕು" ಎಂದು ಒತ್ತಾಯಿಸಿದ್ದರು.

ಇದಕ್ಕೆ ಎರಡು ವರ್ಷಗಳ ಹಿಂದೆ ನಡೆದಿದ್ದ ಅದೇ ಮಂಡಳಿಯ ಸಭೆಯೊಂದರಲ್ಲಿ ಆಗ ಅದರ ಅಧ್ಯಕ್ಷರೂ ಹಾಗೂ ಕಾಂಗ್ರೆಸ್ಸಿನ ಅಧ್ಯಕ್ಷರೂ ಆದ ರಾಜೀವ್‌ಗಾಂಧಿ "ಕೋಮುವಾದ ಎಂದರೇನು ಎಂಬ ಬಗ್ಗೆ ಸರಿಯಾದ ನಿರ್ವಚನೆಯಾಗಬೇಕು" ಎಂದು ಹೇಳಿದ್ದರು.

ಅಂದರೆ ಈ ಎರಡು ಪ್ರಮುಖ ರಾಜಕೀಯ ಪಕ್ಷಗಳ ನಡುವೆ ಒಂದು ಮಾತಿನ ಬಗ್ಗೆ ಏಕಾಭಿಪ್ರಾಯ ಇದೆ. ಅದೆಂದರೆ "ಜಾತ್ಯತೀತತೆ", "ಕೋಮುವಾದ" ಪದಗಳ ನಿಜವಾದ ಅರ್ಥ ಸ್ಪಷ್ಟವಾಗಿಲ್ಲ ಎಂದು.

> ಕೋಮುವಾದದೊಂದಿಗೆ ಬಹಿರಂಗ ಗೆಳೆತನ ಅಥವಾ ಅದರೊಡನೆ ಭಾರೀ ಮಟ್ಟದ ರಾಜಿ, ಒಪ್ಪಂದ - ಇದು ಬಿಜೆಪಿ ಮತ್ತು ಕಾಂಗ್ರೆಸ್(ಐ)ನ ರಾಜಕೀಯದ ಜೀವಾಳವಾದ್ದರಿಂದ ಅಂತಹ ಅನೀತಿಯುತ ರಾಜಕೀಯಕ್ಕೆ ಅವಕಾಶ ನೀಡಲಾರದ 'ಕೋಮುವಾದ', 'ಜಾತ್ಯತೀತ' ಎಂಬ ಪರಿಕಲ್ಪನೆಗಳ ಮೇಲೆಯೇ ಕೋಪ. ಆದರೆ ಜಾತ್ಯತೀತತೆ ಬಗ್ಗೆ ಈ ಚಂಚ ಲತೆ ಕೇವಲ ಈ ಎರಡು ಬಂಡವಾಳ ಶಾಹೀ ಪಕ್ಷಗಳದ್ದೇ ಲಕ್ಷಣ ವೆಂದೇನೂ ಅಲ್ಲ.

ಜಾತ್ಯತೀತತೆ ಮತ್ತು ಬಂಡವಾಳಶಾಹಿ ಪಕ್ಷಗ

ಇದು ನಿಜವೇ? ಇತಿಹಾಸದ ಅಥವಾ ರಾಜಕೀಯ ಶಾಸ್ತ್ರದ ಯಾವುದೇ ಗಂಭೀರ ವಿದ್ಯಾರ್ಥಿಯನ್ನು ಹೀಗೆಂದು ಪ್ರಶ್ನಿಸಿ. ಇದು ನಿಜವಲ್ಲವೆಂದೇ ನಿಮಗೆ ಉತ್ತರ ದೊರೆಯುತ್ತದೆ. ಆಧುನಿಕ ಪ್ರಜಾಪ್ರಭುತ್ವ, ಆಧುನಿಕ ಜಾತ್ಯತೀತತೆ ಇತ್ಯಾದಿ ಪರಿಕಲ್ಪನೆಗಳು ಯುರೋಪಿನ ಹೊಸದಾಗಿ ಉದಯವಾಗುತ್ತಿದ್ದ ಬಂಡವಾಳಶಾಹಿ ವರ್ಗ ಪಾಳೆಯಗಾರೀ ಶಕ್ತಿಗಳ ವಿರುದ್ಧ ತನ್ನ ಹೋರಾಟದಲ್ಲಿ ಸೃಷ್ಟಿಸಿದ ಪರಿಕಲ್ಪನೆಗಳು: ನಮ್ಮ ದೇಶದಲ್ಲೂ ಆಧುನಿಕಪ್ರಜಾಪ್ರಭುತ್ವ ಆಂದೋಲನಕ್ಕೂ, ಸಮಾಜ ಸುಧಾರಣೆಗಳ ಆಂದೋಲನಕ್ಕೂ, ನಮ್ಮ ಸಮಾಜದಲ್ಲಿ ಇಂಗ್ಲಿಷ್ ಶಿಕ್ಷಣ ಪಡೆದು ಮೂಡಿ ಬರುತ್ತಿದ್ದ ಹೊಸ ಬಂಡವಾಳಶಾಹಿ ವರ್ಗಕ್ಕೂ ಅನ್ಯೋನ್ಯ ಸಂಬಂಧವಿದ್ದು, ಈ ಪರಿಕಲ್ಪನೆಗಳು ನಮ್ಮ ರಾಷ್ಟ್ರೀಯ ಆಂದೋಲನದ ಭಾಗವಾಗಿ ಬಿಟ್ಟವು. ಏಕೆಂದರೆ ಇಡೀ ಜನ ಸಮುದಾಯ ಪಾಲುಗೊಳ್ಳುವ ಪ್ರಜಾಪ್ರಭುತ್ವದಲ್ಲಿ ಮೇಲು ಕೀಳಿನ ಹಳೆಯ ಭಾವನೆಗಳಿಗೆ ಅವಕಾಶಕೊಡುವುದು ಸಾಧ್ಯವೂ ಇರಲಿಲ್ಲ.

ಜಾತ್ಯತೀತತೆ ಎಂದರೇನು? ಉತ್ತರ ಸ್ಪಷ್ಟ

ಜಾತ್ಯತೀತತೆ ಎಂದರೆ ರಾಜಕೀಯ ಮತ್ತು ಶಿಕ್ಷಣ ಧರ್ಮದಿಂದ ಸಂಪೂರ್ಣ ಪ್ರತ್ಯೇಕವಾಗಿರಬೇಕು. ಧರ್ಮ ಅದನ್ನು ನಂಬುವವರ ಖಾಸಗೀ ವಿಷಯ. ಭಾರತದ ಯಾವುದೇ ನಾಗರಿಕ ಹಿಂದೂ, ಇಸ್ಲಾಮ್, ಕ್ರಿಶ್ಚಿಯನ್, ಸಿಖ್ ಅಥವಾ ಬೇರೆ ಯಾವುದೇ ಧರ್ಮವನ್ನು ನಂಬಬಹುದು. ತನಗಿಷ್ಟವಾದ ಧರ್ಮವನ್ನುನಂಬುವುದು, ಆಚರಿಸುವುದು ಆತನ ಹಕ್ಕು ಹಾಗೂ ಭಾರತೀಯ ಪ್ರಜಾಪ್ರಭುತ್ವದ ಮೂಲ ಭೂತ ನೀತಿ. ಅದೇ ರೀತಿ ಧರ್ಮವನ್ನು ನಂಬದವರಿಗೆ, ನಾಸ್ತಿಕರಿಗೆ ಯಾವುದೇ ಮತ ಧರ್ಮವನ್ನು ನಂಬದಿರಲು, ಆಚರಿಸದಿರಲು ಹಕ್ಕಿದೆ. ಪ್ರಭುತ್ವ, ಸರಕಾರ ಇದರಲ್ಲಿ ಹಸ್ತಕ್ಷೇಪ ಮಾಡಬಾರದು. ಇದು ಜಾತ್ಯತೀತತೆಯ ಸ್ಪಷ್ಟ ನೀತಿ.

ಕೋಮುವಾದ ಎಂದರೇನೆಂಬುದು ಕೂಡ, ಅಷ್ಟೇ ಸ್ಪಷ್ಟ. ಅದೆಂದರೆ ಧರ್ಮವನ್ನು ರಾಜಕೀಯದಲ್ಲಿ ಬೆರೆಸುವುದು; ಯಾವುದೇ ಒಂದು ಕೋಮಿನ ಧಾರ್ಮಿಕ ಪರಿಕಲ್ಪನೆಗಳನ್ನು, ಆಚರಣೆಗಳನ್ನು ರಾಜಕೀಯ, ಆಡಳಿತ, ಶಿಕ್ಷಣ ಇತ್ಯಾದಿಗಳ ಮೇಲೆ ಹೇರುವುದು; ಧಾರ್ಮಿಕ ನಂಬಿಕೆಗಳು, ಆಚರಣೆಗಳ ಆಧಾರದ ಮೇಲೆ ರಾಜಕೀಯ ಪಕ್ಷಗಳನ್ನು, ಗುಂಪುಗಳನ್ನು ಕಟ್ಟುವುದು.

ಹೀಗಿದ್ದರೂ ಈ ಎರಡು ಪ್ರಮುಖ ರಾಜಕೀಯ ಪಕ್ಷಗಳ ಪ್ರಮುಖ ಮುಖಂಡರಿಗೇಕೆ ಈ ಸಂಶಯ?-ಅದೂ ಜಾತ್ಯತೀತ ಸಂವಿಧಾನವನ್ನು ಅಂಗೀಕರಿಸಿದ ಐದು ದಶಕಗಳ ನಂತರ ಕೂಡಾ?

ಜಾತ್ಯತೀತತೆ ಪಾಲಿಸುವಲ್ಲಿ ಚಂಚಲತೆ

ಏಕೆಂದರೆ ಅವೆರಡೂ ಜಾತ್ಯತೀತತೆಯ [illegible] ಬದ್ಧವಾಗಿರಲು ಸಿದ್ಧವಿಲ್ಲ. ಕೋಮುವಾದದ ವಿರುದ್ಧ ಹೋರಾಡಲು ಸಿದ್ಧವಿಲ್ಲ. ಕುಣಿಯಲಾರದವನು ರಂಗಸ್ಥಳ ಸೊಟ್ಟ ಎಂದಂತೆ. ಬಿ.ಜೆ.ಪಿ. ಸ್ವತಃ ಒಂದು ಕೋಮುವಾದಿ ಪಕ್ಷ. ಹಿಂದೂ ಕೋಮಿನ ಕಲ್ಪನೆಗಳನ್ನು, ನಂಬಿಕೆಗಳನ್ನು ಇಡೀ ದೇಶದ ರಾಜಕೀಯದ ಮೇಲೆ ಹೇರಬೇಕೆನ್ನುವ ಪಕ್ಷ. ಆದ್ದರಿಂದ ಇಸ್ಲಾಮೀ ಮೂಲಭೂತವಾದಿ ಸಂಘಟನೆಗಳಷ್ಟೇ 'ಕೋಮುವಾದಿ'ಎಂದು ಅರ್ಥೈಸಿ ತನ್ನ ಸಂಕುಚಿತತೆಗೆ 'ಜಾತ್ಯತೀತತೆಯ' ಚರ್ಮಹೊದಿಸುವ ತನಕ ಅದಕ್ಕೆ ಕಾಂಗ್ರೆಸ್ ಸ್ವತಃ ಒಂದು ಕೋಮುವಾದಿ ಪಕ್ಷ ಅಲ್ಲ. ಆದರೆ ಈ ಪಕ್ಷ ಕೋಮುವಾದದ ಜತೆಗೆ ಭಾರೀ ರಾಜಿ ಮಾಡಿಕೊಳ್ಳುತ್ತಾ ಬಂದಿದೆ. ಆದ್ದರಿಂದ 'ಜಾತ್ಯತೀತತೆ'ಯ ನಿರ್ವಚನೆಯನ್ನೇ ಬದಲಿಸಿದರೆ ಇಂತಹ ಭಾರೀ ರಾಜಿಗಳಿಗೆ ಬಹಳ ಅನುಕೂಲವಾಗುತ್ತದೆಂದು ಕಾಂಗ್ರೆಸ್(ಐ) ನ ನಿರೀಕ್ಷೆ.

ಒಟ್ಟಿನಲ್ಲಿ ಕೋಮುವಾದದೊಂದಿಗೆ ಬಹಿರಂಗ ಗೆಳೆತನ ಅಥವಾ ಅದರೊಡನೆ ಭಾರೀ ಮಟ್ಟದ ರಾಜಿ, ಒಪ್ಪಂದ- ಇದು ಬಿಜೆಪಿ ಮತ್ತು ಕಾಂಗ್ರೆಸ್(ಐ)ನ ರಾಜಕೀಯದ ಜೀವಾಳವಾದ್ದರಿಂದ ಅಂತಹ ಅನೀತಿಯುತ ರಾಜಕೀಯಕ್ಕೆ ಅವಕಾಶ ನೀಡಲಾರದ 'ಕೋಮುವಾದ', 'ಜಾತ್ಯತೀತ' ಎಂಬ ಪರಿಕಲ್ಪನೆಗಳ ಮೇಲೆಯೇ ಕೋಪ.

ಆದರೆ ಜಾತ್ಯತೀತತೆ ಬಗ್ಗೆ ಈ ಚಂಚಲತೆ ಕೇವಲ ಈ ಎರಡು ಬಂಡವಾಳಶಾಹೀ ಪಕ್ಷಗಳದ್ದೇ ಲಕ್ಷಣ ವೆಂದೇನೂ ಅಲ್ಲ. ಜನತಾದಳ ಹಾಗೂ ರಾಷ್ಟ್ರೀಯ ರಂಗದ ಇತರ ಅಂಗಗಳ ಮಟ್ಟಿಗೂ ಇದು ನಿಜ. ಬಿ.ಜೆ.ಪಿ., ಕಾಂಗ್ರೆಸ್(ಐ) ಹಾಗೂ ಈ ಪಕ್ಷಗಳಿಗೆ ಸ್ವಲ್ಪ ಮಟ್ಟಿನ ವ್ಯತ್ಯಾಸವಿರಬಹುದಷ್ಟೆ. ಸಮಾಜದ ಕೋಮುವಾದಿ ಶಕ್ತಿಗಳನ್ನು ಅವು ಎಂದೂ ಸತತವಾಗಿ ವಿರೋಧಿಸಿಕೊಂಡು ಬಂದಿಲ್ಲ. ರಾಜಕೀಯ ಅಧಿಕಾರಕ್ಕೆ ಅಗತ್ಯ ಎಂದು ಕಂಡು ಬಂದಾಗ ಅವು ಈ ಹೋರಾಟದಲ್ಲಿ ಹಿಂದೇಟು ಹೊಡೆದಿವೆ.

ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್(ಐ)ನ್ನು ಸೋಲಿಸುವ ಜತೆಗೇ ಕೋಮುವಾದಿ ಶಕ್ತಿಗಳನ್ನು ಮೂಲೆ ಗುಂಪು ಮಾಡಿ ಎಂದು ಸಿ.ಪಿ.ಐ(ಎಂ) ಹಾಗೂ ಇತರ ಎಡಪಕ್ಷಗಳು ಕರೆ ನೀಡಿದ್ದವು. ಕೋಮುವಾದಿ ಶಕ್ತಿಗಳು ದೇಶದ ಐಕ್ಯತೆಗೆ ಒಡ್ಡಿದ್ದ ಸವಾಲಿನ ತೀವ್ರತೆಯನ್ನು ಆಗಲೇ ಅರಿತಿದ್ದರಿಂದ ಎಡಶಕ್ತಿಗಳು ಈ ಕರೆ ಕೊಟ್ಟಿದ್ದವು. ಆದರೆ ಜನತಾದಳ, ರಾಷ್ಟ್ರೀಯರಂಗದ ಕೆಲವು ಮುಖಂಡರು ಕೋಮುವಾದಿಶಕ್ತಿಗಳನ್ನು ಮೂಲೆಗುಂಪು ಮಾಡುವ ಅಗತ್ಯವನ್ನು ಮನಗಾಣದೆ ಹಲವೆಡೆ ಬಿ.ಜೆ.ಪಿ.ಯೊಡನೆ ಹೊಂದಾಣಿಕೆ ಮಾಡಿಕೊಂಡರು. ಜಾತ್ಯತೀತತೆಯ ನೀತಿಯನ್ನು ಸಡಿಲ ಗೊಳಿಸಿದರು. ಅದರ ಫಲ ನಮ್ಮೆದುರಿಗಿದೆ.

ಈಗಿನ ವಿ.ಪಿ.ಸಿಂಗ್ ಮತ್ತಿತರ ಜನತಾದಳದ ಮುಖಂಡರು ಬಿ.ಜೆ.ಪಿ. ಕೋಮುವಾದೀ ಬೆದರಿಕೆಗೆದುರಾಗಿ ದೇಶದ ಜಾತ್ಯತೀತ ಸ್ವರೂಪವನ್ನು ಬಹಳ ಬೆಲೆತೆತ್ತು ಎತ್ತಿ ಹಿಡಿದಿರುವಾಗ, ಜನತಾದಳದ ಇನ್ನು ಕೆಲವು ಮುಖಂಡರು ಇಂತಹ ಕಠಿಣ ಸನ್ನಿವೇಶದಲ್ಲಿ ತಮ್ಮ ಸರಕಾರದ ಬೆಂಬಲಕ್ಕೆ ನಿಂತು ಪಕ್ಷದ ಐಕ್ಯತೆ ಕ್ರೋಢೀಕರಿಸುವ ಕೋಮುವಾದದ ಸವಾಲನ್ನು ಐಕ್ಯತೆಯಿಂದ ಎದುರಿಸುವ ಬದಲು ಬೇರೆ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿರುವುದು ಕೂಡಾ ಒಂದು ಬಂಡವಾಳಶಾಹೀ ಪಕ್ಷ ತಾನು ಒಪ್ಪಿರುವ ಜಾತ್ಯತೀತ ನೀತಿಯ ಬಗ್ಗೆ ತೋರುವ ಚಂಚಲತೆಯ ಇನ್ನೊಂದು ನಿದರ್ಶನ.

ಏಕೆ ಈ ಚಂಚಲತೆ?

ಏಕೆ ಹೀಗೆ ಬಂಡವಾಳಶಾಹೀ ಪಕ್ಷಗಳು ಇಂತಹ ಚಂಚಲತೆ ಆಗಾಗ ತೋರ್ಪಡಿಸುತ್ತವೆ? ಹಿಂದೆ ಹೇಳಿದಂತೆ ಜಾತ್ಯತೀತತೆಯ ಪರಿಕಲ್ಪನೆ ಮೂಡಿಬಂದಿರುವುದೇ ಬಂಡವಾಳಶಾಹೀ ವರ್ಗವೊಂದರ ಬೆಳವಣಿಗೆಯೊಂದಿಗೆ. ಭಾರತದಲ್ಲೂ ಇದು ನಿಜ. ಆದರೆ ಈ ಬೂರ್ಜ್ವಾ ವರ್ಗ ಯುರೋಪಿನಲ್ಲೂ ಪೂರ್ಣವಾಗಿ ಜಾತ್ಯತೀತ ಅಥವಾ ಪ್ರಜಾಪ್ರಭುತ್ವವಾದಿಯಾಗಲಿಲ್ಲ. ಅಂದರೆ ತಾನೇ ಸೃಷ್ಟಿಸಿದ ಪರಿಕಲ್ಪನೆಗಳನ್ನು ಸ್ವತಃ ತಾನೇ ಪೂರ್ಣವಾಗಿ ಪಾಲಿಸಲಿಲ್ಲ. ಎಲ್ಲೆಲ್ಲಿ ಎಷ್ಟರ ಮಟ್ಟಿಗೆ ಹಳೆಯ ಪಾಳೆಯಗಾರೀ ಮೌಲ್ಯಗಳನ್ನು ನಾಶಮಾಡಲಾಗಿತ್ತೋ ಅಷ್ಟರ ಮಟ್ಟಿಗೆ ಅಲ್ಲಿಯ ಬಂಡವಾಳಶಾಹೀ ವರ್ಗ ಹೆಚ್ಚು ಜಾತ್ಯತೀತವಾಗಿರುವುದು ಕಂಡುಬಂದಿದೆ.

ಉದಾಹರಣೆಗೆ ರಾಜಪ್ರಭುತ್ವದ ವಿರುದ್ಧ ಅತ್ಯಂತ ತೀವ್ರ ಹಾಗೂ ಯಶಸ್ವೀ ಹೋರಾಟ ನಡೆಸಬೇಕಾಗಿ ಬಂದ ಫ್ರಾನ್ಸಿನ ಬಂಡವಾಳಶಾಹಿ, ಸ್ವಲ್ಪ ಸುಲಭವಾಗಿಯೇ ಪಾಳೆಯಗಾರಿ ಶಕ್ತಿಗಳನ್ನು ತನ್ನ ಅಡಿಯಾಳಾಗಿ ಮಾಡಿಕೊಳ್ಳುವಲ್ಲಿ ಯಶಸ್ವಿಯಾದ ಬ್ರಿಟಿಷ್ ಬಂಡವಾಳಶಾಹಿಗಿಂತ ಹೆಚ್ಚು ಜಾತ್ಯತೀತ ಹಾಗೂ ಪ್ರಜಾಪ್ರಭುತ್ವವಾದಿಯಾಗಿತ್ತು.

ಭಾರತದಲ್ಲಿ ಬಂಡವಾಳಶಾಹೀ ವರ್ಗ ಕಾಂ.ಇ.ಎಂ.ಎಸ್.ಲೇಖನದಲ್ಲಿ (ಐಕ್ಯರಂಗ, ಅಕ್ಟೋಬರ್ 28, 1990) ವಿವರಿಸಿರುವಂತೆ ಪಾಳೆಯಗಾರೀ ಶಕ್ತಿಗಳೊಂದಿಗೆ ರಾಜಿ ಮಾಡಿಕೊಂಡ ವಿಶಿಷ್ಟ ಸನ್ನಿವೇಶದ ಫಲವಾಗಿ ಅದರ ಜಾತ್ಯತೀತತೆಯ ಅನುಷ್ಠಾನದಲ್ಲಿ ಇನ್ನಷ್ಟು ಹೆಚ್ಚಿನ ಚಂಚಲತೆ ಕಂಡುಬಂದಿದೆ. ಭೂಮಾಲಕ ಪಾಳೆಯಗಾರೀ ಶಕ್ತಿಗಳೊಂದಿಗೆ ಸಖ್ಯತೆ, ಅದರಿಂದಾಗಿ ಪಾಳೆಯಗಾರೀ ತತ್ವಗಳೊಂದಿಗೆ ರಾಜಿ-ಇದು ಬಂಡವಾಳಶಾಹೀ ವರ್ಗದ ಮಿತಿ. ಈ ಮಿತಿಯ ಫಲವೇ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ವಿವಿಧ ಬಂಡವಾಳಶಾಹೀ ಪಕ್ಷಗಳು ಪ್ರದರ್ಶಿಸುವ ಚಂಚಲತೆ.

ಕೋಮು ರಾಜಕೀಯದ ಆರಂಭ

ಐಕ್ಯ ಭಾರತ ದೇಶ ಎರಡು ಪರಸ್ಪರ ವೈರಿ ಪ್ರಭುತ್ವಗಳಾಗಿ 1947 ರಲ್ಲಿ ವಿಭಜನೆಗೊಂಡುದರ ಒಂದು ಪರಿಣಾಮವೆಂದರೆ ಸ್ವಾತಂತ್ರ್ಯನಂತರದ ಭಾರತದಲ್ಲಿ ಹಿಂದೂ ಕೋಮುವಾದ ಇನ್ನಷ್ಟುಬಲಗೊಂಡದ್ದು. ಪಾಕಿಸ್ತಾನಕ್ಕೆ ಮಾಡಬೇಕಾದ ಪಾವತಿಗಳನ್ನು ಆಗಿನ ಉಪಪ್ರಧಾನಿ ಸರ್ದಾರ್ ಪಟೇಲರು ನಿಲ್ಲಿಸಿದುದನ್ನು ವಿರೋಧಿಸಿ ಮಹಾತ್ಮಾಗಾಂಧಿ ಉಪವಾಸ ಸತ್ಯಾಗ್ರಹ ಮಾಡಿದರು. ಕೋಮು ಸೌಹಾರ್ದಕ್ಕಾಗಿ ಗಾಂಧೀಜಿಯವರು ಪದೇ ಪದೇ ಮನವಿ ಮಾಡಿಕೊಳ್ಳುತ್ತಿದ್ದುದರಿಂದ ಕ್ರುದ್ಧರಾಗಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘದವರು ಗಾಂಧೀಜಿಯವರನ್ನು ಮುಗಿಸಿಬಿಡಬೇಕೆಂದು ನಿರ್ಧರಿಸಿದರು. ಒಬ್ಬ ಆರ್.ಎಸ್.ಎಸ್. ಕಾರ್ಯಕರ್ತ ನಾಥೂರಾಮ್ ಗೋಡ್ಸೆ ಅದನ್ನು ನೆರವೇರಿಸಿಯೇ ಬಿಟ್ಟ. ಆದರೆ ಇದು ಜನತೆ ಹೌಹಾರುವಂತೆ ಮಾಡಿತು. ಜನರನ್ನು ಸಿಟ್ಟಿಗೆಬ್ಬಿಸಿತು. ಸರ್ದಾರ ಪಟೇಲರೇ ಆರ್‌ಎಸ್‌ಎಸ್‌ನ್ನು ನಿಷೇಧಿಸಬೇಕಾಯಿತು. ಆದರೆ ನಂತರ ಅದೇ ಪಟೇಲರು ಈ ಕೋಮುವಾದಿ ಸ್ವಯಂಸೇವಕರನ್ನು ಕಾಂಗ್ರೆಸ್ಸಿನ ಸ್ವಯಂಸೇವಕರಾಗಿ ಪರಿವರ್ತಿಸುವ ದೃಷ್ಟಿಯಿಂದ ಆ ಸಂಘಟನೆಯ ಮುಖಂಡರೊಂದಿಗೆ ಮಾತುಕತೆಗಿಳಿದರು! ಕಾಂಗ್ರೆಸ್ ಮುಖಂಡತ್ವದ ಒಂದು ವಿಭಾಗ ಹಾಗೂ ಅರೆ-ಫ್ಯಾಸಿಸ್ಟ್ ಕೋಮುವಾದಿ ಸಂಘಟನೆಯ ಮುಖಂಡತ್ವದ ನಡುವೆ ಸಂಪರ್ಕವಿತ್ತೆಂದು ಸ್ವಾತಂತ್ರ್ಯದ ಆ ಮೊದಲ ದಿನಗಳಲ್ಲೇ ಸ್ಪಷ್ಟಪಟ್ಟಿತ್ತು.

ದೇಶದ ಚುನಾವಣಾ ರಾಜಕೀಯದ ಮೇಲೆ ಇದರ ಪ್ರಭಾವ ಕಂಡು ಬಂತು. 195 2ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಗಳಲ್ಲಿ ಹಿಂದೂ ಮಹಾಸಭಾ, ರಾಮರಾಜ್ಯ ಪರಿಷತ್ ಮುಂತಾದ ಕೋಮು ಸಂಘಟನಾ ಚುನಾವಣೆಗಳಲ್ಲಿ ಸ್ಪರ್ಧಿಸಿದವು. ಇವೇ ಮುಂದೆ ಕ್ರೋಢೀಕರಣಗೊಂಡು ಭಾರತೀಯ ಜನ ಸಂಘವಾಯಿತು ಇದು ದೇಶದಲ್ಲಿ ಹಿಂದೂ ಕೋಮುವಾದಿ ರಾಜಕೀಯದ ಹಿನ್ನೆಲೆ.

ಇದಕ್ಕೆ ಸಮಾನಾಂತರವಾಗಿ ಅಲ್ಪಸಂಖ್ಯಾತರಲ್ಲೂ ಕೋಮು ಸಂಘಟನೆಗಳ ಸುತ್ತ ಇಂತಹುದೇ ಕ್ರೋಢೀಕರಣ ನಡೆಯಿತು. ತಮಿಳುನಾಡು, ಮಲಬಾರದಲ್ಲಿ ಮುಸ್ಲಿಂ ಲೀಗ್, ಪಂಜಾಬಿನಲ್ಲಿ ಅಕಾಲಿ ಪಕ್ಷ ದೃಢಗೊಂಡದ್ದು ಹೀಗೆ. ಕ್ರೈಸ್ತ ಕೋಮಿನಲ್ಲಿ ಹೀಗೆ ಒಂದು ನಿರ್ದಿಷ್ಟ ಪಕ್ಷದ ಸುತ್ತ ಕೋಮುವಾದಿಗಳ ಕ್ರೋಢೀಕರಣ ನಡೆಯ ದಿದ್ದರೂ ಹಲವೆಡೆ ಕಾಂಗ್ರೆಸ್‌ನೊಳಗೇ ವಿವಿಧ ಚರ್ಚ್ ಸಂಘಟನೆಗಳು ಆಗಾಗ ಒತ್ತಡ ಹಾಕುವ ಶಕ್ತಿ ಬೆಳೆಸಿಕೊಂಡವು. ತಿರುವಾಂಕೂರು - ಕೊಚ್ಚಿನ್‌ನಲ್ಲಿ ಸಾಕಷ್ಟು ಕಾಂಗ್ರೆಸ್ ಎಂ.ಪಿ.ಗಳು, ಎಂ.ಎಲ್.ಎ.ಗಳು ಚರ್ಚ್ ಶಿಸ್ತಿಗೊಳಪಟ್ಟಿದ್ದರು. ಹಾಗೇ ಈಶಾನ್ಯ ಭಾರತದಲ್ಲೂ ರಾಜಕೀಯದ ಮೇಲೆ ಚರ್ಚಿನ ಸಂಘಟಿತ ಪ್ರಭಾವ ಮೂಡಿ ಬಂತು.

ಹೀಗೆ ರಾಷ್ಟ್ರದ ರಾಜಕಾರಣದ ಈ ಹೊಸ ಘಟ್ಟದಲ್ಲಿ, ನಡೆದ 1952 ರ ಚುನಾವಣೆಗಳಲ್ಲಿ ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದ್ದ ಕಾಂಗ್ರೆಸ್ ಪಕ್ಷಕ್ಕೆ ದೊರೆತ ಮತಗಳು 48% ವಷ್ಟೆ ಉಳಿದ 52% ಮತಗಳಲ್ಲಿ ಹಿಂದೂ ಹಾಗೂ ಹಿಂದೂ ಯೇತರ ಕೋಮು ಪಕ್ಷಗಳು ಸಾಕಷ್ಟು ಪಾಲುಗಿಟ್ಟಿಸಿ ತಮ್ಮ ಪ್ರಭಾವವನ್ನು ತೋರಿಸಿಕೊಟ್ಟವು. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಜಾತಿ--ಮತ ಭಾಷೆಗಳ ಭೇದವಿಲ್ಲದೆ ಕಟ್ಟಿದ ಐಕ್ಯತೆಗೆ ಹೀಗೆ ಸ್ವತಂತ್ರ ಭಾರತದಲ್ಲಿ ತೀವ್ರ ಸವಾಲು ಬಂದಿತ್ತು. ಕಾಂಗ್ರೆಸ್ ಈ ಸವಾಲನ್ನು ಸ್ವೀಕರಿಸಿ ದೇಶದ ಐಕ್ಯತೆ ಕಾಪಾಡುವ ಬದಲು ಒಂದಿಲ್ಲೊಂದು ಕೋಮು ಸಂಘಟನೆಗಳೊಂದಿಗೆ ರಾಜಿಮಾಡಿಕೊಳ್ಳುವುದೇ ಅಧಿಕಾರದಲ್ಲಿರಲು ಸುಲಭಮಾರ್ಗ ಎಂದು ಆರಿಸಿಕೊಂಡಿತು. ಬಂಡವಾಳಶಾಹಿಗಳ ಈ ಪ್ರಮುಖ ರಾಜಕೀಯ ಪಕ್ಷದ ಜಾತ್ಯತೀತತೆಯಲ್ಲಿ ಸ್ವತಂತ್ರ ಭಾರತದ ಆರಂಭದಿಂದಲೇ ಕಂಡುಬಂದ ಅಪಾಯಕಾರೀ ದುರ್ಬಲತೆ ಇದು.

ಇನ್ನು ಇತರ ಬಂಡವಾಳಶಾಹೀ ಪಕ್ಷಗಳನ್ನು ಪರಿಶೀಲಿಸೋಣ. ಹಿಂದಿನ ಜನಸಂಘ ಹಾಗೂ ಈಗಿನ ಬಿ.ಜೆ.ಪಿ. ಯಂತೂ ತನ್ನ ಬಲಪಂಥೀಯ ರಾಜಕಾರಣಕ್ಕೆ ಬಹುಸಂಖ್ಯಾತ ಕೋಮುವಾದವೇ ಒಳ್ಳೆಯ ಆಧಾರ ಎಂದು ಪರಿಗಣಿಸಿ

> ದೇಶದ ರಾಜಕೀಯ ವ್ಯವಸ್ಥೆಯಲ್ಲಿರುವ ಕೋಮುವಾದದ ರೋಗಕ್ಕೆ ಇರುವುದು ಒಂದೇ ಮದ್ದು - ಎಲ್ಲಾ ಜಾತಿ, ಕೋಮುಗಳ ದುಡಿಯುವ ಜನರನ್ನು ಅವರ ಬೇಡಿಕೆ, ಒತ್ತಾಯಗಳ ಆಧಾರದಲ್ಲಿ ಒಂದಾಗಿಸುವುದು. ದುಡಿಯುವ ಜನರ್ವರ್ಗ ಮತ್ತು ರಾಜಕೀಯ ಹೋರಾಟಗಳ ಮೂಲಕ ಈ ಅಡ್ಡಗೋಡೆಗಳನ್ನೆಲ್ಲಾ, ಹಳಸಲು ತತ್ವಗಳನ್ನೆಲ್ಲಾ ಮೀರಿ ನಿಲ್ಲುವುದು. ಭಾರತದ ಜಾತ್ಯತೀತ ಪಕ್ಷಗಳ ದೊಡ್ಡ ದೌರ್ಬಲ್ಯವೆಂದರೆ ಅವರು ಈ ಹಾದಿ ಹಿಡಿಯಲು ಸಿದ್ಧರಿಲ್ಲ. ಮಾತಿನ ಮಂಟಪ ಕಟ್ಟಿಯೇ ಕೈತೊಳೆದು ಕೊಳ್ಳಬಯಸುತ್ತಾರೆ.

ರುವ ಪಕ್ಷ. ಇತರ ಪಕ್ಷಗಳು ಭಾರತದಂತಹ ಬಹುಧರ್ಮೀಯ ಬಹು ಭಾಷಾ ದೇಶದಲ್ಲಿ ಇಂತಹ ಸಂಕುಚಿತ ಆಧಾರ ಸಾಧ್ಯವಿಲ್ಲ ಎಂದು ಮನಗಂಡು ಜಾತ್ಯತೀತತೆಯನ್ನು ಒಪ್ಪಿಕೊಂಡರೂ ತಮ್ಮ ಪ್ರಮುಖ ಪ್ರತಿಸ್ಪರ್ಧಿ ಕಾಂಗ್ರೆಸನ್ನು ಅಧಿಕಾರದಿಂದಿಳಿಸಲು ದೇಶದ ರಾಜಕಾರಣದಲ್ಲಿ ಗಮನಾರ್ಹ ಪ್ರಭಾವ ಬೆಳೆಸಿಕೊಂಡಿರುವ ಜನಸಂಘ/ಬಿ.ಜೆ.ಪಿ.ಯ ನೆರವು ಪಡೆಯಲು ಕೋಮುಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳಲು ಹಲವು ಬಾರಿ ತಮ್ಮ ಚಂಚಲತೆಯನ್ನು ಪ್ರದರ್ಶಿಸಿವೆ. ಇದು ರಾಜ್ಯಗಳ ಮಟ್ಟದಲ್ಲಿ, 1967ರಲ್ಲಿ, 1971ರಲ್ಲಿ ಕಂಡು ಬಂದರೆ 1971ರಲ್ಲಿ, 1977 ರಲ್ಲಿ ಹಾಗೂ 1989ರಲ್ಲಿ ರಾಷ್ಟ್ರ ಮಟ್ಟದಲ್ಲೂ ಕಂಡು ಬರತು. 1971 ರ 'ಮಹಾ ಮೈತ್ರಿ ಕೂಟ'ದಲ್ಲಿ ಜನ ಸಂಘವನ್ನು ಸೇರಿಸಿಕೊಳ್ಳಲಾಯಿತು. 1977 ಜನ ಸಂಘವನ್ನು ಜನತಾಪಕ್ಷದಲ್ಲಿ ವಿಲೀನಗೊಳಿಸಿಕೊಳ್ಳಲಾಯಿತು. 1989 ರಲ್ಲಿ ಜನತಾ ಪಕ್ಷದಿಂದ ಆರ್.ಎಸ್.ಎಸ್.ನ ಸಂಬಂಧದಿಂದಾಗಿ ಹೊರಬಂದು. ಹೊಸ ಅವಕಾಶಗಳಿಂದ ಬಿ.ಜೆ.ಪಿ.ಯೊಂದಿಗೆ ಅಲ್ಲಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಯಿತು. ಕಾಂಗ್ರೆಸ್ಸೇತರ ಬಂಡವಾಳಶಾಹಿ ಪಕ್ಷಗಳ ಈ ಚಂಚಲತೆಯಿಂದಾಗಿ ಪ್ರತಿಬಾರಿಯೂ ಜನರ ಕಾಂಗ್ರೆಸ್(ಐ) ವಿರೋಧಿ ಭಾವನೆಯನ್ನು ಕ್ರೋಢೀಕರಿಸುವ ಯತ್ನ ವಿಫಲವಾಗುವಂತಾಯಿತು.

ಬಂಡವಾಳಶಾಹೀ ಪಕ್ಷಗಳ ಈ ಚಂಚಲತೆ ನಮ್ಮ ದೇಶದ ಸಂವಿಧಾನದಲ್ಲೂ ಪ್ರತಿಫಲನಗೊಂಡಿದೆ ಎಂಬುದೂ ಗಮನಾರ್ಹ.

ಸಂವಿಧಾನ ಮಂತ್ರಿಗಳ ಸಂಸತ್ ಹಾಗೂ ವಿಧಾನ ಮಂಡಲಗಳ ಸದಸ್ಯರ ಪ್ರತಿಜ್ಞೆ ಸ್ವೀಕಾರದ ಎರಡು ವಿಧಾನಗಳನ್ನು ಸೂಚಿಸಿದೆ. ಧರ್ಮಗಳಲ್ಲಿ ನಂಬಿಕೆಯಿಲ್ಲದವರು 'ಗಂಭೀರ ಪ್ರತಿಜ್ಞೆ' ಸ್ವೀಕರಿಸಬಹುದು. ಇತರರು ದೇವರ ಹೆಸರಿನಲ್ಲಿ ಪ್ರತಿಜ್ಞೆ ಸ್ವೀಕರಿಸಬಹುದು- ಅದೂ ಹಿಂದೂಗಳ ಸಾವಿರಾರು ದೇವರುಗಳು ಮತ್ತು ಇತರ ಧರ್ಮಗಳ ದೇವರುಗಳ ಹೆಸರಿನಲ್ಲಿ ಅಲ್ಲ--- ಕೇವಲ ಒಂದು ಸರ್ವಸಾಮಾನ್ಯ 'ದೇವರ' ಹೆಸರಿನಲ್ಲಿ. ಇದು ಮತ್ತು ನಾಸ್ತಿಕತೆಯನ್ನು ಒಂದು ನ್ಯಾಯಬದ್ಧ ಪಂಥ ಎಂದು ಸ್ವೀಕರಿಸಿರುವುದು ಜಾತ್ಯತೀತತೆಯ ದಿಕ್ಕಿನಲ್ಲಿ ಒಂದು ಸರಿಯಾದ ಹೆಜ್ಜೆ.

ಆದರೆ ಇದೇ ಸಂವಿಧಾನ ಧಾರ್ಮಿಕ ತತ್ವಗಳೊಂದಿಗೂ ಭಾರೀ ರಾಜಿ ಮಾಡಿಕೊಂಡಿರುವುದಕ್ಕೆ ಗೋಹತ್ಯೆ ಮೇಲೆ ನಿರ್ಬಂಧವನ್ನು ನಿರ್ದೇಶಕ ಸೂತ್ರಗಳಲ್ಲೇ ಸೇರಿಸಿರುವುದು ಒಂದು ಉದಾಹರಣೆ. ಇದು ಸಂಪೂರ್ಣವಾಗಿ ಒಂದು ಹಿಂದೂ ಆಚರಣೆ. ಅತ್ತ ಅಲ್ಪಸಂಖ್ಯಾತರು ನಡೆಸುವ ಶಿಕ್ಷಣ ಸಂಸ್ಥೆಗಳಿಗೆ ಸರಕಾರೀ ಹಣಕಾಸು ನೆರವು ನೀಡುವುದು ಕಡ್ಡಾಯ ಎಂದು ವಿಧಿಸಿ ಅಲ್ಪಸಂಖ್ಯಾತರನ್ನು ತುಷ್ಟಿಗೊಳಿಸಲು ಪ್ರಯತ್ನಿಸಿದೆ. ಪಾನ ವಿರೋಧವನ್ನೂ ನಿರ್ದೇಶಕ ಸೂತ್ರಗಳಲ್ಲಿ ಸೇರಿಸಲಾಗಿದೆ. ಇದೆಲ್ಲಾ ಒಂದು ಜಾತ್ಯತೀತ ಪ್ರಜಾಪ್ರಭುತ್ವಕ್ಕೆ ಮಾಡಿರುವ ಅಪಹಾಸ್ಯ.

ಅಂದರೆ ಜಾತ್ಯತೀತತೆ ಕುರಿತಂತೆ ವಿವಿಧ ಬಂಡವಾಳಶಾಹಿಗಳಲ್ಲಿ ಕಂಡು ಬರುವ ಏರು-ಪೇರು, ಚಂಚಲತೆ, ಸಮಯ ಸಾಧಕತೆಗೆ ಮುಖ್ಯ ಕಾರಣ ನಮ್ಮ ದೇಶದ ಆಳುವ ಜನಗಳ ವರ್ಗ ಸ್ವಭಾವ ಕೋಮುವಾದದ ಮೂಲ ನಮ್ಮ ದೇಶದ ಸಾಮಾಜಿಕ--ಸಾಂಸ್ಕೃತಿಕ ವ್ಯವಸ್ಥೆಯಲ್ಲೇ ಹಿಂದೂ, ಮುಸ್ಲಿಂ, ಸಿಖ್, ಕ್ರಿಶ್ಚಿಯನ್ ಮತ್ತಿತರ ತತ್ವಗಳನ್ನು ಒಳಗೊಂಡ ವ್ಯವಸ್ಥೆಯಲ್ಲೇ ಇದೆ. ಬ್ರಿಟಿಷರು ಇದನ್ನು ಚಾಣಾಕ್ಷತನದಿಂದ ಬಳಸಿದರು. ಸ್ವಾತಂತ್ರ್ಯ ಆಂದೋಲನ, ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ಈ ಭೇಧ ಭಾವಗಳನ್ನು, ಅಡ್ಡಗೋಡೆಗಳನ್ನು ಮೀರಿ ಐಕ್ಯತೆಯನ್ನು ಕಟ್ಟುವಲ್ಲಿ ಸಫಲವಾಯಿತು. ಆದರೆ ಈ ಐಕ್ಯತೆ ತಂದಿದ್ದ ಭಾರತ ದೇಶದ ಜನರೆಲ್ಲರ ವೈರಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ನಿರ್ಗಮನದೊಂದಿಗೆ ಈ ವಿವಿಧ ಧಾರ್ಮಿಕ ತತ್ವಗಳು ಮತ್ತೆ ತಲೆಯೆತ್ತಿದವು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಾತಾವರಣದಲ್ಲಿ, ವಿವಿಧ ಧಾರ್ಮಿಕ ತತ್ವಗಳ, ಪಾಳೆಯಗಾರೀ ಮೌಲ್ಯಗಳ ನಡುವಿನಿಂದ ಬಂದ ಭಾರತದ ಬಂಡವಾಳಶಾಹೀ ವರ್ಗ ಸ್ವತಂತ್ರ ಭಾರತದಲ್ಲಿ ಪ್ರಗತಿಗೆ ಅಡ್ಡಿಮಾಡಿರುವ ಎಲ್ಲಾ ಊಳಿಗಮಾನ್ಯ ಮೌಲ್ಯಗಳನ್ನು ತತ್ವಗಳನ್ನು ನಾಶಮಾಡಿ ಮುಕ್ತ ಬಂಡವಾಳಶಾಹೀ ವ್ಯವಸ್ಥೆ ಕಟ್ಟುವುದು ಹೇಗೆಂದು ಮನಗಾಣದೆ ಊಳಿಗಮಾನ್ಯ ತತ್ವಗಳೊಂದಿಗೆ ಭೂಮಾಲಕ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳುವುದೇ ತನ್ನ ಅಧಿಕಾರವನ್ನು ಸಾರ್ವತ್ರಿಕ ಗೊಳಿಸುವ ಮಾರ್ಗ ಎಂದು ಭಾವಿಸಿತು. ಅದರ ದುಷ್ಫಲವೇ ಜಾತ್ಯತೀತತೆಯ ಪಾಲನೆಯಲ್ಲಿ ಕಂಡುಬರುವ ಸಮಯಸಾಧಕತೆ ಮತ್ತು ಅದಕ್ಕೆ ದೇಶದ ಸಾವಿರಾರು ಮುಗ್ಧರ, ದೇಶದ ಪ್ರಗತಿಯ ಬಲಿ.

ದೇಶ ಕೋಮುವಾದದ ದವಡೆಗೆ ಸಿಲುಕಿ ನರಳಲಾರಂಭಿಸಿದಾಗಲೆಲ್ಲಾ ಬಂಡವಾಳಶಾಹೀ ಪಕ್ಷಗಳ ಮುಖಂಡರುಗಳು ರಾಷ್ಟ್ರೀಯವಾದದ ಮಾತನ್ನಾಡಿ ಅದನ್ನು ತಣಿಸಲು ಪ್ರಯತ್ನಿಸುತ್ತಾರೆ. ಆದರೆ ದೇಶದ ರಾಜಕೀಯ ವ್ಯವಸ್ಥೆಯನ್ನು ನಲುಗಿಸುತ್ತಿರುವ ಕೋಮುವಾದದ ರೋಗಕ್ಕೆ ಇದು ಮದ್ದಲ್ಲ. ಕೋಮುವಾದದ ವಿರುದ್ಧ ಸಫಲ ಹೋರಾಟದ ಒಂದೇ ದಾರಿಯೆಂದರೆ ಎಲ್ಲಾ ಜಾತಿ-ಕೋಮುಗಳ ದುಡಿಯುವ ಜನಗಳನ್ನು ಅವರ ಬೇಡಿಕೆ, ಒತ್ತಾಯಗಳ ಆಧಾರದಲ್ಲಿ ಒಂದಾಗಿಸುವುದು, ದುಡಿಯುವ ಜನರ ವರ್ಗ ಮತ್ತು ರಾಜಕೀಯ ಹೋರಾಟಗಳ ಮೂಲಕ ಈ ಅಡ್ಡಗೋಡೆಗಳನ್ನೆಲ್ಲಾ, ಹಳಸಲು ತತ್ವಗಳನ್ನು ಮೌಲ್ಯಗಳನ್ನೆಲ್ಲಾ ಮೀರಿ ನಿಲ್ಲುವುದು. ಭಾರತದ ಜಾತ್ಯತೀತ ಪಕ್ಷಗಳ ದೊಡ್ಡ ದೌರ್ಬಲ್ಯವೆಂದರೆ ಅವರು ಈ ದಾರಿಹಿಡಿಯಲು ಸಿದ್ಧರಿಲ್ಲ. ಮಾತಿನ ಮಂಟಪ ಕಟ್ಟಿಯೇ ತೃಪ್ತರಾಗ ಬಯಸುತ್ತಾರೆ. ಭೂಮಾಲಕ ಶಕ್ತಿಗಳೊಂದಿಗೆ ಪಾಳೆಯಗಾರೀ ತತ್ವಗಳ ಜತೆಗೆ ಬಿಡಿಸಿಕೊಳ್ಳದ ಬಂಧನ ಅವರನ್ನು ಇದಕ್ಕಿಂತ ಮುಂದೆ ಹೋಗಗೊಡುವುದಿಲ್ಲ. ಬದಲಿಗೆ ಈ ಲೇಖನದ ಆರಂಭದಲ್ಲಿ ಹೇಳಿದ ಪ್ರಶ್ನೆಗಳನ್ನು ಹುಟ್ಟಿಸುತ್ತದೆ!

ಆಧಾರ: ದಿ ಮಾರ್ಕ್ಸಿಸ್ಟ್ (ಜುಲೈ ಸೆಪ್ಟೆಂಬರ್ 1990)
ಪ್ರಕಟವಾದ ಕಾಂ. ಇ.ಎಂ.ಎಸ್. ನಂಬೂದರಿಪಾಡ್‌ರ ಲೇಖನ

ಕೋಮುವಾದದ ವಿರುದ್ಧ ಹೋರಾಟ ಮತ್ತು ಎಡಶಕ್ತಿಗಳು

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಮತ್ತು ನಂತರವೂ ಭಾರತದ ರಾಜಕಾರಣದಲ್ಲಿ ಒಂದು ಆಶಾಕಿರಣವೆಂದರೆ ಬಂಡವಾಳಶಾಹಿ-ರಾಷ್ಟ್ರೀಯ ಮತ್ತು ಜಾತ್ಯಾತೀತ ರಾಜಕೀಯ ಆಂದೋಲನದ ಜತೆಗೇ ಮಾರ್ಕ್ಸ್‌ವಾದಿಗಳ ನೇತೃತ್ವದ ಕಾರ್ಮಿಕರ, ರೈತರ ಆಂದೋಲನ. ಸ್ವಾತಂತ್ರ್ಯ ಸಮರದ ಕಾಲದಲ್ಲೇ ಈ ಆಂದೋಲನ ಬೆಳೆಯಲಾರಂಭಿಸಿತ್ತು. ದೇಶದಲ್ಲಿ ಮೊತ್ತಮೊದಲ ಬಾರಿಗೆ ಕಾರ್ಮಿಕರ, ರೈತರ, ಇತರ ದುಡಿಯುವ ಜನವಿಭಾಗಗಳ ಹೋರಾಟ ಶೀಲ ಸಂಘಟನೆಗಳನ್ನು ಕಟ್ಟಿ, ಅವನ್ನು ಸ್ವಾತಂತ್ರ್ಯ ಹೋರಾಟದೊಂದಿಗೆಜೋಡಿಸಿದವರು ಭಾರತ ಕಮ್ಯುನಿಸ್ಟ್ ಪಕ್ಷ,ಕಾಂಗ್ರೆಸ್ ಸಮಾಜವಾದಿ ಪಕ್ಷ ಮತ್ತು ಇತರ ಎಡ ಪಂಥೀಯರು. ಈ ಎಡಶಕ್ತಿಗಳ ಚಟುವಟಿಕೆಗಳು ಕ್ರಮೇಣ ಒಂದು ರಾಜಕೀಯ ಶಕ್ತಿಯಾಗಿ ಬೆಳೆದು ಜಾತಿ-ಕೋಮು ಸಂಘಟನೆಗಳ ದುಷ್ಟ ಚಟುವಟಿಕೆಗಳನ್ನು ಎದುರಿಸುವುದು ಸಾಧ್ಯವಾಯಿತು.

ಸ್ವಾತಂತ್ರ್ಯಾನಂತರ ಕೂಡಾ ಕಮ್ಯುನಿಸ್ಟರು ಮತ್ತು ಇತರ ಎಡಶಕ್ತಿಗಳು ಕ್ರಮೇಣ ಒಂದು ಗಮನಾರ್ಹ ರಾಜಕೀಯ ಶಕ್ತಿಯಾಗಿ ಬೆಳೆದು ಒಂದೆಡೆ ಕೋಮುವಾದಿ ಶಕ್ತಿಗಳನ್ನು,ಇನ್ನೊಂದೆಡೆ ಅವರೊಡನೆ ರಾಜಿ ಮಾಡಿಕೊಳ್ಳುವ ಕಾಂಗ್ರೆಸ್‌ನ್ನು ಎದುರಿಸುತ್ತಿವೆ. 1989ರಲ್ಲಿ, ಕಾಂಗ್ರೆಸ್(ಐ) ನ್ನು ಜನ ತಿರಸ್ಕರಿಸಿದಾಗ ಅದರ ಸ್ಥಾನದಲ್ಲಿ ಹಿಂದೂ ಕೋಮುವಾದಿಗಳಾಗಲಿ ಅಥವಾ ಕೋಮುವಾದಿಗಳಾಗಲಿ ಇರದ ರಾಷ್ಟ್ರೀಯ ರಂಗ ಸರ್ಕಾರ ಸ್ಥಾಪಿಸುವಲ್ಲಿ ಈ ಎಡ ಶಕ್ತಿಗಳ ಯಶಸ್ವಿ ಪಾತ್ರವನ್ನು ಇಲ್ಲಿ ನೆನೆಸಿಕೊಳ್ಳಬಹುದು. ದೇಶದ ಜಾತ್ಯಾತೀತ ಸ್ವರೂಪವನ್ನು ಕಾದುಕೊಳ್ಳುವಲ್ಲಿ ಎಡಶಕ್ತಿಗಳು ಬಹಳಷ್ಟು ಪ್ರಭಾವ ಬೀರುತ್ತಿವೆ.

ಹೇಗೆ ಇದು ಸಾಧ್ಯವಾಗಿದೆ?

ಯುರೋಪಿನಲ್ಲೂ ಪಾಳೆಯಗಾರೀ ವ್ಯವಸ್ಥೆಯನ್ನು ಮುರಿದು ಬಂದ ಬಂಡವಾಳಶಾಹಿ ತಾನೇ ಸೃಷ್ಟಿಸಿದ ಪರಿಕಲ್ಪನೆಗಳನ್ನು ತಾನೇ ಮುಂದುವರಿಸಲು ಹಿಂಜರಿದಾಗ ಅದನ್ನು ಮುಂದುವರಿಸಿದ್ದು ಈ ಹೊಸ ಬೂರ್ಜ್ವಾ ಸಮಾಜದಲ್ಲಿ ಗಮನಾರ್ಹ ಶಕ್ತಿಯಾಗಿ ಬೆಳೆಯುತ್ತಿದ್ದ ಕಾರ್ಮಿಕ ವರ್ಗ. ಯುರೋಪಿಯನ್ ಕಾರ್ಮಿಕ ವರ್ಗದ ಮುಖಂಡರು, ಮಾರ್ಕ್ಸ್ ಏಂಗೆಲ್ಸ್ ಪ್ರಜಾಪ್ರಭುತ್ವ, ಕ್ರಾಂತಿ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಾತ್ಯಾತೀತತೆ, ವಿಚಾರವಾದಕ್ಕಾಗಿ ಹೋರಾಟ ಮುಂದುವರಿಸಿದರು.

ಮೂಲತಃ ಅತಾರ್ಕಿಕವಾದ ಧರ್ಮಗಳು ಜನರ ಮನಸ್ಸಿನ ಮೇಲೆ ಇಷ್ಟೊಂದು ಬಿಗಿ ಹಿಡಿತ ಮುಂದುವರೆಸಲು ಹೇಗೆ ಸಾಧ್ಯ? ಇದು ಬೂರ್ಜ್ವಾ ವಿಚಾರವಾದಿಗಳಿಗೆ ಉತ್ತರಿಸಲಾಗದ ಪ್ರಶ್ನೆಯಾಗಿತ್ತು. ಮಾರ್[illegible] ಏಂಗೆ[illegible] ಸ್ಥಾಪಿಸಿದ ಆಧುನಿಕ ಸ[illegible]ಕ, ದ್ವಂದ್ವಾತ್ಮಕ [illegible] ಇದಕ್ಕೆ ಉತ್ತರ [illegible]ವನ್ನು ಧರ್ಮದ ಹಿಡಿತದಿಂದ ಹೇಗೆ ಬಿಡಿಸಬೇಕು ಎಂಬುದನ್ನೂ ಹೇಳಿತು. ಆದ್ದರಿಂದ ಧರ್ಮದ ವಿರುದ್ಧ ಸೈದ್ಧಾಂತಿಕ ಹೋರಾಟದೊಂದಿಗೆ ಶೋಷಕರ ವಿರುದ್ಧ ಸರ್ವಸಾಮಾನ್ಯ ಹೋರಾಟದಲ್ಲಿ ಧಾರ್ಮಿಕ ಭಾವನೆಯ ಜನಸಾಮಾನ್ಯರನ್ನೂ ಒಳಗೊಳ್ಳುವುದೂ ಸಾಧ್ಯವಾಯಿತು. ಧಾರ್ಮಿಕರು ಮತ್ತು ನಾಸ್ತಿಕರ ನಡುವೆ ಸಮಾನತೆ-ಇದೇ ತಾನೇ ಜಾತ್ಯಾತೀತತೆಯ ತಿರುಳು. ಇದು ವೈಜ್ಞಾನಿಕ ಸಮಾಜವಾದದ ತಿರುಳು ಕೂಡಾ.

ಬೂರ್ಜ್ವಾ ವರ್ಗದಿಂದ ವಿಮೋಚನೆಗಾಗಿ ಹೋರಾಡುವ ಕಾರ್ಮಿಕವರ್ಗ ಆ ವರ್ಗದ ಆರ್ಥಿಕ, ರಾಜಕೀಯ, ಸೈದ್ಧಾಂತಿಕ ಬಿಗಿ ಹಿಡಿತದಿಂದ ಎಲ್ಲಾ ದುಡಿಯುವ ಜನಗಳು ವಿಮೋಚನೆಗೆ ಒಂದು ದೃಢ ನೇತೃತ್ವ ನೀಡುತ್ತದೆ. ಇದು ಮಾರ್ಕ್ಸ್‌ವಾದದ ಬೋಧನೆಯ ತಿರುಳು.

ಇದರ ಆಧಾರದ ಮೇಲೆಯೇ ಭಾರತದಲ್ಲಿ ಕಮ್ಯುನಿಸ್ಟರು ಎಲ್ಲಾ ಜಾತಿ, ಮತ, ಭಾಷೆಗಳ ದುಡಿಯುವ ಜನರನ್ನು ಅವರ ಬೇಡಿಕೆಗಳ ಆಧಾರದ ಮೇಲೆ ಒಗ್ಗೂಡಿಸುವುದು, ಅವರ ರಾಜಕೀಯ, ವರ್ಗ ಹೋರಾಟಗಳನ್ನು ಬೆಳೆಸುವುದು ಜಾತಿ ಕೋಮು ಸಂಘರ್ಷಗಳನ್ನು ಮೀರಿ ನಿಲ್ಲುವ ಏಕೈಕ ಮಾರ್ಗ ಎಂದು ಪ್ರತಿಪಾದಿಸುತ್ತಿರುವುದು. ಇದರಲ್ಲಿ ಅವರು ಸಾಕಷ್ಟು ಯಶಸ್ಸು ಗಳಿಸಿರುವುದು ಇಂದಿನ ರಾಜಕಾರಣದಲ್ಲಿ ಅವರ ಗಮನಾರ್ಹ ಪ್ರಭಾವಕ್ಕೆ.

ಸೋವಿಯಟ್ ಜನತೆಗೆ ಶುಭಾಶಯ

ಪುಟ ಒಂದರಿಂದ

ಯಿಂದಲೂ ಸಿದ್ಧಪಡಿಸಿತು ಎಂದು ಬರೆದಿದ್ದಾರೆ. ಇದರಿಂದ ಕೋಟಿಗಟ್ಟಲೆ ಜನ ಸಮಾಜವಾದದತ್ತ ಸೆಳೆಯಲ್ಪಟ್ಟರು. ಪೌರ್ವಾತ್ಯ ದೇಶಗಳು ಫ್ಯಾಸಿಸಂನ ಸೋಲಿನ ಬೆನ್ನಹಿಂದೆಯೇ ತಮ್ಮ ಶತಮಾನಗಳ ಗುಲಾಮಿಕೆಯಿಂದ ವಿಮೋಚನೆಗೊಂಡು ವಿಶ್ವ ಸಮಾಜವಾದದ ಮಿತ್ರರಾಗಿ ನಿಂತರು. ವಿಶ್ವ ಶಾಂತಿಯ ಹೋರಾಟಗಾರರ ಸಂಖ್ಯೆ ಬಹುಪಾಲು ಹೆಚ್ಚಿತು. ಇದು ಸಾಧ್ಯವಾದದ್ದು ಸೋವಿಯತ್ ಜನತೆ ತಮ್ಮ ತಾಯ್ನಾಡನ್ನು ರಕ್ಷಿಸುತ್ತಲೇ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಒಂದು ಹಿಂದುಳಿದ ದೇಶವನ್ನು ಆಧುನಿಕ ಕೈಗಾರಿಕಾ ದೈತ್ಯವಾಗಿ ಮಾರ್ಪಡಿಸುವ ಮಹಾನ್ ಕೆಲಸ ಪೂರೈಸಿದ್ದರಿಂದ. ಅವರ ಸಮಾಜವಾದೀರಚನೆಯ ಯೋಜನೆಗಳು ಭಾರತವೂ ಸೇರಿದಂತೆ ಹಲವು ಪೂರ್ವದ ದೇಶಗಳಿಗೆ ಪ್ರೇರಣೆ ನೀಡಿದವು ಎಂದಿರುವ ಇ.ಎಂ.ಎಸ್. ಈ ಸಂದರ್ಭದಲ್ಲಿ ಭಾರತದ ಯೋಜನೆಗೆ ದೊರೆತ ಪ್ರೇರಣೆಯನ್ನು ತಮ್ಮ ಲೇಖನದಲ್ಲಿ ನೆನಪಿಸಿಕೊಟ್ಟಿದ್ದಾರೆ.

ಈ ಹಿನ್ನೆಲೆಯಲ್ಲಿ ಸೋವಿಯತ್ ಒಕ್ಕೂಟದ ಪ್ರಸ್ತುತ ವಿದ್ಯಮಾನಗಳಲ್ಲೇ ಉಲ್ಲೇಖಮಾಡುತ್ತಾ ಆರು ದಶಕಗಳಿಗಿಂತಲೂ ಹೆಚ್ಚಿನ ಸೋವಿಯತ್ ಯೋಜನಾ ಪ್ರಕ್ರಿಯೆಯಲ್ಲಿ ಹಲವು ಉತ್ತಮ ಅಂಶಗಳಿದ್ದರೆ ಕೆಲವು ದೌರ್ಬಲ್ಯಗಳೂ ಇದ್ದವು. ಬಂಡವಾಳಶಾಹೀ ದೇಶಗಳು ಸುತ್ತವರೆದಿದ್ದ ಸಮಯದ ವಿಶ್ವ ಸನ್ನಿವೇಶದಲ್ಲಿನ ವಿಧಾನಗಳು ಸನ್ನಿವೇಶ ಬದಲಾದಾಗ ಸೂಕ್ತವಾಗಿರಲಿಲ್ಲ.. ಆದರೆ ಸೋವಿಯತ್ ನಾಯಕತ್ವ ಇದರ ಪೂರ್ಣ ಪರಿಣಾಮವನ್ನು ಅರಿತುಕೊಳ್ಳಲಿಲ್ಲ ಇದಲ್ಲದೆ ಸಮಾಜವಾದೀ ರಚನೆಯಲ್ಲಿ ರಾಜಕೀಯ ಹಾಗೂ ಸಂಘಟನಾತ್ಮಕ ಮುಖಂಡತ್ವ ನೀಡುವಲ್ಲಿ ಗಂಭೀರ ತಪ್ಪುಗಳನ್ನು ಎಸಗಲಾಯ್ತು. ಇವನ್ನೆಲ್ಲಾ ನಂತರ ತೀವ್ರ ಗಂಭೀರ ವಿಮರ್ಶೆಗೆ ಒಳಪಡಿಸಲಾಯಿತು ಎಂದು ವಿವರಿಸಿರುವ ಇ.ಎಂ.ಎಸ್. ಈಗಿನ ಪೆರೆಸ್ತ್ರೋಯ್ಕಾ ಮತ್ತು ಗ್ಲಾಸ್‌ನೋಸ್ತ್ ಘಟ್ಟದ ಈ ಹಿನ್ನೆಲೆಯನ್ನು ಇ.ಎಂ.ಎಸ್. ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ.

ಸಿ.ಪಿ.ಐ.(ಎಂ) ಮತ್ತಿತರ ಕಾರ್ಮಿಕ ವರ್ಗದ ಅಂತರ್‍ರಾಷ್ಟ್ರೀಯತೆಯನ್ನು ಎತ್ತಿಹಿಡಿಯುವವರು ಈ ಸನ್ನಿವೇಶದಲ್ಲಿ ಸೋವಿಯತ್ ಒಕ್ಕೂಟ ಕೈಗೊಳ್ಳುವ ಪ್ರತಿಯೊಂದು ಕ್ರಮವನ್ನು ಒಪ್ಪಬಹುದಿದ್ದರೂ ಸಮಾಜವಾದದ ಎದುರಿರುವ ಸವಾಲನ್ನು ಹೇಗೆ ಎದುರಿಸಬೇಕೆಂಬ ಪ್ರಕ್ರಿಯೆಯಲ್ಲಿ ಸೋವಿಯತ್ ಜನತೆಗೆ, ಮುಖಂಡರಿಗೆ ಶುಭಕೋರುತ್ತಾರೆ.ಸೋವಿಯತ್ ಒಕ್ಕೂಟದ ಆರ್ಥಿಕ ಪುನರ್ರಚನೆಯನ್ನು ರಾಜಕೀಯ ವ್ಯವಸ್ಥೆಯ ಪ್ರಜಾಪ್ರಭುತ್ವೀಕರಣದ ಅಗತ್ಯವನ್ನು ಮನಗಾಣುತ್ತಾರೆ ಎಂದು ಇ.ಎಂ.ಎಸ್ ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ.

"ಕಳೆದ ಎರಡು ವರ್ಷಗಳಿಂದ ಸೋವಿಯತ್ ಸಮಾಜದಲ್ಲಿ ಬೆಳೆದು ಬರುತ್ತಿರುವ ವಿಚಾರಗಳ ತಾಕಲಾಟ ಸೋವಿಯೆತ್ ಒಕ್ಕೂಟವನ್ನು ಮತ್ತಷ್ಟು ಬಲಗೊಳಿಸಿ ಸಮಾಜವಾದ ಮತ್ತು ಸಮಾಜವಾದದ ಪ್ರಗತಿಯಲ್ಲಿ ಅಡ್ಡ ಬರುವ ಆತಂಕಗಳನ್ನು ನಿವಾರಿಸಿಕೊಳ್ಳುವಲ್ಲಿ ನೆರವಾಗಲಿ" ಎಂದು ಇ.ಎಂ.ಎಸ್. ಸಿ.ಪಿ.ಐ. (ಎಂ) ನ ಶುಭ ಹಾರೈಕೆ ತಿಳಿಸಿದ್ದಾರೆ.

ಪೆರೆಸ್ತ್ರೊಯಿಕ ಮತ್ತು ಸೋವಿಯತ್ ಮಹಿಳೆ

ಸೋವಿಯತ್ ಮಹಿಳಾ ಸಮಿತಿಯ ಆಹ್ವಾನದ ಮೇರೆಗೆ ಭಾರತದ ಹಲವು ಮಹಿಳಾ ಸಂಘಟನೆಗಳ ಪ್ರತಿನಿಧಿಗಳಿರುವ(ಎಐಎಡಿಡಬ್ಲ್ಯುಎ ಸೇರಿದಂತೆ) ನಿಯೋಗ ಸೋವಿಯತ್

ಸೋವಿಯತ್ ಮಹಿಳಾ ಸಮಿತಿಯ ಆಹ್ವಾನದ ಮೇರೆಗೆ ಭಾರತದ ಹಲವು ಸಂಘಟನೆಗಳ ಪ್ರತಿನಿಧಿಗಳಿರುವ(ಎಐಎಡಿಡಬ್ಲ್ಯುಎ ಸೇರಿದಂತೆ) ನಿಯೋಗ ಸೋವಿಯತ್ ಒಕ್ಕೂಟಕ್ಕೆ ಇತ್ತೀಚೆಗೆ ಭೇಟಿ ನೀಡಿತು. ಸೋವಿಯತ್ ಒಕ್ಕೂಟದಲ್ಲಿ ಇತ್ತೀಚಿನ ವಿದ್ಯಮಾನಗಳ ಹಿನ್ನೆಲೆಯಲ್ಲಿ ಮಹಿಳೆಯರ ಸ್ಥಾನಮಾನದ ಬಗ್ಗೆ ನಿಯೋಗ ಅಧ್ಯಯನ ಮಾಡಿತು.

ಪೆರೆಸ್ತ್ರೋಯಿಕ ತಂದಿರುವ ಕೆಲವು ಬದಲಾವಣೆಗಳು ಸೋವಿಯತ್ ಮಹಿಳೆಯರ ಹಿತಾಸಕ್ತಿಗನುಣವಾಗಿಲ್ಲ. ಈಗ ಆರ್ಥಿಕತೆ ಮತ್ತು ಕೈಗಾರಿಕೆಯಲ್ಲಿ ಬೀಸುತ್ತಿರುವ ಆಧುನೀಕರಣ, ಯಾಂತ್ರೀಕರಣದಲ್ಲಿ ನಷ್ಟವಾಗುವ ಉದ್ಯೋಗಗಳಲ್ಲಿ ಮಹಿಳೆಯರು ಇನ್ನೂ ಹೆಚ್ಚಿನ ರೀತಿಯಲ್ಲಿ ನಷ್ಟ ಅನುಭವಿಸುವ ಸಾಧ್ಯತೆ ಕಂಡು ಬಂದಿತು. ಹೊಸ ಉದ್ಯೋಗಗಳಲ್ಲಿ ಮಕ್ಕಳನ್ನು ನೋಡಿಕೊಳ್ಳುವ 'ಕ್ರೇಷೆ'ಯ ನಿರ್ಮಾಣದಲ್ಲಿ ತೊಡಕುಗಳು ಮತ್ತು ಅಥವಾ ಅದಕ್ಕಾಗಿ ದುಬಾರಿ ಬೆಲೆ ತೆರಬೇಕಾಗಿರುವ ಸಾಧ್ಯತೆ ಇಂತಹ ನಕಾರಾತ್ಮಕ ಬೆಳವಣಿಗೆಗೆ ಮುಖ್ಯ ಕಾರಣವಾಗಿದೆ.

ಒಕ್ಕೂಟದ ಹಲವಾರು ಚುನಾಯಿತ ರಾಜಕೀಯ ಸಂಘಟನೆಗಳಲ್ಲಿ ಮಹಿಳೆಯರ ಸಂಖ್ಯೆ ತೀವ್ರವಾಗಿ ಇಳಿಮುಖವಾಗಿರುವುದು ಇನ್ನೊಂದು ಇಂತಹ ನಕಾರಾತ್ಮಕ ಬೆಳವಣಿಗೆ.

ಇಂತಹ ನಕಾರಾತ್ಮಕ ಬೆಳವಣಿಗೆಗಳನ್ನು ಅಭ್ಯಸಿಸಿ ಮಹಿಳೆಯರು ಅದರಲ್ಲೂ ಯುವತಿಯರಲ್ಲಿ ಇದರ ಬಗ್ಗೆ ಅರಿವು ಮೂಡಿಸಿ ಸಂಘಟಿಸುವುದು, ಸಮಾಜವಾದದಲ್ಲಿ ಮಹಿಳೆಯರಿಗೆ ದೊರಕಿದ್ದ ಸವಲತ್ತುಗಳನ್ನು ಉಳಿಸಿಕೊಳ್ಳುವುದು-ಈ ಬಗ್ಗೆ ಸೋವಿಯತ್ ಮಹಿಳಾ ಸಂಘಟನೆಗಳು ಸಕ್ರಿಯವಾಗಿವೆ. ಸೋವಿಯತ್ ಒಕ್ಕೂಟದಲ್ಲಿ ಈಗ ಇರುವ ಹೊಸ ರಾಜಕೀಯ ಪರಿಸ್ಥಿತಿಯಲ್ಲಿ ಮಹಿಳಾ ಚಳುವಳಿಯನ್ನು ಪುನರ್‌ರೂಪಿಸುವುದರಲ್ಲಿ ಅವರು ತೊಡಗಿದ್ದಾರೆ. ಪೂರ್ವಯೂರೋಪಿನಲ್ಲಿ ಸಮಾಜವಾದದಲ್ಲಿ ಆದ ಹಿನ್ನಡೆ ಮಹಿಳೆಯರ ಮೇಲೆ ಪರಿಣಾಮ ಬೀರಿದ ರೀತಿ ನೋಡಿರುವ ಸೋವಿಯತ್ ಮಹಿಳೆಯರಿಗೆ ಇದರ ಬಗ್ಗೆ ಸಕ್ರಿಯವಾಗುವುದು ಅಷ್ಟು ಮಟ್ಟಿಗೆ ಸುಲಭವಾಗಿದೆ.

ಸಂದರ್ಭ ಸಹಿತ ಉತ್ತರ!

'ಶಿಲಾನ್ಯಾಸ', ಮುಸ್ಲಿಂ ಮಹಿಳೆಯರ ಮಸೂದೆಯ ಖ್ಯಾತಿಯ, ಐದು ವರ್ಷ ದೇಶವನ್ನು ಬೋಫೋರ್ಸ್, ಸಬ್‌ಮೆರಿನ್, ಆರ್ಥಿಕ [illegible] ಹೋಳೆಯಲ್ಲಿ [illegible] 1989 ರಲ್ಲಿ ಜನರಿಂದ [illegible] ನಿರ್ಣಯದಲ್ಲಿ, ದೇಶದ [illegible] ಜಾತ್ಯತೀತ ಶಕ್ತಿಗಳ ಹೋರಾಟದ ಬಗ್ಗೆ [illegible] ಕಾಂಗ್ರೆಸ್(ಐ)ನ ಮಹಾನ್ ಮತ್ತು ಏಕೈಕನಾಯಕ ಶ್ರೀಯುತ ರಾಜೀವ್ ಗಾಂಧಿ

"ಭಾರತ ಜನರದ್ದು - ಕೋಮುಶಕ್ತಿಗಳ ಆಸ್ತಿಯಲ್ಲ"

ಹೃದಯಗಳ ಬೆಸೆದ ಸರಪಳಿ

ಮಾನವರನ್ನು ದೇವರು, ಧರ್ಮ, ಜಾತಿಯ ಹೆಸರಿನಲ್ಲಿ ಪರಸ್ಪರ ದೂರ ಮಾಡುವ ಹುನ್ನಾರಗಳನ್ನು ಮೂಲಭೂತವಾದಿ, ಪಟ್ಟಭದ್ರ ಹಿತಾಸಕ್ತರು ನಡೆಸುತ್ತಿರುವ ಹೊತ್ತಿನಲ್ಲೇ ಅವುಗಳನ್ನು ವಿಫಲಗೊಳಿಸಲು ಜಾತ್ಯತೀತ, ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರಯತ್ನ ನಡೆಸುತ್ತಿವೆ. ವಸ್ತುಶಃ ಈ ಎರಡು ಶಕ್ತಿಗಳ ನಡುವೆ ಒಂದು ಸಂಘರ್ಷವೇ ಆರಂಭವಾಗಿದೆ. ದೇಶದ ರಾಜಧಾನಿ ದೆಹಲಿಯಲ್ಲಿ, ಅಕ್ಟೋಬರ್ 26 ರಿಂದ 30 ರವರೆಗೆ ವಿವಿಧ ಕಾರ್ಯಕ್ರಮಗಳು ನಡೆದು ಜಾತ್ಯಾತೀತ, ದೇಶಪ್ರೇಮಿ ಶಕ್ತಿಗಳಿಗೆ ಹೊಸ ಆಸೆ ಚಿಗುರಿಸಿವೆ.

ಅಕ್ಟೋಬರ್ 30ರಂದು ಅಯೋಧ್ಯೆಯ ವಿವಾದಾತ್ಮಕ ಸ್ಥಳದಲ್ಲಿ ಮಸೀದಿ ಕೆಡಹುವ ಮೂಲಕ ಭಾರತೀಯರ ಐಕ್ಯತೆಯನ್ನೇ ಮುರಿಯಲು ಭಾಜಪ-ವಿಶ್ವ ಹಿಂದೂಪರಿಷತ್ ಆರೆಸ್ಸೆಸ್‌ಕೂಟ ಹೊರಟಾಗ ಇತ್ತ ವಿವಿಧ ವಿದ್ಯಾರ್ಥಿ ಯುವ ಜನ ಸಂಘಟನೆಗಳು ಕೋಮುಸೌಹಾರ್ದತೆಯ ರಕ್ಷಣೆಗಾಗಿ 'ಮೈತ್ರಿ ಬಂಧನ್' ಮಾನವ ಸರಪಳಿ ರಚಿಸಲು ಕರೆ ನೀಡಿದ್ದವು. ಕರ್ನಾಟಕ ಸೇರಿದಂತೆ ದೇಶಾದ್ಯಂತ ಅದಕ್ಕೆ ಉತ್ಸಾಹದ ಪ್ರತಿಕ್ರಿಯೆಯೂ ದೊರೆಯಿತು. ಕಳೆದ ವಾರದ ಐಕ್ಯರಂಗದಲ್ಲಿ ಈ ಬಗ್ಗೆ ಕೆಲವು ಮಾಹಿತಿ ನೀಡಲಾಗಿದೆ.

ರಾಜಧಾನಿ ಹೊಸದಿಲ್ಲಿಯಲ್ಲಿ ನಡೆದ 'ಮೈತ್ರಿ ಬಂಧನ್' ಕಾರ್ಯಕ್ರಮದ ನೇತೃತ್ವವನ್ನು ಕೇಂದ್ರ ಸಚಿವರಾದ ರಾಂ. ವಿಲಾಸ್ ಪಾಸ್ವಾನ್ ಮತ್ತು ಶರದ್ ಯಾದವ್ ವಹಿಸಿದ್ದರು. ವಿವಿಧ ಪಕ್ಷಗಳ ಸಂಸತ್ ಸದಸ್ಯರು ಕೂಡ ಒಂದು ಕಿ.ಮೀ. ಉದ್ದದ ಸರಪಳಿಯಲ್ಲಿ ತಮ್ಮ ಕೈ ಜೋಡಿಸಿದ್ದರು. ಶಬನಾ ಆಜ್ಮಿ, ಭೀಷ್ಮ ಸಾಹ್ನಿ ಮೊದಲಾದ ಚಿತ್ರ, ರಂಗಭೂಮಿ, ಸಾಹಿತ್ಯ ಮತ್ತಿತರ ರಂಗಗಳ ಖ್ಯಾತನಾಮರು ಕೋಮುಸೌಹಾರ್ದ ರಕ್ಷಣೆಯ ಮಹಾನ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ಪ್ರೋತ್ಸಾಹಿಸಿದರು. ಪುಟ್ಟ ಮಕ್ಕಳೂ ಭಾಗವಹಿಸಿದ್ದು ವಿಶೇಷವಾಗಿತ್ತು.

ಅಕ್ಟೋಬರ್ 26 ರಂದು ನಡೆದ 'ಶಾಂತಿಯಾತ್ರೆ' ಈ ಹುರುಪಿಗೆ ನಾಂದಿ ಹಾಕಿತ್ತು. ಸಿ.ಪಿ.ಐ.(ಎಂ), ಸಿ.ಪಿ.ಐ, ಆರ್‌ಎಸ್.ಪಿ., ಫಾರ್ವರ್ಡ್ ಬ್ಲಾಕ್, ಜನತಾದಳ, ಕಾಂಗ್ರೆಸ್(ಎಸ್)ನ ದೆಹಲಿ ಘಟಕಗಳ ಕರೆಯ ಮೇರೆಗೆ ನಡೆದ ಈ ಯಾತ್ರೆಯಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು ಸಂಘಟಕರಿಗಿದ್ದ ಅಲ್ಪ ಸಮಯದಲ್ಲೇ ಇಷ್ಟೊಂದು ಜನರ ಬೆಂಬಲ ದೊರೆತಿತ್ತು. 1857ರಲ್ಲಿ ಹಿಂದೂ ಮುಸ್ಲಿಂ ಐಕ್ಯ ಹೋರಾಟಗಾರರು, ಬಹದ್ದೂರ್ ಶಾ ಜಫರ್‌ರವರನ್ನು ತಮ್ಮ ಮುಖಂಡರಾಗಿ ಘೋಷಿಸಿದ ಕೆಂಪು ಕೋಟೆಯಿಂದ ಈ ಮೌನ ಶಾಂತಿಯಾತ್ರೆ ಆರಂಭವಾಗಿ ಹಳೆಯ ದೆಹಲಿಯ ರಸ್ತೆ, ಓಣಿಗಳಲ್ಲಿ ಹಾದು ಅಜ್‌ಮೇರಿ ಗೇಟ್ ತಲುಪಿತು. ಅಲ್ಲಿ ಒಂದು ಬೃಹತ್ ರ‍್ಯಾಲಿ ನಡೆಯಿತು. ಸಿ.ಪಿ.ಐ(ಎಂ)ನ ಜೋಗೇಂದ್ರ ಶರ್ಮ, ಜನತಾದಳದ ಮಿರ್ಜಾ ಸಿದ್ದಿಗಿ, ಸಿ.ಪಿ.ಐ.ನ ಎಂ.ಎಂ.ಗೋಪಿ,ಕಾಂಗ್ರೆಸ್(ಎಸ್)ನ ಜಗದೀಶ್‌ಗುಪ್ತ, ಆರ್.ಎಸ್.ಪಿ.ಯ ಸುಶೀಲ್ ಭಟ್ಟಾಚಾರ್ಯ, ಫಾರ್ವರ್ಡ್ ಬ್ಲಾಕ್‌ನ ಆರ್.ಪಿ. ಶರ್ಮ ಹಾಗೂ ಮಾಜಿ ಸಂಸತ್ ಸದಸ್ಯ ಕಿಶೋರಿಲಾಲ್ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದರು.

ಭಾರತ ಇಲ್ಲಿಯ ಜನರದ್ದು-ಕೋಮು ವಾದಿ ಶಕ್ತಿಗಳ ಆಸ್ತಿಯಲ್ಲ ವೆಂಬ ಘೋಷ ದೆಹಲಿಯಿಂದ ದೇಶವಿಡೀ ವ್ಯಾಪಿಸಬೇಕಾದ ಘೋಷ.

ಶಾಂತಿಯಾತ್ರೆಗೆ ದಾರಿಯಲ್ಲಿ ಹಲವಾರು ಕಡೆ ದೊರೆತ ಸ್ವಾಗತ ಆಶ್ಚರ್ಯ ಹುಟ್ಟಿಸುವಂತಿತ್ತು. ನಿಜವಾಗಿಯೂ ಇದೊಂದು ಆಶಾಭಾವನೆ ಚಿಗುರಿಸಿದ ಯಾತ್ರೆಯಾಗಿತ್ತು.

ಮರುದಿನ ಕೋಮುವಾದದ ವಿರುದ್ಧ ಜೆಎನ್‌ಯು ಸಮಿತಿಯ ಕರೆಯ ಮೇರೆಗೆ ದೆಹಲಿಯ ಎಲ್ಲಾ ನಾಲ್ಕು ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು, ಶಿಕ್ಷಕರು, ಪತ್ರಕರ್ತರು, ವಕೀಲರು, ಕಲಾವಿದರು, ಇತರ ವೃತ್ತಿಪರ ಜನ ಕೋಮು ಸೌಹಾರ್ದಕ್ಕಾಗಿ ಒಂದು ದಿನದ ಉಪವಾಸ ಸತ್ಯಾಗ್ರಹ ನಡೆಸಿದರು. ಮುಲ್ಕ್‌ರಾಜ್ ಆನಂದ್, ಹಬೀಬ್ ತನ್ವೀರ್, ರೊಮಿಲಾ ಥಾಪರ್, ಸುಮಿತ್ ಸರ್ಕಾರ್, ಕೆ.ಎನ್. ಪಣಿಕ್ಕರ್ ಮುಂತಾದ ವಿಖ್ಯಾತ ಬುದ್ಧಿ ಜೀವಿಗಳು ಇದರಲ್ಲಿ ಭಾಗವಹಿಸಿದರು.

ಹುತಾತ್ಮರಾದ ಇನ್ನೊಬ್ಬ ಪಂಜಾಬ್ ಸಂಗಾತಿ

ದೇಶ ವಿರೋಧಿ ಖಲಿಸ್ತಾನಿ ಭಯೋತ್ಪಾದಕರ ರಣ ಹೇಡಿ ಕೃತ್ಯಕ್ಕೆ ಪಂಜಾಬ್‌ನಲ್ಲಿ ಸಿ.ಪಿ.ಐ(ಎಂ)ನ ಇನ್ನೊಬ್ಬ ಸಂಗಾತಿ ಬಲಿಯಾಗಿದ್ದಾರೆ. ಮೊಟಾಲೆ ಗ್ರಾಮದ ಸರಪಂಚರಾಗಿದ್ದ ಕಾಮ್ರೇಡ್ ಬರ್ಕಾತ್ ಮಸೀಹ್ (45ವರ್ಷ) ಅವರನ್ನು ಭಯೋತ್ಪಾದಕರು ಅಕ್ಟೋಬರ್ 21ರಂದು ಮೊಟಾಲೆ ಗ್ರಾಮದಲ್ಲಿ ಗುಂಡಿಟ್ಟು ಹತ್ಯೆಗೈದರು. ಕಾ॥ಬರ್ಕಾತ್ ಅವರು ಪಂಜಾಬ್ ಕೃಷಿ ಕಾರ್ಮಿಕರ ಸಂಘದ ಅಂಜಾಲಾ ತಹಶೀಲ್ ಸಮಿತಿಯ ಅಧ್ಯಕ್ಷರಾಗಿದ್ದರು.

ಅ. 21 ರ ಬೆಳಗ್ಗೆ 8 ಗಂಟೆಗೆ ಬರ್ಕಾತ್‌ರ ಮನೆಗೆ ನುಗ್ಗಿದ ಭಯೋತ್ಪಾದಕರು ಈ ಸಂಗಾತಿಯನ್ನು ಹೊರಗೆಳೆದುಕೊಂಡು ಹೋಗಿ ಮನೆಯಿಂದ ಸ್ವಲ್ಪ ದೂರದಲ್ಲಿ ಸಾಯಿಸಿದರು. ಕಾ॥ ಬರ್ಕಾತ್ ಮಸೀಹ್ ಪತ್ನಿ ಮತ್ತು 7 ಮಕ್ಕಳನ್ನು ಅಗಲಿದ್ದಾರೆ.

ಸಿಖ್ ಭಯೋತ್ಪಾದಕರಿಂದ ಇನ್ನೊಂದು ಹತ್ಯಾಕಾಂಡ

ಇಡೀ ದೇಶಕ್ಕೆ ದೇಶವೇ ಖಂಡಿಸುತ್ತಿರುವಾಗ, ಅಮಾಯಕ ಜನರ ಕಣ್ಣೀರ ಕೋಡಿ ಹರಿಯುತ್ತಿರುವಾಗ ಯಾವುದೇ ರಕ್ಷಣೆಯಿಲ್ಲದ ಮುಗ್ಧ ಜನರನ್ನು ಸಾಯಿಸುವ ಪ್ರವೃತ್ತಿಯನ್ನು ಖಲಿಸ್ತಾನ್ 'ಹೋರಾಟಗಾರರು' ಇನ್ನೂ ಬಿಟ್ಟುಕೊಟ್ಟಿಲ್ಲ. ಭಯಭೀತಿ ಹುಟ್ಟಿಸಿ ಪರಸ್ಪರ ದ್ವೇಷವನ್ನು ಹರಡಿ ಜನರ ಒಗ್ಗಟ್ಟು ಮುರಿಯಲು ಹಲವಾರು ಹತ್ಯಾಕಾಂಡಗಳನ್ನು ಅವರು ನಡೆಸಿದ್ದಾರೆ. ಅದರ ಸಾಲಿಗೆ ನವೆಂಬರ್ 4 ರ ಘಟನೆಯೂ ಸೇರುತ್ತದೆ.

ಗಡಿಯಲ್ಲಿರುವ ಗುರುದಾಸ್‌ಪುರ ಜಿಲ್ಲೆಯ ಪಂಡೋರಿ ಗ್ರಾಮದಲ್ಲಿ ನ. 4 ರಂದು ಭಯೋತ್ಪಾದಕರು 17 ಜನರನ್ನು ಒಂದೇ ಕಡೆ ಕೊಂದುಹಾಕಿದರು. ಇದರಲ್ಲಿ ಒಬ್ಬ ಪೋಲೀಸ್ ಕೂಡ ಸೇರಿದ್ದಾನೆ.

ಕೆಲಸದ ಪ್ರದೇಶಗಳಿಂದ ಕರ್ತವ್ಯ ಮುಗಿಸಿ ತಮ್ಮ ವಾಹನಗಳಲ್ಲಿ ಹಿಂದಿರುಗುತ್ತಿದ್ದ ಈ ಜನರನ್ನು ಅಡ್ಡಗಟ್ಟಿದ ಭಯೋತ್ಪಾದಕರು ವಾಹನಗಳಿಂದ ಕೆಳಗಿಳಿಸಿದರು. ಅನಂತರ ಸಾಲಾಗಿ ನಿಲ್ಲಿಸಿ ಅವರ ಮೇಲೆ ಗುಂಡನ್ನು ಹಾರಿಸಿದರು. ಈ ಮೂಲಕ ಹೃದಯ ಹೀನ ಸ್ವಾಮಜ್ಯಶಾಹಿ ಘೋಷಿತ ಭಯೋತ್ಪಾದಕರು ತಮ್ಮ ದುಷ್ಕೃತ್ಯಗಳ ಕಿರೀಟಕ್ಕೆ ಇನ್ನೊಂದು ಗರಿ ಸಿಕ್ಕಿಸಿಕೊಂಡರು.

ದೇಶದೊಳಗೆ

ಆತ್ಮಾಹುತಿ ತ್ಯಾಗವಲ್ಲ; ಕೊಲೆ!

ಮಂಡಲ್ ಆಯೋಗದ ಶಿಫಾರಸುಗಳನ್ನು ಬೆಂಬಲಿಸಿ ಮತ್ತು ತುಳಿತಕ್ಕೊಳಗಾದ ಹಾಗೂ ಹಿಂದುಳಿದ ವರ್ಗಗಳ ವಿರುದ್ಧ ಜಾತೀಯ ಉನ್ಮಾದವನ್ನು ಪ್ರಚೋದಿಸುತ್ತಿರುವುದನ್ನು ಪ್ರತಿಭಟಿಸಿ ಕಳೆದ ತಿಂಗಳು ಹೊಸ ದಿಲ್ಲಿಯಲ್ಲಿ ಮಂಡಿ ಹೌಸ್‌ನಿಂದ ಬೋಟ್ ಕ್ಲಬ್ ತನಕ ಒಂದು "ನಾಗರಿಕರ ಜಾಥಾ" ನಡೆಯಿತು. ಅನೇಕ ಪತ್ರಕರ್ತರು, ಕಲಾವಿದರು, ಲೇಖಕರು, ಶಿಕ್ಷಕರು, ವಕೀಲರು, ವೈದ್ಯರು ಮೊದಲಾದ ವಿಭಾಗಗಳ ಜನರು ಇದನ್ನು ಸಂಘಟಿಸಿದ್ದರು.

ರಾಜೇಂದ್ರಯಾದವ್, ಮಹೇಷ್‌ಸಿಂಗ್ ವಿವಾನ್ ಸುಂದರಂ, ಶಶಿಕುಮಾರ್, ವಿಷ್ಣುಖಾರೆ, ವೀಣಾ ಮಜುಂದಾರ್, ರಾಜ್‌ಕುಮಾರ್ , ಜೈನ್, ಮುರಳಿ ಮನೋಹರ ಪ್ರಸಾದ್ ಸಿಂಗ್, ಹರೀಶ್ ಖನ್ನಾ, ಸ್ವಾಮಿ ಅಗ್ನಿವೇಶ್, ಸುರೇಂದ್ರ ಮೋಹನ್, ಸುಮಂತಬ್ಯಾನರ್ಜಿ, ಸುಮಿತ್ ಸರ್ಕಾರ್, ಚಂಚಲ್ ಚೌಹಾನ್, ಇಂದ್ರ ಮೋಹನ್, ಪ್ರಯಾಗ್ ಶುಕ್ಲಾ, ಗೀತಾ ಕಪುರ್, ಬೃಂದಾ ಕಾರಟ್ ಮುಂತಾದವರು ಜಾಥಾದ ನೇತೃತ್ವ ವಹಿಸಿದ್ದರು.

ದಿಲ್ಲಿ ಶಿಕ್ಷಕರ ವೇದಿಕೆ, ನಿಶಾಂತ್, ಕೋಮುವಾದ ವಿರೋಧಿ ಆಂದೋಲನ, ಜನವಾದಿ ಲೇಖಕ ಸಂಘ, ನಾಗರಿಕ ಏಕತಾ ಮಂಚ ಸಮಾಜವಾದಿ, ಮೀಡಿಯಾ ಸ್ವಾರ್ಮ್, ಸಮಾಜವಾದಿ ಮಂಚ, ಜನವಾದಿ ಮಹಿಳಾ ಸಮಿತಿ, ಪರ್ಚಮ್, ಲೋಕಾಯಣ್, ದಿಲ್ಲಿ ಪತ್ರಕರ್ತರ ಸಂಘ, ದಿಲ್ಲಿ ಕಾರ್ಯ ನಿರತ ಪತ್ರಕರ್ತರ ಸಂಘ ಮೊದಲಾದ ಸಂಘ ಸಂಸ್ಥೆಗಳು ಕೂಡ ಜಾಥಾದಲ್ಲಿ ಪಾಲ್ಗೊಂಡಿದ್ದವು.

ಬೋಟ್‌ಕ್ಲಬ್‌ನಲ್ಲಿ ನಡೆದ ಸಭೆಯಲ್ಲಿ ನಿಶಾಂತ್ ನಾಟ್ಯ ಮಂಚ್ ಮಿಸಲಾತಿ ಪರವಾದ ಬೀದಿ ನಾಟಕವೊಂದನ್ನು ಪ್ರದರ್ಶಿಸಿತು. ಮೆರವಣಿಗೆಗಾರರು ಮಂಡಲ್ ಆಯೋಗ ಶಿಫಾರಸನ್ನು ಜಾರಿಗೊಳಿಸಿ: 'ಆತ್ಮಾಹುತಿಬಲಿದಾನವಲ್ಲ; ಕೊಲೆ" ಎಂಬಿತ್ಯಾದಿ ಘೋಷಣೆಗಳನ್ನುಕೂಗಿದರು.

ಮಂಡಲ್ ವರದಿಯ ಜಾರಿ ಐತಿಹಾಸಿಕವಾಗಿ ಸಾಮಾಜಿಕ ನ್ಯಾಯದತ್ತ ಒಂದು ಸೂಕ್ತ ಕ್ರಮ ಎಂದು ಸಭೆಯಲ್ಲಿ ಮಾತನಾಡಿದವರು ಹೇಳಿದರು. ಏನಿದ್ದರೂ ಅದು ಪ್ರಜಾಸತ್ತಾತ್ಮಕ ಚೌಕಟ್ಟಿನಲ್ಲಿ ಸಣ್ಣ ಹೆಜ್ಜೆಯಷ್ಟೆ ಎಂದವರು ವಿಶ್ಲೇಷಿಸಿದರು. ಮೀಸಲಾತಿ ವಿರೋಧಿ ಭಾವನೆ ಮತ್ತು ಉನ್ಮಾದವನ್ನು ಪ್ರಚೋದಿಸುವಲ್ಲಿ ಪತ್ರಿಕೆಗಳು ದೊಡ್ಡ ಪಾತ್ರ ವಹಿಸಿದೆ ಎಂದು ಭಾಷಣಕಾರರು ಟೀಕಿಸಿದರು. ಮೀಸಲಾತಿ ವಿರೋಧಿ ಚಳುವಳಿ ಕಾಂಗ್ರೆಸ್(ಐ) ಮತ್ತು ಬಿ.ಜೆ.ಪಿ. ನಡುವಣ ಮೈತ್ರಿಯನ್ನು ಬಹಿರಂಗಪಡಿಸಿದೆ. ಅವೆರಡು ಹಿಂಸೆಯನ್ನು ಪ್ರಚೋದಿಸುತ್ತಿರುವುದು ಮಾತ್ರವಲ್ಲ, ಪ್ರತಿಗಾಮಿ ಶಕ್ತಿಗಳಿಗೆ ಪ್ರೋತ್ಸಾಹವನ್ನೂ ಕೊಡುತ್ತಿವೆ ಎಂದು ತಿಳಿಸಿದರು. ಆತ್ಮಾಹುತಿ ಕ್ರಮಕ್ಕೆ ಕೈ ಹಾಕದಂತೆ ಮೀಸಲಾತಿ ವಿರೋಧಿ ಚಳುವಳಿಗಾರರಿಗೆ ಸಭೆ ಮನವಿ ಮಾಡಿತು.

ಆಂಧ್ರ ರೈಲು ದುರಂತ ಅಪರಾಧಿಗಳನ್ನು ಬಂಧಿಸಿ

ಆಂಧ್ರ ಪ್ರದೇಶದಲ್ಲಿ ಕಾಕತೀಯ ಎಕ್ಸ್‌ಪ್ರೆಸ್ ರೈಲಿನ ಬೋಗಿಗೆ ಬೆಂಕಿ ಹಚ್ಚಿ ಮಕ್ಕಳು ಮತ್ತು ಮಹಿಳೆಯರು ಸೇರಿದಂತೆ 47 ಜನರ ಸಾವಿಗೆ ಕಾರಣರಾದ (ವಿವರ: ಐಕ್ಯರಂಗ, ಅಕ್ಟೋಬರ್ 21) ಅಪರಾಧಿಗಳನ್ನು ಬಂಧಿಸುವಂತೆ ಸಿ.ಪಿ.ಐ (ಎಂ) ಪಾಲಿಟ್‌ಬ್ಯೂರೋ ಒತ್ತಾಯಿಸಿದೆ. ಘಟನೆ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಪಾಲಿಟ್‌ಬ್ಯೂರೊ ಪೀಪಲ್ಸ್ ವಾರ್‌ಗ್ರೂಪ್‌ಗೆ ಸೇರಿದ ನಕ್ಸಲೀಯರು ನಡೆಸಿದ ಈ ಅನಾಗರಿಕ ಅಪರಾಧವನ್ನು ಖಂಡಿಸಲು ಯಾವ ಪದಗಳೂ ಸಾಕಾಗದು ಎಂದು ಹೇಳಿದೆ.

ಪೀಪಲ್ಸ್ ವಾರ್‌ಗ್ರೂಪ್‌ನ್ನು ತೃಪ್ತಿಪಡಿಸುವ ಹಾಗೂ ಪ್ರೋತ್ಸಾಹಿಸುವ ಆಂಧ್ರ ಪ್ರದೇಶ ಮುಖ್ಯಮಂತ್ರಿ ಡಾ॥ ಎಂ. ಚೆನ್ನಾರೆಡ್ಡಿಯವರ ನೀತಿಯಿಂದ ನಕ್ಸಲೀಯರು ಹೇಗೆ ರಾಜರೋಷವಾಗಿ ತಮ್ಮ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆಂಬುದನ್ನು ಈ ಘಟನೆ ಎತ್ತಿ ತೋರಿಸುತ್ತದೆ ಎಂದು ಪಾಲಿಟ್ ಬ್ಯೂರೊ ವಿಶ್ಲೇಷಿಸಿದೆ.

ಈ ಅಮಾನವೀಯ ಕೃತ್ಯದ ಅಪರಾಧಿಗಳನ್ನು ಕೂಡಲೇ ಪತ್ತೆ ಹಚ್ಚಿ ಬಂಧಿಸಬೇಕು. ನ್ಯಾಯಾಂಗ ತನಿಖೆ ಮುಗಿಯುವವರೆಗೆ ಕಾಯಬಾರದು ಎಂದು ಪಿ.ಬಿ. ಹೇಳಿದೆ.

'ಹಿಂದೂ' ಆದ 'ಹಿಂದಿ' ಪತ್ರಿಕೆಗಳು.

ಏನಿದು ಹಿಂದಿಪತ್ರಿಕೆಗಳೆಲ್ಲ ಮದ್ರಾಸಿನಿಂದ ಹೊರಡುವ ಇಂಗ್ಲಿಷ್ ದೈನಿಕ 'ದಿ ಹಿಂದೂ' ಪರಿವರ್ತನೆಗೊಂಡಿವೆ ಎಂದು ಭಾವಿಸಬೇಡಿ. ಇದೂ ಉತ್ತರಪ್ರದೇಶದ ಹಿಂದಿ ಪತ್ರಿಕೆಗಳು 'ಭವ್ಯ ಪರಂಪರೆಯ 'ಹಿಂದೂ' ಧರ್ಮದ ಪುಂಗಿಗಳಾಗಿ ಮಾರ್ಪಟ್ಟ ಕತೆಯಿದು.

ದೇಶದಲ್ಲಿ ಕೋಮುಗಲಭೆಗಳು ಹೊತ್ತಿ ಉರಿಯಲು ಕಾರಣವಾದ ರಾಮ ಜನ್ಮಭೂಮಿ-ಬಾಬರಿ ಮಸೀದಿ ಸಂಕೀರ್ಣ ಅಯೋಧ್ಯೆಯಲ್ಲಿದೆ. ಅಯೋಧ್ಯೆ ಉತ್ತರ ಪ್ರದೇಶದಲ್ಲಿದೆ. ಜನರಲ್ಲಿ ಸೌಹಾರ್ದತೆ, ಸ್ನೇಹ ಆದರಗಳನ್ನು ಮೂಡಿಸುವಲ್ಲಿ ಸುದ್ದಿ ಮಾಧ್ಯಮಗಳ, ಅದರಲ್ಲೂ ಪತ್ರಿಕಾ ಮಾಧ್ಯಮದ ಪಾತ್ರ ಬಹಳ ಮಹತ್ವದ್ದು. ಅದು ಪತ್ರಿಕಾ- ಧರ್ಮ ಕೂಡ. ಆದರೆ, ಮೀಸಲಾತಿ ವಿರೋಧಿ ಚಳವಳಿಗೆ ಸಂಬಂಧಿಸಿದಂತೆ ಕಂಡ ಹಾಗೆ ಅಡ್ವಾನಿ ರಥಯಾತ್ರೆ, ಕರಸೇವೆ ಮೊದಲಾದ ಹಿಂದೂ ಕೋಮುವಾದಿ ಚಟುವಟಿಕೆಗಳ ಬಗ್ಗೆ ಭಾರತದ ಬಹುತೇಕ ಪತ್ರಿಕೆಗಳು ಮತ್ತು ಸುದ್ದಿ ಸಂಸ್ಥೆಗಳು ಹಿಂದೂ ವಾದದ ಸಂರಕ್ಷಕರಂತೆ ವರ್ತಿಸಿದ ದುರಂತಮಯ ರೀತಿಯನ್ನು ನಾವು ನೋಡಿದ್ದೇವೆ. ವಿವಾದದ ಜ್ವಾಲಾ ಮುಖಿಯಾದ ಉತ್ತರ ಪ್ರದೇಶದಲ್ಲಂತೂ ಈ ವಿವಾದದಿಂದ ಪತ್ರಿಕೆಗಳು ಕೂಡ ಕೋಮುವಾದದ ತೆಕ್ಕೆಗೆ ಬಿದ್ದಿವೆ. 'ನವಭಾರತ ಟೈಮ್ಸ್'ನ ಲಕ್ನೋ ಆವೃತ್ತಿ ಹೊರತುಪಡಿಸಿ ಉಳಿದೆಲ್ಲವೂ ರಾಜ್ಯದಲ್ಲಿ ನಡೆದ ಕೋಮುವಾದದ ವಿರೋಧಿ ಆಂದೋಲನ ಹಾಗೂ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವರಿಗೆ ಪ್ರತಿಕೂಲವಾದ ನಿಲುವನ್ನೇ ತಳೆದಿದ್ದವು.

ದೇಶದ ಜಾತ್ಯತೀತತೆಯನ್ನು ರಕ್ಷಿಸಲಿಕ್ಕಾಗಿ ಸರಕಾರ ಯಾವುದಕ್ಕೂ ಸಿದ್ಧ ಎಂಬ ಪ್ರಧಾನಿ ವಿ.ಪಿ.ಸಿಂಗ್‌ರ ದೃಢ ಘೋಷಣೆಯನ್ನು ಹನ್ನೊಂದು "ಆ ವೃತ್ತಿಗಳುಳ್ಳ 'ಆಜ್' ಒಂಭತ್ತು ಆವೃತ್ತಿಗಳುಳ್ಳ 'ಜಾಗರಣ್' ತೀವ್ರವಾಗಿ ವಿರೋಧಿಸಿ ಸಂಪಾದಕೀಯ ಬರೆದವು.

ಅಕ್ಟೋಬರ್ 12ರಂದು ನಡೆದ ಬೃಹತ್ ಕೋಮುವಾದ ವಿರೋಧಿ ಕಾರ್ಯಕ್ರಮದ (ವಿವರ ಹಿಂದಿನ ಸಂಚಿಕೆಯಲ್ಲಿ ಮಹತ್ವವನ್ನು ಕಡೆಗಣಿಸದಿದ್ದರೂ ಯಥಾವತ್ತಾಗಿ ಚಿತ್ರಿಸಲು ಬಹುತೇಕ ಹಿಂದಿ ಪತ್ರಿಕೆಗಳು ಸಿದ್ಧವಿರಲಿಲ್ಲ. ಭಾರತೀಯ ಜನತಾ ಪಕ್ಷದ ಮುಖವಾಣಿಗಳಂತೆ ವರ್ತಿಸಿದ ಅವು, ಈಬೃಹತ್ ಆಂದೋಳನ ಸರಕಾರಿ ಆಶ್ರಯದಲ್ಲಿ ನಡೆದಿರುವುದು ಅಥವಾ ಮುಲಾಯಂಸಿಂಗ್ ಯಾದವ್‌ರ ಖಾಸಗಿ ಕಾರ್ಯಕ್ರಮ ಎಂದೆಲ್ಲ ಚಿತ್ರಿಸಿದವು.

ಈ ಹಿಂದೆ ಯಾವುದೇ ಸರಕಾರ ಅಥವಾ ವ್ಯಕ್ತಿಗಳು ಕೋಮುವಾದದ ಪ್ರಶ್ನೆಯ ಮೇಲೆ ಇಂಥ ಚಳವಳಿ ನಡೆಸಿದ್ದವೇ ಎಂದೇನೂ ವಿವರಿಸುವ ಗೋಜಿಗೆ ಈ ಪತ್ರಿಕೆಗಳು ಹೋಗಲಿಲ್ಲ. ಯಾಕೆಂದರೆ ಅವುಗಳ ಉದ್ದೇಶ ಸ್ಪಷ್ಟ. ಈತ ಪತ್ರಿಕೋದ್ಯಮದ ಎಲ್ಲಾ ಕೆಟ್ಟ ರೀತಿಗಳನ್ನು ಅವು ಅಳವಡಿಸಿಕೊಂಡವು. 'ಸ್ವತಂತ್ರ ಭಾರತ್' ಎಂಬ ಪತ್ರಿಕೆ ರ‍್ಯಾಲಿಗೆ ಕೆಲದಿನಗಳ ಮುಂಚಿನಿಂದಲೂ ಲಕ್ನೋದಲ್ಲಿ ವ್ಯಾಪಕ ಗಾಬರಿ ಹುಟ್ಟಿದೆ. ಗಲಭೆಗಳು ನಡೆಯುತ್ತಿವೆ ಎಂಬಿತ್ಯಾದಿ ಸ್ವಪೋಲಕಲ್ಪಿತ ವರದಿಗಳನ್ನು ಪ್ರಕಟಿಸಿತು. ವ್ಯವಸ್ಥಿತವಾಗಿ ಹರಿಯಬಿಡಲಾದ ಇಂಥ ಗಾಳಿಸುದ್ದಿಗಳೇ ಯಾವ ರೀತಿಯಲ್ಲಿ ರ‍್ಯಾಲಿಯ ದಿನ ಅಂಗಡಿಗಳು ಮುಚ್ಚಲು ಕಾರಣವಾದವು ಎಂಬಿತ್ಯಾದಿ ಸಮರ್ಪಕ ವರದಿಯನ್ನು 'ನವಭಾರತ ಟೈಮ್ಸ್ ಪ್ರಕಟಿಸಿತು. "ಬಿಗುವು ಮತ್ತು ಹಿಂಸಾಚಾರ ಉಂಟುಮಾಡಲೆಂದೇ ಸಮಾಜ ವಿರೋಧಿ ಶಕ್ತಿಗಳು ಇಂಥ ಗಾಳಿಸುದ್ದಿಗಳನ್ನು ವ್ಯವಸ್ಥಿತವಾಗಿ ಹಬ್ಬಿಸಿದವು" ಎಂದು ಅದು ಸ್ಪಷ್ಟವಾಗಿ ಬರೆಯಿತು. ಪತ್ರಿಕೆಗಳು ಎಷ್ಟೇ ವಿರೋಧಾತ್ಮಕವಾದ ಪಾತ್ರವಹಿಸಿದರು ಜನರು ಕಾರ್ಯಕ್ರಮಕ್ಕೆ ಲಕ್ಷಾಂತರ ಸಂಖ್ಯೆಯಲ್ಲಿ ಆಗಮಿಸಿ ಅವುಗಳಿಗೆ ಸೂಕ್ತ ಉತ್ತರ ನೀಡಿದರು. ಪಾಪ! 'ಹಿಂದೂ' ರಕ್ಷಕ ಪತ್ರಿಕೆಗಳು ಟನ್‌ಗಟ್ಟಲೆ ನ್ಯೂಸ್

ದೊಡ್ಡ ಬಳ್ಳಾಪುರ ತಾಲೂಕಿನಲ್ಲಿ ಯಶಸ್ವಿ ಭಾರತ ಜ್ಞಾನ ವಿಜ್ಞಾನ ಜಾತಾ

ದಿನಾಂಕ 12-10-90ರಂದು ಸಾಕ್ಷರತಾ ಆಂದೋಳನದ ಉದ್ಘಾಟನೆಯಾಗಿ ದಿನಾಂಕ 6ರಂದು ಭಾರತ ಜ್ಞಾನ ವಿಜ್ಞಾನ ಜಾತಾ ಬೆಂಗಳೂರು ಜಿಲ್ಲಾ ಕಲಾ ತಂಡ ದೊಡ್ಡಬಳ್ಳಾಪುರಕ್ಕೆ ಆಗಮಿಸಿತು. ತಾಲೂಕು ಕಚೇರಿ. ಬಳಿ. ತಹಸೀಲ್ದಾರ್, ಕೃಷ್ಣಮೂರ್ತಿ ಪ್ರಾಂತ [illegible] ಸಂಘದ ಮುಖಂಡ [illegible], ರಾಮಭದ್ರಪ್ಪ ಯುವಕರು ರಾಜಕೀಯ ಪಕ್ಷದವರು ಸ್ವಾಗತಿಸಿದರು. ವಿದ್ಯಾರ್ಥಿ ಸಮೂಹ-

ರೊಡನೆ ಮೆರವಣಿಗೆಯಲ್ಲಿ ತಂಡ ಸಾಗಿತು. ಪುರಸಭಾವರಣದಲ್ಲಿ ಪುರಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಸಿ ತಂಡಕ್ಕೆ ಸ್ವಾಗತ ಕೋರಲಾಯಿತು. ಕಲಾ ತಂಡದವರು ಅಕ್ಷರ ಕಲಿಯಿರಿ, ಅಕ್ಷರ ಕಲಿಸಿರಿ ಎಂಬ ಘೋಷಣೆಗಳೊಡನೆ ಹಾಡುಗಳನ್ನು ಹಾಡಿದರು. ಪಟ್ಟಣದಲ್ಲಿ 3 ಕಡೆ ಬೀದಿ ನಾಟಕ, ಗೀತನಾಟಕ, ಲಾವಣಿ ಪದಗಳನ್ನು ಹಾಡಿ ಅಕ್ಷರ ಕಲಿಯುವ ಅಗತ್ಯ-

ವನ್ನು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ತೋರಿಸಿದರು. ದಿನಾಂಕ7 ರಿಂದ 10ರವ-

ರೆಗೆ ತಾಲೂಕಿನ 12 ಮಂಡಲ ಪಂಚಾಯಿತಿ ಕೇಂದ್ರಗಳಲ್ಲಿ ಜಾತಾ ಸಂಚರಿಸಿ ಇದೇ ಕಾರ್ಯಕ್ರಮ ನಡೆಸಿತು / ಅಗ್ರಹಾರ, ಕನಸವಾಡಿ, ದೊಡ್ಡ [illegible] ತಳಗವಾರ, ಹಡಬ, ಕೊಡಿ [illegible] ಲಿ, ಸಾಸಲು, ಅರು [illegible] ಕೋಟೆ, ರಾಜಘಟ್ಟ [illegible] ಗಲ, [illegible] ಕೆಲತ್ತು, ಗ್ರಾಮ [illegible] ಕ್ಷರ ಗೊಲ್ಲಹಳ್ಳಿ, ನಾಟಕಗಳು [illegible] ಟಿಬುಳ್ಳಿ, ಮೇಳ [illegible] ಜನಸಂದಣಿ

ಮೂಲಕ ಸಾಕ್ಷರತಾ ಆಂದೋಲನ ನಡೆಸಿತು. ಮಂಡಲ ಪಂಚಾಯತ್ ಪ್ರಧಾನರು, ಸದಸ್ಯರು, ಬಿ.ಡಿ.ಓ. ಆಫೀಸಿನ ನೌಕರರು ಸ್ವತ: ಹಾಜರಿದ್ದು ಸಹಕಾರ ನೀಡಿದರಲ್ಲದೆ ಸ್ವಾಗತಿಸಿ ಸಭಿಕರನ್ನು ಉದ್ದೇ[illegible] ಮಾತನಾಡಿದರು. ಕಲಾ ತಂಡದ [illegible] ಶ್ವರ್ ಮತ್ತು ಗೋಪಾ- [illegible] ಮುಖಂ [illegible]

ಪ್ಯಾಲೆಸ್ಟೀನ್ನರ ನರಮೇಧ - ವಿಶ್ವ ಸಂಸ್ಥೆ ವರದಿ

ಕಳೆದ ತಿಂಗಳು ವಿಶ್ವ ಸಂಸ್ಥೆಯ ಭದ್ರತಾ ಮಂಡಳಿ ನಿರ್ಧರಿಸಿದಂತೆ ಅಕ್ಟೋಬರ್ ಕೊನೆಯೊಳಗೆ, ಪ್ರಧಾನ ಕಾರ್ಯದರ್ಶಿಯವರು ಜೆರೊಸೆಲೇಂನಲ್ಲಿ ಪ್ಯಾಲೆಸ್ಟೀನ್ನರ ನರಮೇಧದ ಬಗ್ಗೆ ವರದಿ ತಯಾರಿಸಿದ್ದಾರೆ. ಈ ಬಗ್ಗೆ ವರದಿ ಸಲ್ಲಿಸಲು ಇಸ್ರೇಲಿಗೆ ಭೇಟಿ ನೀಡಬೇಕಾಗಿದ್ದ ಕಾರ್ಯದರ್ಶಿಗಳು ನಿಯೋಗದ ಜತೆ ಇಸ್ರೇಲ್ ಸಹಕರಿಸಲು ನಿರಾಕರಿಸಿತ್ತು. ಆದರೂ ನಿಗದಿಸಿದಂತೆ ಈ ವರದಿಯನ್ನು ತಯಾರಿಸಲಾಗಿದೆ.

ಇವರಲ್ಲಿ ಪ್ಯಾಲೆಸ್ಟೀನ್ನರನ್ನು ರಕ್ಷಿಸಲು ಇಸ್ರೇಲ್‌ನ ಅಧಿಕಾರಿಗಳು ವಿಫಲರಾಗಿದ್ದಾರೆ. ಆದ್ದರಿಂದ ಪ್ಯಾಲೆಸ್ಟೀನ್ನರಿಗೆ ರಕ್ಷಣೆ ನೀಡಲು ಅಂತರರಾಷ್ಟ್ರೀಯ ಕಾನೂನುಗಳ ಪ್ರಕಾರ ಯಾವ ರೀತಿ ಕ್ರಮಗಳನ್ನು ಕೈಗೊಳ್ಳಬೇಕೆಂದು ನಿರ್ಧರಿಸಲು 164 ದೇಶಗಳ ವಿಶೇಷ ಸಭೆಯೊಂದನ್ನು ಕರೆಯಬೇಕೆಂದು ಸಲಹೆ ಮಾಡಲಾಗಿದೆ. ಇಸ್ರೇಲ್ ಆಕ್ರಮಿತ ಪ್ರದೇಶಗಳಲ್ಲಿ ವಾಸಿಸುತ್ತಿರುವ ಪ್ಯಾಲೆಸ್ಟೀನ್ನರಿಗೆ ಇಸ್ರೇಲ್ ಅಧಿಕಾರಿಗಳಿಂದ ಸೈನ್ಯದಿಂದ ರಕ್ಷಣೆಯ ಯಾವ ಭರವಸೆಯೂ ಇಲ್ಲ. ಇದಕ್ಕೆ ಈ ಪ್ರದೇಶಗಳಲ್ಲಿ ವಿಶ್ವ ಸಂಸ್ಥೆಯ ಅಗತ್ಯವಾಗಬಹುದು ಎಂದು ವರದಿಯಲ್ಲಿ ಹೇಳಲಾಗಿದೆ. ಆದರೆ 1967 ರ ಯುದ್ಧದಲ್ಲಿ ಇಸ್ರೇಲ್ ಆಕ್ರಮಿಸಿಕೊಂಡ ಪ್ರದೇಶಗಳಲ್ಲಿ ಶಾಂತಿರಕ್ಷಕ ಪಡೆಗಳು ಅಥವಾ ವೀಕ್ಷಕರ ರೂಪದಲ್ಲಿ ವಿಶ್ವಸಂಸ್ಥೆ ತನ್ನ ಪ್ರತಿನಿಧಿಗಳನ್ನು ಕಳಿಸಬೇಕೆ. ಎಂಬ ಬಗ್ಗೆ ವರದಿಯಲ್ಲಿ ಸಲಹೆ ಮಾಡಲಾಗಿಲ್ಲ.

ಇದು ಒಂದು ನಕಾರಾತ್ಮಕ ವರದಿ. ಆದರೂ ನಮ್ಮ ಎಲ್ಲಾ ನಿರೀಕ್ಷೆಗಳನ್ನು ಪೂರೈಸಿಲ್ಲ ಎಂದು ಪಿ.ಎಲ್.ಓ. ವರದಿ ಬಗ್ಗೆ ಹೇಳಿದೆ.

ಲೆಬನಾನ್‌ನಲ್ಲಿ ಆಕ್ರಮಣದಿಂದ ಕದನವಿರಾಮ?

ಲೆಬನಾನ್ ರಾಜಧಾನಿ ಬೈರೂತ್ ನಗರ ಆಂತರಿಕ ಯುದ್ಧದ ಬೇಗೆಯಿಂದ ಬೇಯುತ್ತಿರುವ ಎಲ್ಲಾ ಜನರ ಸಂಕಷ್ಟಗಳ. ಪ್ರತೀಕವಾಗಿದೆ ಹಲವು ವರ್ಷಗಳಿಂದ ಇಡೀ ಲೆಬನಾನ್ 15 ವರ್ಷಗಳಿಂದ ಅಂತರ್ಯುದ್ಧದಿಂದ ತತ್ತರಿಸಿರುವ ದೇಶ. ಇಂತಹ ದೇಶವೊಂದರಲ್ಲಿ ನಡೆದ ಹೊಸ 'ಆಕ್ರಮಣ'ವೊಂದು,ಇಲ್ಲಿ ಕದನವಿರಾಮಕ್ಕೆ ಮುಂದೆ ಶಾಂತಿಗೆ ಎಡೆ ಮಾಡಿಕೊಡುವ ಆಸೆ ಈ ದೇಶದ ಜನರಲ್ಲಿ ಹುಟ್ಟಿಸಿದೆ. ಇತ್ತೀಚೆಗೆ ಸಿರಿಯಾದ ವಾಯುಪಡೆಯ ವಿಮಾನಗಳು, ಲೆಬನಾನ್ ಸರಕಾರದ ವಿರುದ್ಧ ದಂಗೆ ಎದ್ದು ಹೋರಾಡುತ್ತಿರುವ ಕ್ರಿಶ್ಚಿಯನ್ ಮಾರೋನೈಟ್ ಪಂಗಡದ ನಾಯಕ ಜನರಲ್ ಜಾನ್‌ನ ಅರಮನೆಯ ಮೇಲೆ ದಾಳಿ ಮಾಡಿದವು. ಇದರಿಂದಾಗಿ ಜನರಲ್ ಜಾನ್ ಅರಮನೆ ಬಿಟ್ಟು ಫ್ರಾನ್ಸ್‌ನ ರಾಯಭಾರ ಕಚೇರಿಯಲ್ಲಿ ಅಡಗಿ ಕುಳಿತರು. ಅಲ್ಲಿಂದ ಲೆಬನಾನ್‌ನಿಂದ ಹೊರಗೆ ಹೋಗಬಹುದು ಅಥವಾ ಈ ಹೋರಾಟದಲ್ಲಿ ಇಸ್ರೇಲ್ ಅಥವಾ ಫ್ರಾನ್ಸ್ ತಮ್ಮ ಬೆಂಬಲಕ್ಕೆ ನೀಡಬಹುದು ಎಂದು ನಿರೀಕ್ಷಿಸಿದ್ದು ಸುಳ್ಳಾಯಿತು. ಫ್ರಾನ್ಸ್ ಮತ್ತು ಇಸ್ರೇಲ್ ಜನರಲ್ ಜಾನ್‌ನ ಬೆಂಬಲಿಗರಾದರೂ. ಈಗಿನ ಕೊಲ್ಲಿ ಪರಿಸ್ಥಿತಿಯಲ್ಲಿ ಇಂತಹ ಕೆಲಸಕ್ಕೆ ಇಳಿಯಲು ತಯಾರಿರಲಿಲ್ಲ. ಆದ್ದರಿಂದ 3 ದಿನಗಳ ನಂತರ ಜನರಲ್ ಜಾನ್ ಶರಣಾಗಬೇಕಾಯಿತು.

ಏನು? ಸಿರಿಯನ್ ಆಕ್ರಮಣಕ್ಕೆ ಅಮೆರಿಕಾ ಏನು ಹೇಳುತ್ತದೆ ಎಂದಿರಾ? ಇಲ್ಲ, ಏನೂ ಅನ್ನುವುದಿಲ್ಲ. ಅಮೆರಿಕಾದ ನೀತಿಗೆ ಬೆಂಬಲಿಗರಿಗೆ ಬೇರೆ ದೇಶಗಳ ಆಕ್ರಮಣ ಮಾಡಿ, ಅಲ್ಲಿನ ಆಂತರಿಕ ಯುದ್ಧದಲ್ಲಿ ಭಾಗವಹಿಸುವ ಅನುಮತಿ ಇದೆ. ಅದು ಆಕ್ರಮಣ ಆಗುವುದಿಲ್ಲ! ಸಿರಿಯಾ ಈಗ ಅಮೆರಿಕನ್ ಕೊಲ್ಲಿ ನೀತಿಗೆ ಬಹಳ ನಿಕಟವಾಗಿರುವ ದೇಶ. ಸಿರಿಯಾದ ಈ ಆಕ್ರಮಣವನ್ನು ಯಾರೂ ಖಂಡಿಸಲಿಲ್ಲ. ಇದಕ್ಕೆ ಇನ್ನೊಂದು ಕಾರಣ ಲೆಬನಾನ್‌ನಲ್ಲಿ ಈ ಕ್ರಮದಿಂದ ಶಾಂತಿ ಮೂಡುವಸೂಚನೆಗಳು ಕಂಡುಬಂದಿವೆ.

ಈ ಲೆಬನಾನ್‌ನ ಅಂತರ್ಯುದ್ಧದ ಸಮಸ್ಯೆಗೆ ಭಾರಿ ದೊಡ್ಡ ಚರಿತ್ರೆಯಿದೆ ಲೆಬನಾನ್ ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರು ಸಾಕಷ್ಟು ಸಂಖ್ಯೆಯಲ್ಲಿರುವ ದೇಶ. ಆದ್ದರಿಂದ ಮೊದಲಿನಿಂದಲೂ ಕ್ರಿಶ್ಚಿಯನ್ ಮತ್ತು ಮುಸ್ಲಿಂ ಪಂಗಡಗಳ ನಡುವೆ ಅಧಿಕಾರಕ್ಕೆ, ಪ್ರಾಬಲ್ಯಕ್ಕಾಗಿ ಕಾದಾಟ ಈ ಬೆಂಕಿಗಾಗಿ ಸಾಮ್ರಾಜ್ಯಶಾಹಿಗಳು ಮತ್ತು ಅವರ ಬಾಲಬಡುಕರು ತುಪ್ಪ ಹೊಯ್ಯುತ್ತಿದ್ದಾರೆ ಎನ್ನುವುದು ಯಾರಿಗೂ ಆಶ್ಚರ್ಯದ ಮಾತಲ್ಲ. ಕ್ರಿಶ್ಚಿಯನ್ ಪಂಗಡಗಳಿಗೆ ಇಸ್ರೇಲ್, ಫ್ರಾನ್ಸ್‌ನ ಬೆಂಬಲ. ಮುಸ್ಲಿಂ ಪಂಗಡಗಳಿಗೆ ಸಿರಿಯಾದ ಬೆಂಬಲ. ಕಳೆದ 15 ವರ್ಷಗಳಲ್ಲಿ ರಕ್ತಪಾತ, ಸ್ಫೋಟ ಸಾವು ನೋವು ಆಗದ ದಿನವಿಲ್ಲ ಲೆಬನಾನ್‌ನಲ್ಲಿ. ಲಕ್ಷಕ್ಕೂ ಹೆಚ್ಚು ಮಂದಿ ಈ ಅಂತರ್ಯುದ್ಧದಲ್ಲಿ ಸತ್ತಿದ್ದಾರೆ.

1988 ರಲ್ಲಿ ಅರಬ್ ರಾಷ್ಟ್ರಗಳು ಲೆಬನಾನ್ ಸಮಸ್ಯೆಗೆ ಸೂತ್ರವೊಂದನ್ನು ರೂಪಿಸಿದವು. ಇದರ ಪ್ರಕಾರ ಸೂತ್ರ ಜಾರಿಗೆ ಬರುವವರೆಗೆ ಹಂಗಾಮಿ ಅಧ್ಯಕ್ಷರು ಯಾರು ಎಂಬ ಪ್ರಶ್ನೆ ಮುಂದಾದಾಗ ಸೇನಾ ಮುಖ್ಯಸ್ಥ ಜನರಲ್ ಜಾನ್‌ರವನ್ನೇ ಈ ಕೆಲಸ ಮಾಡಲು ಹೇಳಲಾಯಿತು. ಆದರೆ ಅನಂತರ ಕಾದಾಟ ಜಾಸ್ತಿಯಾಯಿತು. ಆ ಮೇಲೆ ನೇಮಿಸಲಾದ ಹಂಗಾಮಿ ಅಧ್ಯಕ್ಷ ಎಲಿಯಾಸ್ ಹ್ರಾವಿಯವರ ಅಧಿಕಾರವನ್ನು ಜನರಲ್ ಜಾನ್ ಒಪ್ಪಿಕೊಳ್ಳಲಿಲ್ಲ. ಇದರಿಂದ ಸೇನೆಯಲ್ಲಿ ಎರಡು ವಿಭಾಗಗಳಿಗೆ, ಕಳೆದ 11 ತಿಂಗಳುಗಳಿಂದ ಕಾದಾಟ ತೀವ್ರವಾಗಿತ್ತು. ಜಾನ್‌ರ ಶರಣಾಗತಿ ಕ್ರಿಶ್ಚಿಯನ್-ಮುಸ್ಲಿಮ್ ಕಲಹ ನಿಲ್ಲಿಸಿ ಶಾಂತಿ ಸೂತ್ರ ಪುನಃ ಜಾರಿ ಮಾಡುವ ಇಬ್ಭಾಗವಾಗಿರುವ ಬೈರೂತ್ ಒಂದು ಮಾಡುವ ಸಾಧ್ಯತೆ ಉಂಟಾಗಿದೆ.

ಪಾಕ್‌ನಲ್ಲಿ ಹೊಸ ಸರಕಾರ

ಪಾಕಿಸ್ತಾನದಲ್ಲಿ ನವಾಬ್ ಷರೀಫ್‌ರ ನಾಯಕತ್ವದಲ್ಲಿ ಐಜೆಐ ಒಕ್ಕೂಟದ ಸರಕಾರ ಅಧಿಕಾರವಹಿಸಿಕೊಳ್ಳಲಿದೆ. ಇತ್ತೀಚೆಗೆ ನಡೆದ ರಾಷ್ಟ್ರೀಯ ಅಸೆಂಬ್ಲಿಯ ಪ್ರಥಮ ಅಧಿವೇಶನವನ್ನು ಬೆನಜೀರ್ ಭುಟ್ಟೋರವರ ಪಿಪಿಪಿ ಪಕ್ಷದ ನಾಯಕತ್ವದ ಒಕ್ಕೂಟದ ಸದಸ್ಯರು ಬಹಿಷ್ಕರಿಸಿದರು. ಇದಕ್ಕೆ ಕಾರಣ ಬೆನಜಿರ್ ಪತಿ ಝರ್ದಾರಿಯವರನ್ನು ರಾಷ್ಟ್ರೀಯ ಅಸೆಂಬ್ಲಿ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಲು ಬಿಡುಗಡೆ ಮಾಡಲಾಗುವುದು ಎಂಬ ಭರವಸೆ ಕೊಟ್ಟು ಸರಕಾರ ತನ್ನ ಮಾತು ಉಳಿಸಿಕೊಂಡಿಲ್ಲ ಎನ್ನುವದರ ವಿರುದ್ಧ ಪ್ರತಿಭಟನೆ ತೋರಿಸುವುದು ಆಗಿತ್ತು.

ಈ ನಡುವೆ ಪಾಕಿಸ್ತಾನಕ್ಕೆ ಮಿಲಿಟರಿ, ಆರ್ಥಿಕ ನೆರವು ಪುನರಾರಂಭಿಸಲು ತುದಿಗಾಲ ಮೇಲೆ ನಿಂತಿರುವ ಅಮೆರಿಕನ್ ಸರ್ಕಾರ, ಪಾಕಿಸ್ತಾನದ ಚುನಾವಣೆಗಳು ಮುಕ್ತ ನ್ಯಾಯಯುತ ಕೆಲವು ಘಟನೆಗಳನ್ನು ಬಿಟ್ಟರೆ. ಎಂಬ ಅಮೇರಿಕನ್ ನಾಯಕತ್ವದ ಅಂತರಾಷ್ಟ್ರೀಯ ನಿಯೋಗದ ಸರ್ಟಿಫಿಕೇಟ'ನ್ನು ಅಂಗೀಕರಿಸಿದೆ. ಆದರೆ 'ಲೀಗ್ ಆಫ್ ಹ್ಯೂಮನ್ ರೈಟ್ಸ್' ಎಂಬ ಫ್ರೆಂಚ್ ಸಂಘಟನೆಯ ಸದಸ್ಯರು ಶೇಕಡಾ 10-15 ರಷ್ಟು ಮತಗಳನ್ನು ಮತಪೆಟ್ಟಿಗೆಗೆ ಸೇರಿಸುವ ರೂಪದಲ್ಲಿ 'ಗೋಲ್‌ಮಾಲ್' ನಡೆದಿದೆ ಎಂದು ಮಾಡಿರುವ ವರದಿಯನ್ನು ಗಣನೆಗೆ ತೆಗೆದುಕೊಂಡಿಲ್ಲ.

ಭುಟ್ಟೋ ಸರಕಾರದ ವಜಾದಿಂದ ಈವರೆಗಿನ ಘಟನೆಗಳನ್ನು ನೋಡಿದರೆ-ಇದರಲ್ಲಿ ಅಮೆರಿಕನ್ ಸಾಮ್ರಾಜ್ಯ, ಸೈನ್ಯ, ಧಾರ್ಮಿಕ ಮೂಲಭೂತವಾದಿಗಳ ತ್ರಿವಳಿಯ ಪ್ರತಿಗಾಮಿ ಒಕ್ಕೂಟದ ಕೈವಾಡ ಸ್ಪಷ್ಟವಾಗಿ ಕಾಣಬರುತ್ತಿದೆ.

ನೊರಿಯೇಗಾ ವಿಚಾರಣೆ

ಮಾದಕ ವಸ್ತುಗಳ ಕಳ್ಳಸಾಗಣಿಕೆಯ ಅಂತರಾಷ್ಟ್ರೀಯ ಸಾಗಾಣಿಕೆಯಲ್ಲಿ ಪಾಲುದಾರನಾಗಿದ್ದನೆಂಬ ಆಪಾದನೆ ಮೇಲೆ ನೊರಿಯೇಗಾ ಸರ್ಕಾರ ಉರುಳಿಸಿ. ಆತನನ್ನು ಬಂಧಿಸಿ ವಿಚಾರಣೆಗೆ ಗುರಿಪಡಿಸಲಾಗುವುದು ಎಂದು ಅಮೆರಿಕಾ ಹತ್ತು ತಿಂಗಳ ಹಿಂದೆ ಹೇಳಿತ್ತು. ಆದರೆ ಪನಾಮಾದ ಮಾಜಿ ಅಧ್ಯಕ್ಷನ ಮೇಲೆ ವಿಚಾರಣೆ ಇನ್ನೂ ಆರಂಭವಾಗಿಲ್ಲ. ನೊರಿಯೇಗಾ ವಿಚಾರಣೆ ಅಮೆರಿಕನ್‌ಸರ್ಕಾರಕ್ಕೆ ಸಿ.ಐ.ಎ.ಗೆ ನುಂಗಲಾರದ ತುತ್ತಾಗಿದೆ.

ನೊರಿಯೇಗಾನ ವಕೀಲರು ಆತನ ಆಸ್ತಿಯನ್ನು ಮಟ್ಟುಗೋಲು ಹಾಕಿಕೊಂಡಿದ್ದನ್ನು, ಅಮೆರಿಕನ್ ಕಾನೂನು ಪ್ರಕಾರ ವಿದೇಶಿಯನೊಬ್ಬನನ್ನು ವಿಚಾರಣೆಗೆ ಗುರಿಪಡಿಸುವುದರ ಕಾನೂನುಬದ್ಧತೆಯನ್ನು ಪ್ರಶ್ನಿಸಿದ್ದಾರೆ. ಅವರ ವಕೀಲರು ನೊರಿಯೇಗಾರ ಆಸ್ತಿ, ಆತ ಸಿ.ಐ.ಎ. ಏಜೆಂಟರಾಗಿ ಸಂಪಾದಿಸಿದ ಹಣವೇ ಅಲ್ಲದೆ ಸಿ.ಐ.ಎ. ಏಜೆಂಟರಾಗಿ ಅವರು ಅವರ ನಿರ್ದೇಶನದಂತೆ ಕೆಲಸ ನಿರ್ವಹಿಸುತ್ತಿದ್ದುದಾಗಿ ಹೇಳಿದ್ದಾರೆ. ಇದರಲ್ಲಿ ಕೊಕೇನ್ ಕಳ್ಳಸಾಗಣಿಕೆ ಸಹ ಸಿ.ಐ.ಎ.ನ ನಿರ್ದೇಶನದಂತೆ ನಡೆಸಿದ್ದಾಗಿಹೇಳಿರುವುದು ಸರ್ಕಾರಕ್ಕೆ, ಸಿ.ಐ.ಎ.ಗೆ ನುಂಗಲಾರದ ತುತ್ತಾಗಿದೆ. ಇದು ಹೀಗೆ ಮುಂದುವರೆದರೆ ಸಿ.ಐ.ಎ.ಯ ಎಲ್ಲಾ ರಹಸ್ಯಗಳು ಬಯಲಾಗಬಹುದೆಂಬ ಭಯ ಅವರಿಗೆ. ಆದ್ದರಿಂದ ನಿಜವಾದ ವಿಚಾರಣೆ ಇನ್ನೂ ಆರಂಭವಾಗಿಲ್ಲ. ಸರಕಾರ ಈ ವಿಚಾರಣೆಯನ್ನು ಸಾಧ್ಯವಾದಷ್ಟು ಮುಂದೂಡುತ್ತಿದೆ.

ಚಿತ್ತಗಾಂಗಿನಲ್ಲಿ ಅಯೋಧ್ಯೆಯ ಪ್ರತಿಫಲನ

ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಹಾಳುಗೆಡವಲ್ಪಟ್ಟ ಪ್ರಯತ್ನ ಮಾಡಲಾಯಿತು ಎಂಬ ಸುದ್ದಿ ಬಾಂಗ್ಲಾದೇಶದ ಮುಖ್ಯ ಪತ್ರಿಕೆಗಳಲ್ಲಿ, ಒಂದಾದ ಚಿತ್ತಗಾಂಗ್‌ನಲ್ಲಿ ಗಲಭೆಗಳು ಆಗಿ ಕರ್ಫ್ಯೂ ಹಾಕುವ ಪರಿಸ್ಥಿತಿ ತಂದೊಡ್ಡಿದೆ. ಗಲಭೆಗಳ ಈ ಸುದ್ದಿ ತಿಳಿದು ಮುಸ್ಲಿಂ ಮೂಲಭೂತವಾದಿಗಳ ಗುಂಪೊಂದು ಮಂದಿರಗಳ ಹಿಂದು ದೇವಸ್ಥಾನಗಳ ಮೇಲೆ ಆಕ್ರಮಣ ಮಾಡುವುದರಿಂದ ಆರಂಭವಾಯಿತು.

ಬಾಂಗ್ಲಾದೇಶದಲ್ಲಿ ಕೋಮುವಾದಿಗಳ ಪ್ರಭಾವ ತುಂಬಾ ಸೀಮಿತವಾದದ್ದು ಎನ್ನಲಾಗುತ್ತದೆ. ಆದರೆ ಅಯೋಧ್ಯಾ ವಿವಾದವನ್ನು ಉಪಯೋಗಿಸಿ, ಗಲಭೆ ಎಬ್ಬಿಸಿ ತಮಗೆ ಬೇಕಾದ ಕೆಲವು ಮುಖ್ಯ ಜಾಗಗಳಲ್ಲಿ ಜನರನ್ನು ಒಕ್ಕಲೆಬ್ಬಿಸುವ ಆಸ್ತಿ ಮಾರಾಟಗಾರರ ಪಿತೂರಿ ಇದು ಎಂದು ಹೇಳಲಾಗಿದೆ. ಇಂತಹ ಪ್ರಯತ್ನಗಳು ಭಾರತದ ಇಂದೋರ್ ಮುಂತಾದ ನಗರಗಳಲ್ಲೂ ಆಗಿವೆ.

ಪಾಕಿಸ್ತಾನದ ಮಾನವ ಹಕ್ಕುಗಳ ಸಂಘಟನೆ ಅಯೋಧ್ಯೆಯಲ್ಲಿ ಮಸೀದಿಯ ರಕ್ಷಣೆಗೆ ಕಟು ಕ್ರಮ ತೆಗೆದು ಕೊಂಡದ್ದಕ್ಕೆ ಪ್ರಧಾನಿ ವಿ.ಪಿ. ಸಿಂಗ್‌ರವರನ್ನು ಅಭಿನಂಧಿಸಿದೆ.

ಥ್ಯಾಚರ್ ಸರಕಾರದಲ್ಲಿ ಬಿಕ್ಕಟ್ಟು

ಈಗಾಗಲೇ ಜನಪ್ರಿಯತೆಯನ್ನು ವೇಗವಾಗಿ ಕಳೆದುಕೊಳ್ಳುತ್ತಿರುವ ಬ್ರಿಟನ್‌ನ ಥ್ಯಾಚರ್‌ರ ಸರ್ಕಾರಕ್ಕೆ ಇನ್ನೊಂದು ಏಟು ಬಿದ್ದಿದೆ. ಉಪಪ್ರಧಾನಿ ಸರ್ ಜೆಫ್ರಿ ಹೋವ್, ಪ್ರಧಾನಿಯವರ ಜತೆ ಯುರೋಪಿನ ಆರ್ಥಿಕ ಮತ್ತು ಹಣಕಾಸು ಒಕ್ಕೂಟದ ನೀತಿ ಬಗ್ಗೆ ತೀವ್ರ ಭಿನ್ನಾಭಿಪ್ರಾಯವೇ ರಾಜೀನಾಮೆಗೆ ಕಾರಣ ಎಂದು ಹೇಳಿದ್ದಾರೆ. ಇತ್ತೀಚೆಗೆ ಯುರೋಪಿಯನ್ ಸಮುದಾಯದ ರೋಮ್ ಸಭೆಯಲ್ಲಿ ಥ್ಯಾಚರ್ ತೆಗೆದುಕೊಂಡ ನಿಲುವು ಬ್ರಿಟನ್‌ನ ಸ್ಥಾನಕ್ಕೆ ಕುಂದು ತರುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಥ್ಯಾಚರ್‌ರವರ 11 ವರ್ಷಗಳ ಪ್ರಧಾನಮಂತ್ರಿತ್ವದಲ್ಲಿ ಇದೇ ಭಿನ್ನಾಭಿಪ್ರಾಯದ ಆಧಾರದ ಮೇಲೆ 'ರಾಜೀನಾಮೆ ಕೊಡುತ್ತಿರುವ ಹಿರಿಯ ಮಂತ್ರಿಗಳಲ್ಲಿ ಸರ್ ಜೆಫ್ರಿ ಹೋವ್ ಆರನೆಯವರು.

ನ್ಯೂಜಿಲೆಂಡ್‌ನಲ್ಲಿ ಲೇಬರ್ ಪರಾಭವ

ನ್ಯೂಜಿಲೆಂಡ್‌ನಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಆಳುವ ಲೇಬರ್ ಸರ್ಕಾರ ತೀವ್ರ ಪರಾಭವ ಕಂಡಿದೆ. ಬಲಪಂಥೀಯ ರಾಷ್ಟ್ರೀಯ ಪಕ್ಷ ಚುನಾವಣೆಯಲ್ಲಿ ಭಾರಿ ಜಯಗಳಿಸಿದೆ.

ಇದರಿಂದ ನ್ಯೂಜಿಲೆಂಡ್‌ನ ಮಿಲಿಟರಿ ಮತ್ತು ವಿದೇಶ ನೀತಿ ಬದಲಾಗುವ ಸಾಧ್ಯತೆ ಇದೆ. ಹಿಂದಿನ ಲೇಬರ್ ಸರ್ಕಾರ ನ್ಯೂಜಿಲೆಂಡ್, ಆಸ್ಟ್ರೇಲಿಯಾ, ಮತ್ತು ಅಮೇರಿಕಾ ನಡುವಣ ಇರುವ ಅನ್‌ಝುಸ್ ಒಪ್ಪಂದದಿಂದ ಹೊರ ಬರುವ ತೀರ್ಮಾನ ಮಾಡಿತ್ತು. ಇದಕ್ಕೆ ಕಾರಣ ಸರ್ಕಾರ ನ್ಯೂಜಿಲೆಂಡನ್ನು ಅಣ್ವಸ್ತ್ರ ರಹಿತ ದೇಶಮಾಡುವ ನಿರ್ಧಾರ ಮಾಡಿತ್ತು. ಆದರೆ ಅಮೆರಿಕನ್ ಯುದ್ಧಹಡಗುಗಳು ಅಣ್ವಸ್ತ್ರ ಸಜ್ಜಿತ ಹೌದೋ ಅಲ್ಲವೋ ಎಂದು ತಿಳಿಸಲು ನಿರಾಕರಿಸುತ್ತವೆ. ಆದ್ದರಿಂದ ಈ ಮಿಲಿಟರಿ ಸಂಬಂಧವನ್ನು ಕಡಿದುಕೊಳ್ಳಲು ಅಂದಿನ ಲೇಬರ್ ಸರ್ಕಾರ ನಿರ್ಧರಿಸಿತ್ತು. ಆದರೆ ಹೊಸ ಸರ್ಕಾರ ಈ ಒಪ್ಪಂದ ಪುನಃ ಆರಂಭಿಸುವ ಸಾಧ್ಯತೆ ಇದೆ. ಈ ಆಶಯದ ಹೇಳಿಕೆಗಳನ್ನು ಹೊಸ ಪ್ರಧಾನಿ ನೀಡಿದ್ದಾರೆ.

ನೇಪಾಳದಲ್ಲಿ ಏಪ್ರಿಲ್‌ನಲ್ಲಿ ಚುನಾವಣೆ

ಹೊಸ ಸಂವಿಧಾನದ ಪ್ರಕಾರ ಏಪ್ರಿಲ್‌ನಲ್ಲಿ ಹಲವು ದಶಕಗಳ ನಂತರ ನೇಪಾಳದಲ್ಲಿ ಬಹು-ಪಕ್ಷೀಯ ಚುನಾವಣೆಗಳನ್ನೂ ನಡೆಸಲಾಗುವುದು ಎಂದು ನೇಪಾಳದ ಚುನಾವಣಾಧಿಕಾರಿ ತಿಳಿಸಿದ್ದಾರೆ. ಈ ಚುನಾವಣೆಗೆ ಅರ್ಹತಾ ಪ್ರಾಯವನ್ನು 21 ರಿಂದ 18 ಕ್ಕೆ ಇಳಿಸಲಾಗಿದ್ದು, ಸುಮಾರು 1 ಕೋಟಿ ಜನರು ಮತನೀಡಲು ಅರ್ಹರಾಗಿದ್ದಾರೆ ಎಂದು ಹೇಳಲಾಗಿದೆ

ದೇಶದ ಪಾರ್ಲಿಮೆಂಟಿನ 205 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ.

ಇರಾಕ್ ವಿರುದ್ಧ ಇನ್ನೊಂದು ಭದ್ರತಾ ಸಮಿತಿ ನಿರ್ಣಯ

ಸೋವಿಯತ್ ಅಧ್ಯಕ್ಷರ ವಿಶೇಷ ಪ್ರತಿನಿಧಿಯ ಶಾಂತಿಮಾತುಕತೆಗಳು ವಿಫಲವಾದ ಹಿನ್ನೆಲೆಯಲ್ಲಿ, ಭದ್ರತಾಸಮಿತಿ ಇರಾಕ್‌ನ ವಿರುದ್ಧ ಇನ್ನೊಂದು ನಿರ್ಣಯ ತೆಗೆದುಕೊಂಡಿದೆ. ಭದ್ರತಾಸಮಿತಿಯ ಹಿಂದಿನ ನಿರ್ಣಯಗಳನ್ನು ಪಾಲಿಸಬೇಕೆಂದು ಪುನಃ ನಿರ್ದೇಶನ ನೀಡಿರುವುದಲ್ಲದೆ, ಕುವೈತ್ ಮತ್ತಿತರ ಮೂರನೇ ದೇಶಗಳ ಜನರ ಕಂಪನಿಗಳ ಸಂಕಷ್ಟ, ನಷ್ಟಗಳಿಗೆ ಇರಾಕ್ ಸಂಪೂರ್ಣ ಹೊಣೆಗಾರನಾಗಿಸಲಾಗುವುದು ಎಂದು ನಿರ್ಣಯ ಹೇಳಿದೆ. ಇದರ ಆರ್ಥಿಕ ಕ್ರಮ ಎಷ್ಟು ಎಂದು ನಷ್ಟಕ್ಕೊಳಗಾದ ದೇಶಗಳು ಸಮಿತಿಗೆ ತಿಳಿಸಬೇಕೆಂದು ನಿರ್ಣಯ ಹೇಳುತ್ತದೆ.

ಭಾರತ ಭದ್ರತಾ ಸಮಿತಿ ಸದಸ್ಯ

ಮುಂದಿನ ವರ್ಷದ ಜನವರಿಯಿಂದ ಭಾರತ ಭದ್ರತಾ ಸಮಿತಿಯ ಸದಸ್ಯದೇಶವಾಗಿ ಚುನಾಯಿತವಾಗುವುದು ಹೆಚ್ಚು ಕಡಿಮೆ ಖಚಿತವಾಗಿದೆ. ಭದ್ರತಾ ಸಮಿತಿಯ ಶಾಶ್ವತ ಸದಸ್ಯರಲ್ಲದ 10 ಸದಸ್ಯದೇಶಗಳಲ್ಲಿ 5 ದೇಶಗಳು ಪ್ರತಿ ಎರಡು ವರ್ಷಗಳಿಗೊಮ್ಮೆ ನಿವೃತ್ತವಾಗುತ್ತದೆ. ಏಷ್ಯಾದಿಂದ ಮಲೇಶ್ಯಾದ ಜಾಗಕ್ಕೆ ಭಾರತವನ್ನು ಆ ಗುಂಪಿನ ದೇಶಗಳು ಆಗಲೇ ಒಮ್ಮತ ವ್ಯಕ್ತಪಡಿಸಿದೆ. ಸದಸ್ಯತ್ವದ ಅವಧಿ ಎರಡು ವರ್ಷ.

ಹೊಲಿಗೆ ತರಬೇತಿ ಕೇಂದ್ರ ಉದ್ಘಾಟನ

ಬೆಂಗಳೂರು ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ರಾಜಗೋಪಾಲನಗರದ ಘಟಕವು ಅಕ್ಟೋಬರ್ 1ರಂದು ಹೊಲಿಗೆ ತರಬೇತಿ ಕೇಂದ್ರ ಪ್ರಾರಂಭಿಸಿದೆ.

ಮಾಜಿ ಭೂನ್ಯಾಯ ಮಂಡಳಿ ಸದಸ್ಯರಾದ ಬಿ.ಟಿ.ವಿ. ರಾಜಪ್ಪನವರು ಉದ್ಘಾಟನಾ ಭಾಷಣ ಮಾಡುತ್ತಾ ಮಹಿಳೆಯರು ಸರಕಾರದ ಯೋಜನೆ ಉಪಯೋಗಿಸಿಕೊಂಡರೆ ಸ್ವಂತ ದುಡಿಯುವಂತಾಗಿ ಹಿತ್ತಿಲಿನ ಹೊಂದುವ ಅವಶ್ಯಕತೆ ಬಹಳ ಇದೆ ಎಂದು ತಿಳಿಸಿದರು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಹ ಕಾರ್ಯದರ್ಶಿ ಶಾಂತಕುಮಾರಿಯವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಘಟಕದ ಮಹಿಳೆಯರು ನಡೆಸುವ ಹೋರಾಟ ಸ್ಮರಿಸಿ ಬಿ.ಡಿ.ಸಿ. ಯಿಂದ ಸಿಕ್ಕಿರುವ ಈ ಹೊಲಿಗೆ ತರಬೇತಿ ಕೇಂದ್ರದಿಂದ ಸಿಗುವ ರೂ100 ಉಪಯೋಗಪಡೆದು 6 ತಿಂಗಳ ತರಬೇತಿ ಹೊಂದಿ ಸರಕಾರದಿಂದ ಸಿಗುವ ಉಪಯೋಗಪಡೆಯುವುದಲ್ಲದೆ ಸಮಾಜದ ಅನಿಷ್ಟ ಪಿಡುಗು, ಕಂದಾಚಾರಗಳ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದರು.

ಈ ಸಮಾರಂಭಕ್ಕೆ ಆಗಮಿಸಿದ್ದ ದಾಸರಹಳ್ಳಿ ಡಿವೈಎಫ್‌ಐ ಘಟಕದ ಕಾರ್ಯದರ್ಶಿ ನಂಜರಾಜ್‌ರವರು ಈ ಉದ್ಘಾಟನಾ ಸಮಾರಂಭಕ್ಕೆ ಶುಭ ಕೋರಿದರು. ಪ್ರಾರಂಭದಲ್ಲಿ ಲತಾ ಸ್ವಾಗತಿಸಿ, ಕೊನೆಯಲ್ಲಿ ಸರೋಜಮ್ಮ ವಂದಿಸಿದರು.

ಡಿ.ವೈ.ಎಫ್.ಐ ಘಟಕದ ಸಭೆ

ಕುತ್ತಾರು ಮುನ್ನೂರು ವಲಯ ಡಿ.ವೈ.ಎಫ್.ಐ. ಘಟಕ ಸಭೆಯು ತಾ 14.10.90 ರಂದು ಕೋಟೆಕಾರ್ ಬೀಡಿ ಲೇಬರ್ ಯೂನಿಯನಿನ ಉಪಾಧ್ಯಕ್ಷರಾದ ಕೆ.ಈಶ್ವರ್ ಇವರ ಅಧ್ಯಕ್ಷತೆಯಲ್ಲಿ ದೆಪ್ಪೆರಿ ವಂಠ್‌ನ ಬಾಕಿಮಾರ್ ಎಂಬಲ್ಲಿ ಜರಗಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಮೂನ್ನೂರು ಮಂಡಲ ಸದಸ್ಯ ಹಾಗೂ ಉಳ್ಳಾಲ ಡಿ.ವೈ.ಎಫ್.ಐ. ವಲಯದ ಉಪಾಧ್ಯಕ್ಷರಾದ ಕೆ. ಕೃಷ್ಣಪ್ಪ ಸಾಲ್ಯಾನ್ ಹಾಗೂ ಸದಸ್ಯರಾದ ಕೆ.ಬಸಪ್ಪ, ಕೆ.ವಿಶ್ವನಾಥ ಮತ್ತ ಕೋಟೆಕಾರ್ ಬೀಡಿ ಲೇಬರ್ ಯೂನಿಯನ್ ಸದಸ್ಯ ಯು.ಜಯಂತ್ ನಾಯಕ್ ಇವರುಗಳು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

1990-91ನೇ ಸಾಲಿನ ಪದಾಧಿಕಾರಿಗಳಾಗಿ ಅಧ್ಯಕ್ಷ ಮಾಧವ ಬಿ. ಕಾರ್ಯದರ್ಶಿಯಾಗಿ ರಘುಪತಿ ಇವರುಗಳನ್ನು ನೇಮಕ ಮಾಡಲಾಯಿತು.

K R N M/ BGW - 293 MAG (2) PRB DECR 319 - 78/79

ವಿಳಾಸ:

ಏಕೆ? ಏಷ್ಟು?....

ಪುಟ 2 ರಿಂದ

ಪ್‌ಸಿಂಗ್ ಸಮಿತಿಗಳ, ಮತ್ತು ದೇವಿಲಾಲ್‌ರ ನೀತಿ ಇದು.

ಉದಾಹರಣೆಗೆ, ಹನುಮಂತರಾವ್ ಸಮಿತಿ ಉತ್ಪಾದನಾ ವೆಚ್ಚ ಲೆಕ್ಕಹಾಕುವಾಗ ಆ ಪ್ರದೇಶದಲ್ಲಿ ನಿಜವಾಗಿಯೂ ಕೊಡಲಾಗುತ್ತಿರುವ ಕೂಲಿಯನ್ನು ತೆಗೆದುಕೊಳ್ಳಬೇಕು ಮತ್ತು ಶೇಕಡಾ 10ರಷ್ಟು ನಿರ್ವಹಣಾ ವೆಚ್ಚವಾಗಿ ಸೇರಿಸಬೇಕು ಎಂದು ಶಿಫಾರಸು ಮಾಡುತ್ತದೆ. ಇದು ನ್ಯಾಯಯುತವಾದದ್ದೇ ಆದರೆ ಉಳಿದ ಎರಡು ಸಮಿತಿಗಳು ನಿಜವಾದ ಅಥವಾ ನಿಗದಿತ ಕೂಲಿ(ಯಾವುದು ಹೆಚ್ಚು ಇರುತ್ತದೋ ಅದು) ಮತ್ತು ಒಟ್ಟು ಉತ್ಪಾದನಾ ವೆಚ್ಚದ ಶೇಕಡಾ 10 ಭಾಗ ನಿರ್ವಹಣಾ ವೆಚ್ಚ ತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡುತ್ತವೆ.

ಭಾನುಪ್ರತಾಪ್ ಸಿಂಗ್ ಸಮಿತಿ ಪ್ರೋತ್ಸಾಹದಾಯಕ ಬೆಲೆಗಳು ಉತ್ಪಾದಕರಿಗೆ ಸಾಕಷ್ಟು ಲಾಭ ಕೊಡುವಷ್ಟು ಇರಬೇಕು ಎಂದು ಸ್ಪಷ್ಟವಾಗಿ ಹೇಳುತ್ತದೆ. ಅವರ ಮನಸ್ಸಿನಲ್ಲಿರುವುದು ಬಡ, ಮಧ್ಯಮ, ಸಣ್ಣ ರೈತರಲ್ಲ ಎನ್ನುವುದು ಸ್ಪಷ್ಟ. ಏಕೆಂದರೆ ಈ ವಿಭಾಗಗಳ ರೈತರ ಬಳಿ ಮಾರುವಷ್ಟು ಬೆಳೆ ಇರುವುದು ಅಪರೂಪ. ಆದರೂ ಎಷ್ಟೋ ಭಾರಿ ಇತರ ಅಗತ್ಯಗಳಿಗಾಗಿ ಬೆಳೆ ಮಾರಬೇಕಾಗುತ್ತದೆ. ಇವರಿಗೆ ಉತ್ಪಾದನಾ ವೆಚ್ಚವನ್ನು ಸರಿದೂಗಿಸುವ ಬೆಲೆ ಮುಖ್ಯ ಸಮಸ್ಯೆ. ಇನ್ನೂ ಮುಂದೆ ಹೋಗಿ ಈ ಸಮಿತಿ ಕಮಿಷನ್ ಕೃಷಿ ಉತ್ಪಾದನೆಯಲ್ಲಿರುವ ನಷ್ಟಕಾರಕ ಅಪಾಯ (ನೆರೆ, ಬರ ಇತ್ಯಾದಿಗಳು), ಉಪಯೋಗಿಸ್ಲುವ ಗೊಬ್ಬರಗಳ ಗರಿಷ್ಠ ಪ್ರಮಾಣದ ವೆಚ್ಚ (ಬದಲು ಸರಾಸರಿ ವೆಚ್ಚ) ಯಾವ ಬೆಳೆಗೂ ಸೇರದ ಅಧಿಕ ವೆಚ್ಚ, ಸಾಗಾಣಿಕೆ ವೆಚ್ಚ ಇತ್ಯಾದಿಗಳನ್ನು ಕಮಿಷನ್ ಬೆಲೆ ನಿರ್ಧರಿಸುವಾಗ ತೆಗೆದುಕೊಳ್ಳುವುದಿಲ್ಲನೆಂದು ದೂರುತ್ತದೆ. ಇವೆಲ್ಲ ಭೂಮಾಲಿಕರ ಬೇಡಿಕೆಗಳು.

ಬಡ ರೈತರಿಗೆ ಮಾರಕ ಕೃಷಿ ನೀತಿ

ಪ್ರಾಕೃತಿಕ ಪ್ರಕೋಪಗಳಿಗೆ ಬೆಳೆ ವಿಮೆ ಪರಿಹಾರ ಘುಟ್ಟಾಪಟ್ಟೆ ಸಾರ್ವತ್ರಿಕವಾಗಿ ಬೆಲೆ ಏರಿಸುವುದು ಅಲ್ಲ. ಅಲ್ಲದೆ ನಿಗದಿತ ಬೆಲೆಯಲ್ಲಿ ನಿಜವಾಗಿಯೂ ಒಟ್ಟು ಉತ್ಪಾದನೆಯ ಶೇಕಡಾ 10 ಭಾಗ ಮಾತ್ರ ಸರಕಾರ ಖರೀದಿ ಮಾಡುತ್ತದೆ. ಉಳಿದ ಶೇಕಡಾ 90 ಭಾಗ ಮಾರುಕಟ್ಟೆ ಬೆಲೆಯಲ್ಲಿ ಮಾರಾಟವಾಗುತ್ತದೆ. ಇದು ಸ್ಥಳೀಯವಾಗಿ ಅಧಿಕ ವೆಚ್ಚ, ಸಾಗಾಣಿಕೆ ಮಾರುಕಟ್ಟೆ ಏರುಪೇರು ಇತ್ಯಾದಿಗಳಿಗೆ ಸಂಬಂಧಿಸಿ ಹೆಚ್ಚಾಗಿರುತ್ತದೆ. ಆದ್ದರಿಂದ ಸರಕಾರ ನಿಗದಿಪಡಿಸುವ ಬೆಂಬಲ ಬೆಲೆಯಲ್ಲಿ ಇಂತಹ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿಲ್ಲ.

ಇಂತಹ ಬೆಲೆ ಏರಿಕೆಗಳಿಂದ ಪ್ರಯೋಜನ ಪಡೆಯುವುದು ಭೂಮಾಲಿಕರು ಮಾತ್ರ. ನಮ್ಮ ಮಾರುಕಟ್ಟೆಯಲ್ಲಿ ಮಾರಾಟವಾಗುವ ಮಿಗಿತಾಯ ಬೆಳೆಯ ಅರ್ಧದಷ್ಟನ್ನು ಶೇಕಡಾ 10 ಶ್ರೀಮಂತ ರೈತರೇ ಮಾರಾಟ ಮಾಡುತ್ತಾರೆ. ಶೇಕಡಾ 76ರಷ್ಟಿರುವ ಸಣ್ಣ,-ಬಡ ರೈತರು ಒಟ್ಟು ಬೆಳೆಯ ಕೇವಲ ಶೇಕಡಾ 26 ಭಾಗ ಮಾರಾಟ ಮಾಡುತ್ತಾರೆ. ಅಲ್ಲದೆ ಇವರಿಗೆ ಒಳ್ಳೆಯ ಬೆಲೆ ಬರುವವರೆಗೆ ಉತ್ಪನ್ನ ಇಟ್ಟುಕೊಳ್ಳುವ ಚೈತನ್ಯ ಇಲ್ಲದಿರುವುದರಿಂದ ಹೆಚ್ಚಾಗಿ ಬೆಂಬಲ ಬೆಲೆಯ ಪ್ರಯೋಜನವೂ ಅವರಿಗೆ ಸಿಗುವುದಿಲ್ಲ. ಸರಕಾರಿ ಖರೀದಿ ಕೇಂದ್ರಗಳು ಉತ್ಪಾದನೆಯ ಜಾಗದಿಂದ ದೂರವಾಗಿ ವಿರಳವಾಗಿ ಇರುತ್ತದೆ.

ಶರದ್ ಜೋಷಿ, ಭಾನುಪ್ರತಾಪ್ ಸಿಂಗ್ ಸಮಿತಿಗಳು ಶಿಫಾರಸು ಮಾಡುವ ನೀತಿಯ ಪ್ರಕಾರ ಬೆಂಬಲ ಬೆಲೆ ಮತ್ತು ಸಾರ್ವತ್ರಿಕ ವಿತರಣಾ ವ್ಯವಸ್ಥೆ(ರೇಷನ್)-ಯನ್ನು ತೆಗೆದುಹಾಕಬೇಕು. ಇದರ ಬದಲು 'ಆಹಾರ ಭದ್ರತೆ' ಯೋಜನೆ ಇರಬೇಕು. ಇದು ಈಗಿನ ಬೆಂಬಲ ಬೆಲೆ ಮತ್ತು ಆಪತ್ಕಾಲೀನ ಸ್ಟಾಕ್ ಇಡುವ ಬದಲು ಬರಿಯ ಮಾರುಕಟ್ಟೆ ವಿಧಾನವನ್ನು ಅನು-ಅನುಸರಿಸುತ್ತದೆ. ಇದು ಹೆಚ್ಚಿನ ಮಿಗಿತಾಯ ಉತ್ಪಾದನೆ ಮಾಡುವವರಿಗೆ ಅನುಕೂಲಕರವಾಗಿರುತ್ತದೆ. ರೇಶನ್ ವ್ಯವಸ್ಥೆ ನಗರಗಳಲ್ಲಿ ಬಡವರಿಗೆ ಸೀಮಿತವಾಗಿರಬೇಕು. ಹಳ್ಳಿಯಲ್ಲಿ 'ಕೂಲಿಗಾಗಿ ಕಾಳು' ಯೋಜನೆ ಇರುವುದರಿಂದ ರೇಶನ್ ಅಗತ್ಯವಿಲ್ಲ. ಇದು ಇವರ ಶಿಫಾರಸ್ಸು. ಆದರೆ ಸಾಮಾನ್ಯವಾಗಿ ರೇಶನ್ ಪದ್ಧತಿ ನಮ್ಮಂತಹ ಅತ್ಯಂತ ಹೆಚ್ಚಿನ ಬಡತನ ಇರುವ ದೇಶದಲ್ಲಿ ಸಾರ್ವತ್ರಿಕವಾಗಿರಬೇಕು. ಹಳ್ಳಿಯಲ್ಲಿ ಅದರ ಅಗತ್ಯ ಇನ್ನೂ ಹೆಚ್ಚು. ಭೂಮಾಲಕರ ಲಾಭದಾಸೆ. ಆಹಾರ ಅಭಾವದ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಳ್ಳದಿರುವ ಒಳ್ಳೆತನದ ಮೇಲೆ ಈ ಕೃಷಿ ನೀತಿ ಆಧರಿಸಿದೆ. ಇದ್ದಕ್ಕಿಂತ ಇನ್ನೂ ಹೆಚ್ಚಿನ ಭೂಮಾಲಕ - ಪರ ನೀತಿ ಏನು ಇರಲು ಸಾಧ್ಯ

'ವಿರೋಧ' ದಲ್ಲಿ ವಿರೋಧಾಭಾಸ!

"ಅಯೋಧ್ಯೆ ಪ್ರಶ್ನೆಯ ಮೇಲೆ ಅಡ್ವಾಣಿಯವರೊಂದಿಗೆ ಮಾತುಕತೆಗೆ ಗಂಭೀರ ಪಯತ್ನ ನಡೆಸಲಿಲ್ಲ..... ಎಲ್ಲಾ ರಂಗಗಳಲ್ಲಿ ವಿಫಲವಾದ ಮೇಲೆ ಮೀಸಲಾತಿ ಮುಂತಾದ ಜನರನ್ನು ಮರುಳು ಮಾಡುವ ನಿರ್ಣಯಗಳನ್ನು ಕೈಗೊಂಡರು. ರಾಮಜನ್ಮಭೂಮಿ-ಬಾಬ್ರಿಮಸೀದಿ ಪ್ರಶ್ನೆಯಲ್ಲಿ ತಿಕ್ಕಾಟದ ನಿಲುವು ತಳೆದರು..."

-ಚಂದ್ರಶೇಖರ್.

ಬಿ.ಜೆ.ಪಿ.ಯ ರಥಯಾತ್ರೆ ರಾಮಜನ್ಮಭೂಮಿಗಾಗಿ ಅಲ್ಲ, ಅದು ರಾಜಯಾತ್ರೆ. ಅಶ್ವಮೇಧ ಯಜ್ಞ. ಬಿ.ಜೆ.ಪಿ. ಕೂಡಾ ಹಿಂದಿನ ರಾಜರುಗಳಂತೆ ಅಧಿಕಾರಕ್ಕಾಗಿ ಯುದ್ಧ ಹೂಡಿತು.

-ದೇವೀಲಾಲ್.

ಗೋಸುಂಬೆ ರಾಜಕಾರಣ?

ಈ ಸರಕಾರ ಬಹುರಾಷ್ಟ್ರೀಯ ಕಂಪೆನಿಗಳ ಮೇಲೆ ಅವಲಂಬಿಸುತ್ತಿದೆ. ಕಳೆದ ಎಂಟು ತಿಂಗಳಿಂದ ನಾನು ಈ ಸರಕಾರವನ್ನು ಕೈಗಾರಿಕಾ ಧೋರಣೆ ಬದಲಿಸಬೇಕೆಂದು ಪದೇ ಪದೇ ಕೇಳುತ್ತಾ ಬಂದೆ. ಆದರೆ ಇದುವರೆಗೂ ಯಾವ ಕ್ರಮವನ್ನೂ ಕೈಗೊಂಡಿಲ್ಲ.

-ಚಂದ್ರಶೇಖರ್

ಬಹುರಾಷ್ಟ್ರೀಯ ಕಂಪೆನಿಗಳು, ಕೈಗಾರಿಕಾ ಧೋರಣೆಗಳನ್ನು ಟೀಕಿಸುತ್ತಾ ಬಂದವರು ಕಾಂಗ್ರೆಸ್ ಬೆಂಬಲ ನಿರೀಕ್ಷಿಸುವುದು ತಮಾಷೆಯಾಗಿದೆ. ಇವು ಕಾಂಗ್ರೆಸ್ (ಐ)ನ ದುರಾಡಳಿತದ ಬಳುವಳಿ ಎಂದು ಅವರಿಗೆ ತಿಳಿದಿಲ್ಲವೇ?

-ಸೋಮನಾಥ್ ಚಟರ್ಜಿ

ಸಂದರ್ಭ ಸಹಿತ ಉತ್ತರಿಸಿ!

"ಮಾತನಾಡಬೇಕಾಗಿ ಬಂದಾಗ ಜಾತ್ಯತೀತರು ಬಾಯಿ ಮುಚ್ಚಿ ಕೂರುವುದಿಲ್ಲ. ಒಬ್ಬ ಗೋಸುಂಬೆ ವ್ಯಕ್ತಿ ನಿಜವಾದ ಜಾತ್ಯತೀತನಾಗಲಾರ"

– ಈ ಮಾತನ್ನು ಯಾವ ಮಹಾನ್ ಚಿಂತಕ ಯಾವ ಸಂದರ್ಭದಲ್ಲಿ ಉದ್ಗರಿಸಿದರು?

(ಉತ್ತರಕ್ಕೆ ಪುಟ 5 ನೋಡಿ)

ಬಂಟ್ವಾಳದಲ್ಲಿ ಕೋಮು ಸೌಹಾರ್ದತಾ ಸಭೆ

ಇತ್ತೀಚೆಗಿನ ದಿನಗಳಲ್ಲಿ ದೇಶದಲ್ಲಿ ಹೆಚ್ಚುತ್ತಿರುವ ಕೋಮು ಗಲಭೆಗಳು ಮುಗಿಲೆದ್ದು ಶಾಂತಿಯನ್ನು ಭಂಗಗೊಳಿಸುವ ಕೋಮುವಿಚಿದ್ರಕಾರಿ ಶಕ್ತಿಗಳ ಬಗ್ಗೆ ಸದಾ ಎಚ್ಚರಿಕೆಯಿಂದಿದ್ದು ಕೋಮು ಸೌಹಾರ್ದತೆಯನ್ನು ಕಾಪಾಡಿಕೊಂಡು ಬರಬೇಕೆಂದು. ತಾ: 25-1--90 ರಂದು ಬಂಟ್ವಾಳದಲ್ಲಿ ಜರುಗಿದ ಕೋಮುಸೌಹಾರ್ದತಾ ಸಭೆಯಲ್ಲಿ ಕರೆನೀಡಲಾಯಿತು.

ಬಂಟ್ವಾಳ ತಾಲೂಕು ಸಿ.ಐ.ಟಿ.ಯು ಘಟಕ ಮತ್ತು ಡಿ.ವೈ.ಎಫ್.ಐ. ಸಂಘಟನೆಗಳು ಜಂಟಿಯಾಗಿ ನಡೆಸಿದ ಕೋಮು ಸೌಹಾರ್ದತಾ ಸಭೆಯಲ್ಲಿ ಜಿಲ್ಲಾ ರೈತ, ಕಾರ್ಮಿಕ ಮುಂದಾಳು ಯು. ಜನಾರ್ಧನನ್ನಾಕೆ, ಸಿ.ಪಿ.ಐ.ಎಂ. ತಾಲೂಕು ಸಮಿತಿ ಕಾರ್ಯದರ್ಶಿ ಬಿ. ವಾಸುಗಟ್ಟಿ, ಬಿ. ಹೂವಯ್ಯ ಬಂಗೇರ, ಅಬ್ದುಲ್ ವಹಾಬ್, ಜನಾಪಿರ್‌ಸ್ಟೋರ್ಲ್ಸಿನ್ ಅಬ್ದುಲ್ ರಹಿಮಾನ್, ವಿಟ್ಲ ಎ.ರಾಮಣ್ಣ ಮೊದಲಾದವರು ಮಾತನಾಡಿ ಕೋಮು ಸೌಹಾರ್ದತೆಯನ್ನು ಯಾವ ಬೆಲೆ ತೆತ್ತಾದರೂ ಕಾಪಾಡಿ ಕೊಂಡುಬರಬೇಕೆಂದು ಜನತೆಯಲ್ಲಿ ಮನವಿ ಮಾಡಿಕೊಂಡರು.

ಡಿ.ವೈ.ಎಫ್.ಐ.ನ ತಾಲೂಕು ಘಟಕದ ಉಪಾಧ್ಯಕ್ಷ ಎಂ. ಪೂರಪ್ಪ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಬಂಟ್ವಾಳ ತಾಲೂಕು ರೈತ ಸಂಘದ ಕಾರ್ಯದರ್ಶಿ ಬಿ.ನಾರಾಯಣ ಸ್ವಾಗತಿಸಿ. ಡಿ.ವೈ.ಎಫ್.ಐ. ತಾಲೂಕು ಸಮಿತಿ ಅಧ್ಯಕ್ಷ ಜನಾರ್ಧನ ಕುಲಾಲ್ ವಂದಿಸಿದರು.

ಈ ವಾರ

★ ಅಕಾಲಿದಳದ ಉಗ್ರಗಾಮಿ ಬಣದ ಅಧ್ಯಕ್ಷರಾಗಿ ಸಿಮ್ರಾನ್‌ಜಿತ್‌ಸಿಂಗ್ ಮಾನ್ ಮುಂದುವರಿಯುತ್ತಿದ್ದರೂ, ಸಂಸತ್ ಸದಸ್ಯರ ಸಹಿತ ಪಕ್ಷದ ಹಿರಿಯ ಸಹೋದ್ಯೋಗಿಗಳು ನಾಯಕತ್ವವನ್ನು ಪ್ರಶ್ನಿಸುತ್ತಿದ್ದಾರೆನ್ನುವುದು ಬಹಿರಂಗ ರಹಸ್ಯವಾಗಿದೆ.

ಮಾನ್ ಪಂಜಾಬ್‌ನಲ್ಲಿ ಸರಕಾರಿ ಭಯೋತ್ಪಾದನೆಯನ್ನು ಖಂಡಿಸುತ್ತಾರೆ. ಆದರೆ ಕ್ರೂರತೆಯಲ್ಲಿ ಯಾವುದಕ್ಕೂ ಕಡಿಮೆಯಿಲ್ಲದ ಖಲಿಸ್ತಾನಿ ಭಯೋತ್ಪಾದನೆಯ ವಿರುದ್ಧ ಅವರು ಎಂದಿಗೂ ಒಂದು ಮಾತನ್ನೂ ಆಡಿಲ್ಲ. ಇವೆಲ್ಲ ಪಂಜಾಬ್‌ನ ಮುಖ್ಯಮಂತ್ರಿಯಾಗುವ ಕನಸನ್ನು ಈಗಲೂ ಕಾಣುತ್ತಿರುವ ವ್ಯಕ್ತಿಯೊಬ್ಬನ ದ್ವಿಮುಖ ಧೋರಣೆಯ ಸಂಕೇತವಾಗಿದೆ.

'ದಿ ಸ್ಟೇಟ್ಸ್ ಮ್ಯಾನ್' ಲೇಖನ
1-11-1990

★ ಸೆಪ್ಟೆಂಬರ್ ಆರಂಭದಿಂದ ಆರು ವಾರಗಳ ಅವಧಿಯಲ್ಲಿ ಭಾರತದ ವಿದೇಶಿ ವಿನಿಮಯ ರಿಸರ್ವ್ 1645 ಕೋಟಿ ರೂಗಳಷ್ಟು ಕುಸಿದಿದೆ. ತೈಲ ಬೆಲೆಯೇರಿಕೆಯಿಂದಾಗಿ ವಿದೇಶಿ ವಿನಿಮಯ ರಿಸರ್ವ್ ಮೇಲಿನ ಹೊರೆ ಪ್ರತಿತಿಂಗಳು 500 ಕೋಟಿ ರೂ.ಗಳಷ್ಟಾಗಿದೆ.

'ಡೆಕ್ಕನ್ ಹೆರಾಲ್ಡ್' ಸುದ್ದಿ
2-11-90

★ *1992* ರಲ್ಲಿ ನಡೆಯಲಿರುವ ಚುನಾವಣೆಗಿಂತ ಮುನ್ನ ಪ್ರಧಾನಿ ಮಾರ್ಗರೇಟ್ ಥ್ಯಾಚರ್ ರಾಜೀನಾಮೆ ನೀಡಬೇಕೆನ್ನುವುದು ಶೇಕಡ *64* ಮತದಾರರ ಅಭಿಪ್ರಾಯ.

ಥ್ಯಾಚರ್ ಕೆಲಸದ ಬಗ್ಗೆ ಕೇವಲ ಶೇ *23* ಜನರು ಮಾತ್ರ ತೃಪ್ತರಾಗಿದ್ದಾರೆ. ಬ್ರಿಟನ್‌ನ ಯಾವುದೇ ಒಬ್ಬ ಪ್ರಧಾನಿ ಇಷ್ಟು ಕಡಿಮೆ ಅಭಿಪ್ರಾಯ ಪಡೆದಿರುವುದು ಇದೇ ಮೊದಲ ಸಲವಾಗಿದೆ.

ಬ್ರಿಟನ್‌ನ 'ದಿ ಇಂಡಿಪೆಂಡೆಂಟ್'
ಅಭಿಪ್ರಾಯ ಸಂಗ್ರಹದಲ್ಲಿ

★ ಕಳೆದ ವರ್ಷ ಇದೇ ಅವಧಿಗೆ ಹೋಲಿಸಿದಾಗ 1990 ರ ಮೊದಲ ಆರು ತಿಂಗಳಲ್ಲಿ ಅಪರಾಧಗಳಲ್ಲಿ ಶೇ.38.8 ಹೆಚ್ಚಳವನ್ನು ಹಂಗೆರಿ ಪೋಲೀಸರು ದಾಖಲಿಸಿದ್ದಾರೆ. ರಾಜಧಾನಿ ಬುಡಾಪೆಸ್ಟ್‌ನಲ್ಲಿ 48,279 ಕ್ರಿಮಿನಲ್ ಕೇಸ್‌ಗಳು ತನಿಖೆ ನಡೆಯುತ್ತಿದ್ದು ಇದು ಕಳೆದ ವರ್ಷಕ್ಕಿಂತ ಶೇ 79.5 ಹೆಚ್ಚಾಗಿದೆ.

ಈ ವರ್ಷದ ಪೂರ್ವಾರ್ಧದಲ್ಲಿ ಪೋಲೆಂಡ್‌ನಲ್ಲಿ ಅಪರಾಧಗಳಲ್ಲಿ ಶೇ 69 ಹೆಚ್ಚಳ ಕಂಡುಬಂದಿದೆ. ರುಮೇನಿಯಾದಲ್ಲಿ ಆಗಸ್ಟ್ ಅಂತ್ಯದೊಳಗೆ 886 ಕೊಲೆ ಪ್ರಕರಣಗಳು ವರದಿಯಾಗಿವೆ.

'ಅಸೋಸಿಯೇಟೆಡ್ ಪ್ರೆಸ್' ವರದಿ.

ಬಳ್ಳಾರಿ ಜಿಲ್ಲೆಯಲ್ಲಿ ಜ್ಞಾನ ವಿಜ್ಞಾನ ಜಾಥಾ

ಅಕ್ಟೋಬರ್ 2 ರಂದು ಜಿಲ್ಲೆಯ ಜಾಥಾ ಬಳ್ಳಾರಿಯಿಂದ ಆರಂಭವಾಯಿತು. 8 ಕ್ಕೆ ಜಾಥಾ ಸಿರುಗುಪ್ಪತಾಲೂಕು ಪ್ರವೇಶಿಸಿತು. ಆದರೆ ವಾಹನಗಳ ತೊಂದರೆಯಿಂದಾಗಿ ಮರುದಿನ ಅಲ್ಲಿ ಕಾರ್ಯಕ್ರಮ ನಡೆಸಿತು. ತಹಸಿಲ್ದಾರ್ ಪುರುಷೋತ್ತಮ್, ಸರ್ಕಲ್‌ಇನ್ಸ್‌ಪೆಕ್ಟರ್ ಎಸ್.ಸಿರ್ಸಿ ಅಂದಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ನಾವು ವಾಸಿಸುವ ಜಗತ್ತು, ರಾಷ್ಟ್ರೀಯ ಸಮಗ್ರತೆ, ಮಹಿಳೆ ಮತ್ತು ಸಾಕ್ಷರತೆ, ಸ್ವಾವಲಂಬನೆಗಾಗಿ ಸಾಕ್ಷರತೆ, ಎಲ್ಲರಿಗೂ ಆರೋಗ್ಯ ಈ ವಿಷಯಗಳ ಮೇಲೆ ಉಪನ್ಯಾಸ, ಹಾಡುಗಳು, ನಾಟಕಗಳ ಪ್ರದರ್ಶನ ಈ ರೀತಿಯಾಗಿ, ಕಾರ್ಯಕ್ರಮಗಳನ್ನುನಡೆಸುತ್ತಾ ತಾಲೂಕಿನ ಹದಿಮೂರು ಕೇಂದ್ರಗಳಲ್ಲಿ ಜಾಥಾವನ್ನು ಪೂರೈಸಿ ಹೊಸಪೇಟೆ ತಂಡಕ್ಕೆ ಸಂಪರ್ಕ ಕಲ್ಪಿಸಿದವು. ಹೊಸಪೇಟೆ, ಹ.ಬೊ. ಹಳ್ಳಿ ಯಲ್ಲಿ ಜಾಥಾ ಮುಗಿದನಂತರ ಹೂವಿನ ಹಡಗಲಿ ತಾಲೂಕಿಗೆ ನಮ್ಮ ತಾಲೂಕಿನ ತಂಡವನ್ನು ಕೊಂಡೊಯ್ದವು.

ರಾಮಜನ್ಮಭೂಮಿ-ಬಾಬ್ರಿಮಸೀದಿ ಗಲಾಟೆಯಿಂದಾಗಿ 144 ನೇ ಸೆಕ್ಷನ್ ಜಾರಿಯಿದ್ದುದರಿಂದ ತಾಲೂಕಿನ ಕೇಂದ್ರ ಮತ್ತು ಪೋಲೀಸ್‌ಠಾಣೆಗಳಿರುವ ಕಡೆ ಪೋಲೀಸರು ಅವಕಾಶ ಕೊಡದ ಕಾರಣ 15 ಕೇಂದ್ರಗಳಿಗೆ ಬದಲಾಗಿ ಒಂಭತ್ತು ಕೇಂದ್ರಗಳಲ್ಲಿ ಕಾರ್ಯಕ್ರಮ ನಡೆಸಿದವು. ಚಂದ್ರಶೇಖರ್ ಬೆನ್ನೂರ್ ಮತ್ತು ಯು. ಬಸವರಾಜ್. (ಜಿಲ್ಲಾ ಸಂಘಟನಾ ಕಾರ್ಯದರ್ಶಿ) ರವರ ಭಾಷಣ ಪರಿಣಾಮಕಾರಿಯಾಗಿತ್ತು.

ಜಾನಪದವಾದ್ಯಗಳೊಂದಿಗೆ ಭವ್ಯ ಸ್ವಾಗತ:-

ಹೂವಿನ ಹಡಗಲಿ ತಾಲೂಕಿನ ಮಾನ್ಯರ ಮಸಲವಾಡ ಗ್ರಾಮದಲ್ಲಿ ಹಲಗೆವಾದ್ಯ, ನಂದಿಕೋಲು, ಕುಣಿತ, ಸಮಾಳ, ಭಜನೆಯೊಂದಿಗೆ ಭವ್ಯವಾಗಿ ಸ್ವಾಗತ ಮಾಡಿಕೊಳ್ಳಲಾಯಿತು. ಊರಲ್ಲಿ ಮೆರವಣಿಗೆ ಸಹ ಮಾಡಲಾಯಿತು ಆದರೆ ನಾಟಕ ನಡೆಯುತ್ತಿದ್ದಾಗ ಮಳೆ ಬಂದು ಅಲ್ಲಿಗೇ ಕಾರ್ಯಕ್ರಮ ನಿಂತು ಹೋಗಿ ಎಲ್ಲರಿಗೂ ಬೇಸರ ತರಿಸಿತು.

ಪರಿಣಾಮಕಾರಿಯಾದ ನಾಟಕ ಮತ್ತು ಹಾಡುಗಳು

ಹಾಡುಗಳು ಜನರ ಮೇಲೆ ಉತ್ತಮ ಪರಿಣಾಮವನ್ನು ಬೀರಿದವರಲ್ಲದೆ ಹಾಡುಗಳಿಗೆ ಜನ ಗುಂಪು ಗುಂಪಾಗಿ ನೆರೆಯುತ್ತಿದ್ದರು. "ಒಂದು ಪತ್ರ" ನಾಟಕದ ಕೊನೆಗೆ ಎಲ್ಲರ ಕಣ್ಣಲ್ಲೂ ನೀರೂರಿ, ಮೆಲ್ಲಗೆ ಅಳುವ ಧ್ವನಿ ಕೇಳಿ ಬರುತ್ತಿತ್ತು. ಕೆಲವೊಮ್ಮೆ ನೆರೆದ ಜನರ ಗುಂಪಿನಿಂದ ಯಾರಾದರೊಬ್ಬರು ಬಂದು ನಾಟಕದ ಮಾತಿನೊಂದಿಗೆ ತಮ್ಮ ಮಾತುಗಳನ್ನು ಸೇರಿಸುತ್ತಿದ್ದರು. ಇದರಿಂದಾಗಿ ನಾಟಕಕ್ಕೆ ತೊಂದರೆಯಾದರೂ ನಮಗೆ ಸ್ಫೂರ್ತಿಸಿಗುತ್ತಿತ್ತು. ಉತ್ತಮ ಪ್ರತಿಕ್ರಿಯೆ ಜನರಿಂದ ಮೂಡಿ ಬಂದಿದೆ.

ಹಳ್ಳಿ ಹಳ್ಳಿಗೂ ಜಾಥಾ

ಹರಪನಹಳ್ಳಿಯ ತಾಲೂಕು ಸಮಿತಿಯ ಪ್ರತಿ ಹಳ್ಳಿಹಳ್ಳಿಗೂ ಜಾಥಾ ಕಾರ್ಯಕ್ರಮವನ್ನುಹಮ್ಮಿಕೊಂಡಿದ್ದು, ಹದಿನೇಳು ಹಳ್ಳಿಗಳನ್ನು ತಲುಪುವಷ್ಟರಲ್ಲಿ ಕೋಮು ದಳ್ಳುರಿ ಜಾಸ್ತಿ ಯಾಗತೊಡಗಿದಂತೆಲ್ಲ ಪೋಲೀಸರು ಜಾಥಾವನ್ನು ಅಲ್ಲಿಗೆ ನಿಲ್ಲಿಸುವಂತೆ ತಿಳಿಸಿದರು. ಹೀಗಾಗಿ ತಾಲೂಕು ಸಮಿತಿಯಿಂದ ಹಳ್ಳಿಹಳ್ಳಿಗೂ ಹೋಗಬೇಕೆಂದಿದ್ದ ಜಾಥಾವನ್ನು ಅಲ್ಲಿಗೇ ನಿಲ್ಲಿಸಲಾಯಿತು.

ಹೆಚ್ಚಿದ ಬೇಡಿಕೆ ಬಹಳಷ್ಟು ಹಳ್ಳಿಗಳಿಂದ ಈ ಕಾರ್ಯಕ್ರಮದ ಬೇಡಿಕೆ ಬಂದಿದ್ದು ಜಾಥಾದ ನಂತರ ಕಾರ್ಯಕ್ರಮವನ್ನು ಕೊಡಲಾಗುತ್ತದೆ ಎಂದು ತಿಳಿಸಲಾಗಿದೆ.

ಹಿಂದೂ ಯುವಸೇನೆಯ ಅಬ್ಬರ-ಖಂಡನೆ

ಇತ್ತೀಚೆಗೆ ಹಿಂದೂ ಯುವಸೇನೆ ಎಂದು ಕರೆಯಲ್ಪಡುವ ಸಂಘಟನೆಯ ಕೆಲವು ಜನರುಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಛೇರಿಯು ಒಳಗೊಂಡಂತೆ ರಾಜಕೀಯ ಪಕ್ಷಗಳ ಕಛೇರಿಗೆ ಬಂದು ಜಾತ್ಯಾತೀತ ಹಾಗೂ ಅಲ್ಪ ಸಂಖ್ಯಾತರಿಗೆ ಬೆಂಬಲ ಅಥವಾ ರಕ್ಷಣೆಗಾಗಿ ಒತ್ತಾಯಿಸಿ ಹೇಳಿಕೆ ನೀಡಿದರೆ ಆ ಪಕ್ಷಗಳ ಬಗ್ಗೆ ನೋಡಿಕೊಳ್ಳುವುದಾಗಿ ಬೆದರಿಕೆ ಹಾಕಿರುವುದನ್ನು ತಾ. 5.11.90 ರಂದು ಸೇರಿದ ಸಿ.ಪಿ.ಐ. (ಎಂ) ನ ಮಂಗಳೂರು ನಗರ ಸಮಿತಿಯು ತೀವ್ರವಾಗಿ ಖಂಡಿಸಿದೆ. ಯಾವುದೇ ಪಕ್ಷದ ಧೋರಣೆ ಹಾಗೂ ಕಾರ್ಯಕ್ರಮದ ಬಗ್ಗೆ ನಿರ್ದೇಶನ ಅಥವಾ ಆದೇಶ ನೀಡಲು ಯಾರಿಗೂ ಹಕ್ಕಿಲ್ಲ. ಸಿ.ಪಿ.ಐ.(ಎಂ) ಪಕ್ಷವು ಕೋಮುವಾದವನ್ನು ಸ್ಪಷ್ಟವಾಗಿ ವಿರೋಧಿಸುತ್ತಿದ್ದು ಧರ್ಮದ ಹೆಸರಿನಲ್ಲಿ ಜನರನ್ನು ಛಿದ್ರಗೊಳಿಸುವುದನ್ನು ಖಂಡಿಸುವುದಲ್ಲದೆ ದೇಶದ ಜಾತ್ಯಾತೀತ ಸ್ವರೂಪವನ್ನು ಯಾವ ಪಕ್ಷದ ಮೇಲೆ ಒತ್ತಡ ಹೇರುವುದನ್ನು ಪಕ್ಷವು ಸಹಿಸುವುದಿಲ್ಲ ಹಾಗೂ ಪಕ್ಷದ ಪ್ರತಿ ಸದಸ್ಯರಿಗೂ ಈ ತತ್ವವನ್ನು ಎತ್ತಿ ಹಿಡಿಯಲು ಎಂತಹ ತ್ಯಾಗಕ್ಕೂ ಸಿದ್ಧರಾಗಿದ್ದಾರೆಂದು ಸಮಿತಿಯು ತಿಳಿಸುತ್ತದೆ.

ಸಂಬಂಧಪಟ್ಟ ಅಧಿಕಾರಿಗಳು ಈ ರೀತಿಯಲ್ಲಿ ಬೆದರಿಕೆ ಹಾಕಿ ಸಮಾಜದಲ್ಲಿ ಸಾಮರಸ್ಯವನ್ನು ಹಾಳು ಮಾಡಲು ಪ್ರಯತ್ನಿಸುವುದರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸಮಿತಿಯು ಒತ್ತಾಯಿಸುತ್ತದೆ.

Printed and Published by P.Ramachandra Rao on behslf of Communist Party of India (Marxist) Karnataka State Committe...
Block, Palace Guttahslli, BANGALORE-3, Phone: 366489. Editor: P. Ramachandra R...